೧೫ ಬೇಲೂರು ಸಣ್ಣ ನೀರಾವರಿ ಉಪವಿಭಾಗ
೧೬ ಕೋಲಾರ ಸಣ್ಣ ನೀರಾವರಿ ಉಪವಿಭಾಗ
೧೭ ಚಿಕ್ಕಬಳ್ಳಾಪುರ ಸಣ್ಣ ನೀರಾವರಿ ಉಪವಿಭಾಗ
೧೮ ಮುಳಬಾಗಿಲು ಸಣ್ಣ ನೀರಾವರಿ ಉಪವಿಭಾಗ
೧೯ ಬಾಗೇಪಲ್ಲಿ ಸಣ್ಣ ನೀರಾವರಿ ಉಪವಿಭಾಗ
೨೦ ಹಾಸನ ಸಣ್ಣ ನೀರಾವರಿ ಉಪವಿಭಾಗ
೨೧ ಕೊಪ್ಪ ಸಣ್ಣ ನೀರಾವರಿ ಉಪವಿಭಾಗ
೨೨ ಸಾಗರ ಸಣ್ಣ ನೀರಾವರಿ ಉಪವಿಭಾಗ
೨೩ ಚೆನ್ನಗಿರಿ ಸಣ್ಣ ನೀರಾವರಿ ಉಪವಿಭಾಗ
೨೪ ಮಧುಗಿರಿ ಸಣ್ಣ ನೀರಾವರಿ ಉಪವಿಭಾಗ
೨೫ ಕಾರವಾರ ಸಣ್ಣ ನೀರಾವರಿ ಉಪವಿಭಾಗ
೨೬ ಶಿರ್ಸಿ ಸಣ್ಣ ನೀರಾವರಿ ಉಪವಿಭಾಗ
೨೭ ಹೊನ್ನಾವರ ಸಣ್ಣ ನೀರಾವರಿ ಉಪವಿಭಾಗ

ಸಭೆಯ ಮುಂದಿಡಲಾದ ಕಾಗದ ಪತ್ರಗಳು

೧. ಶ್ರೀ ಎ. ಲಕ್ಷ್ಮೀಸಾಗರ್ (ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳ ಪರವಾಗಿ). –

೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ ಇವರ ೧೯೮೪–೮೫ನೇ ಸಾಲಿನ ವಾರ್ಷಿಕ ವರದಿಯನ್ನು ಕಂಪನಿಯ ಕಾರ್ಯಗಳ ಬಗ್ಗೆ ಟಿಪ್ಪಣಿಯೊಂದಿಗೆ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

೨. ಶ್ರೀ ಜೆ. ಎನ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂವಿಜ್ಞಾನ ಮಂತ್ರಿ)....ಅವರು ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ ಕರ್ನಾಟಕ ಗೇರು ಅಭಿವೃದ್ಧಿ ನಿಗಮದವರ ೧೯೮೩–೮೪ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ನಿಲುವಳಿ ಸೂಚನೆ

ಮಂಡಲ ಪಂಚಾಯಿತಿಗೆ ಹಿಂದುಳಿದ ವರ್ಗದವರನ್ನು ನಾಮಕರಣ ಮಾಡುವಾಗ ವಿಳಂಬವಾಗಿರುವುದು,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿಯವರು).—ಜನತಾ ಸರಕಾರ ಪಕ್ಷದ ಒತ್ತಡಕ್ಕೆ ಒಳಗಾಗಿ ರಾಜ್ಯದಲ್ಲಿನ ಎಲ್ಲಾ ಮಂಡಲ ಪಂಚಾಯತಿಗಳಿಗೂ ಇಬ್ಬರು ಸದಸ್ಯರುಗಳನ್ನು ಸರಕಾರ ಅಥವಾ ಜಿಲ್ಲಾ ಪರಿಷತ್ತುಗಳ ಮುಖಾಂತರ ನಾಮಕರಣ ಮಾಡಿಸುವ ತುರಾತುರಿಯಲ್ಲಿರುವ ವಿಷಯ ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಹಿಂದುಳಿದ ವರ್ಗಗಳಿಗೆ ಸೇರಿದವರ ಹೆಸರಿನಲ್ಲಿ ಅಧಿಕಾರದಲ್ಲಿರುವ ಜನತಾ ಸರಕಾರ ಪಕ್ಷದವರನ್ನು ಮಾತ್ರ ಮಂಡಲ ಪಂಚಾಯತಿಗಳಿಗೆ ನಾಮಕರಣ ಮಾಡುವ ಸನ್ನಾಹದಲ್ಲಿದೆ. ಸರಕಾರದ ಈ ತಂತ್ರ ಸಂಪೂರ್ಣವಾಗಿ ಪ್ರಜಾ ಪ್ರಭುತ್ವ ನೀತಿ, ಚುನಾವಣಾ ನೀತಿ ಮತ್ತು ಎಲ್ಲಾ ಮೌಲ್ಯಗಳನ್ನೂ ಗಾಳಿಗೆ ತೂರುವ ವಿಷಯವಾಗಿದೆ. ಅಲ್ಲದೆ ನಾಮಕರಣಕ್ಕೆ ಸಂಬಂಧ ಪಟ್ಟಂತೆ " ಹಿಂದುಳಿದ ವರ್ಗದವರು " ಯಾರು ಎನ್ನುವುದು ಈಗಾಗಲೇ ಸರಕಾರಿ ಆಜ್ಞೆಯಲ್ಲಿರುವುದರಿಂದ ಮತ್ತು ಅದರ ಪ್ರಕಾರ ಯಾರನ್ನೂ ನಾಮಕರಣ ಮಾಡುವ ಹಕ್ಕು

ಸರಕಾರಕ್ಕೆ ಇಲ್ಲದಿರುವಾಗ ನಿಯಮಾವಳಿಗಳನ್ನು ಪುನಃ ತಿದ್ದುಪಡಿ ಮಾಡಿ ಗ್ರಾಮೀಣ ಪ್ರದೇಶ ಕುಶಲ ಕರ್ಮಿಗಳು ಮತ್ತು ವ್ಯವಸಾಯ ಕೂಲಿಕಾರರು ಎನ್ನುವ ಪದವನ್ನು ಹೊಸದಾಗಿ ಸೃಷ್ಟಿಸಿರುವುದು ಅ ನೀತಿಯುತವಾಗಿದೆ. ಅಲ್ಲದೆ " ಹಿಂದುಳಿದಿರುವವರು " ಯಾರು ಎನ್ನುವ ಪದದ ಅರ್ಥದ ವ್ಯಾಖ್ಯಾನವನ್ನು ತಿದ್ದುಪಡಿ ಮಾಡಿರುವ ರಾಜ್ಯ ಪತ್ರದ ಅಧಿಸೂಚನೆ (ಗೆಜೆಟ್ ನೋಟಿಫಿಕೇಶನ್) ೨೫-೨-೮೭ರ ದಿನಾಂಕವನ್ನು ಹೊಂದಿದ್ದಾಗ್ಯೂ ಈಗ್ಗೆ ೩ ದಿನಗಳ ಹಿಂದೆ ಮಾತ್ರ ಅದು ಪ್ರಕಟವಾಗಿದೆ. ಅದರಲ್ಲಿ ತಿದ್ದುಪಡಿಗೆ ತಕರಾರುಗಳನ್ನು ಸೂಚಿಸುವವರಿಗೆ ೧೫ ದಿನಗಳ ಕಾಲಾವಕಾಶವನ್ನು ಕೊಟ್ಟಿದ್ದು ಇದು ಶಾಸಕಾಂಗದ ಮತ್ತು ಕರ್ನಾಟಕದ ಜನತೆಯನ್ನು ಮೋಸ ಮಾಡುವ ಕೃತ್ಯವಾಗಿದೆ, ಕಾರಣ ರಾಜ್ಯ ಪತ್ರದ ಅಧಿಸೂಚನೆ ಪ್ರಕಟವಾದಾಗ ಮೇಲ್ಕಂಡ ಕಾಲಾವಕಾಶ ಇಡಲಿಲ್ಲ, ಇದನ್ನು ಉದ್ದೇಶ ಪೂರ್ವಕವಾಗಿಯೇ ಮಾಡಲಾಗಿದೆ. ಕಾನೂನು ಪ್ರಕಾರ ಚುನಾವಣೆಯ ನಂತರದ ನಾಲ್ಕು ವಾರಗಳಲ್ಲಿ ಪ್ರಧಾನ ಮತ್ತು ಉಪ ಪ್ರಧಾನ ಚುನಾವಣೆಯೂ ಸೇರಿದಂತೆ ಮಂಡಲ ಪಂಚಾಯತಿಗಳು ರಚನೆಯಾಗ ಬೇಕಾಗಿದ್ದು. ಸರಕಾರದ ಇತ್ತೀಚಿನ ಆದೇಶದ ಪ್ರಕಾರ ನಾಮಕರಣ ಮಾಡಿದ ನಂತರವೇ ಪ್ರಧಾನ ಹಾಗೂ ಉಪ ಪ್ರಧಾನ ಚುನಾವಣೆ ಮಾಡಬೇಕಾಗಿದೆಯೆಂದು ಸರಕಾರದ ಸುತ್ತೋಲೆಯ ಮೂಲಕ ಜಿಲ್ಲಾಧಿಕಾರಿಗಳಿಗೆ ತಿಳಿಸಿರುವುದು ಕಾನೂನು ಬಾಹಿರವಾಗಿದೆ. ಈ ಎಲ್ಲ ಕಾರಣಗಳಿಂದ ಅಲ್ಲದೆ, ಇತ್ತೀಚೆಗೆ ನಡೆದ ಮಂಡಲ ಪಂಚಾಯತಿ ಮತ್ತು ಜಿಲ್ಲಾಪರಿಷತ್ ಚುನಾವಣೆಗಳಲ್ಲಿ ಜನತೆ ನೀಡಿರುವ ತೀರ್ಪಿಗೆ ವಿರುದ್ಧವೂ ಆಗಿದೆ. ಇದೆಲ್ಲವೂ ಹೆಚ್ಚಿನ ಮಂಡಲ ಪಂಚಾಯತಿಗಳನ್ನು ಜನತಾ ಪಕ್ಷದ ಕರೆಯೊಳಗೆ ತರುವ ಅನೈತಿಕ ಕೃತ್ಯವೂ ಆಗಿದೆ. ಆದ್ದರಿಂದ ಸರಕಾರದ ಈ ಕೃತ್ಯ ಜರೂರು, ಸಾರ್ವಜನಿಕ ಪ್ರಾಮುಖ್ಯತೆ ಮತ್ತು ಇಡೀ ಜನತಂತ್ರಕ್ಕೆ ವಿರುದ್ಧವಾಗಿರುವುದರಿಂದ ಈ ಸೂಚನೆಯನ್ನು ಕೊಡಲಾಗಿದೆ.

SRI VEDANTHA HEMMIGE.—I am on a point of erder on the adjournment motion itself. (Interriptions) I want the speaker to permit me to raise the point of order.

(Interruption)

ಈ ಸದನದ ಜಿಲ್ಲಾ ಪರಿಷತ್ತು ಕಾನೂನನ್ನು ಒಪ್ಪಿದೆ. ರಾಷ್ಟ್ರಪತಿಗಳ ಅಂಗೀಕಾರವೂ ಅದಕ್ಕೆ ದೊರಕಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ಕ್ರಿಯಾ ಲೋಪ ಆಗುವುದಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಅವರು ನಮ್ಮ ನಾಯಕಿಯರು, ಅವರೇ ಅಡ್ಡ ಬಂದರೆ ನಾನು ಹೇಗೆ ಮಾತನಾಡುವುದು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಕತ್ತಲೆಯಲ್ಲಿದ್ದರೆ ನಾನೇನು ಮಾಡಲಿ ?

ಶ್ರೀ ವೇದಾಂತ ಹೆಮ್ಮಿಗೆ.—ಇದರಲ್ಲಿ ಇಬ್ಬರು ಸದಸ್ಯರನ್ನು ನಾಮಕರಣ ಮಾಡಲು ಜಿಲ್ಲಾ ಪರಿಷತ್ತುಗಳಿಗೆ ಒಪ್ಪಿಗೆ ಕೊಟ್ಟಿರುವುದೂ ಸೇರಿದೆ.

—ಗದ್ದಲ—

ಅಧ್ಯಕ್ಷರು.—ಇದು ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ, ತಾವು ಕುಳಿತುಕೊಳ್ಳಿ ಹೇಳುತ್ತೇನೆ.

—ಗದ್ದಲ—

ಶ್ರೀ ವೇದಾಂತ ಹೆಮ್ಮಿಗೆ.—ಈ ಕಾನೂನಿಗೆ ತಿದ್ದುಪಡಿ ತರಬೇಕೇ ವಿನಹ ನಿಲುವಳಿ ಸೂಚನೆ ಮೂಲಕ ಇದನ್ನು ಚರ್ಚೆ ಮಾಡುವ ಅವಕಾಶ ಇಲ್ಲ.

—ಗದ್ದಲ—

ತಾವು ಈ ನಿಲುವಳಿ ಸೂಚನೆಗೆ ಅವಕಾಶ ಕೊಟ್ಟರೆ ಈ ಸದನವೇ ಯಾವ ಕಾನೂನನ್ನು ಅಂಗೀಕರಿಸಿತೋ ಅದಕ್ಕೇ ವಿರುದ್ಧವಾಗಿ ಹೋಗುವ ಅವಕಾಶ ಕೊಟ್ಟ ಹಾಗಾಗುತ್ತದೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಮತಿ ಕೆ ಎಸ್. ನಾಗರತ್ನಮ್ಮ.—ತಾವು ಶಕ್ತರಿದ್ದೀರಿ ಇದಕ್ಕೆ ಅಪ್ಪಣೆ ಕೊಡಬೇಕೋ ಇಲ್ಲವೋ ಎಂದು ಹೇಳುವುದಕ್ಕೆ, ನಾವು ಹೇಳುವುದನ್ನು ಹೇಳುತ್ತೇವೆ ಅದನ್ನು ತಾವು ಲಾಲಿಸಿ, ನಾವು ನಿಮ್ಮನ್ನು ಕನ್‌ವಿನ್ಸ್ ಮಾಡಿದರೆ ....

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ಹೇಗೆ ಇರುತ್ತದೆಂದರೆ ಮಂತ್ರಿಗಳ ಮತ್ತು ಸದಸ್ಯರ ಅಭಿಪ್ರಾಯವನ್ನು ನಾನು ಕೇಳುತ್ತೇನೆ. ನಂತರ ಅದನ್ನು ರಿಜಕ್ಟ್ ಮಾಡ ಬೇಕಾಗುತ್ತದೆ ಇಲ್ಲವೇ ಒಪ್ಪಿಕೊಳ್ಳ ಬೇಕಾಗುತ್ತದೆ.

—ಗದ್ದಲ—

ಶ್ರೀ ಎಂ. ರಘುಪತಿ.—ಇದಕ್ಕೆ ಅಡ್ಜರ್ನ್‌ಮೆಂಟ್ ಮೋಷನ್ ತರುವ ಅಗತ್ಯವಿಲ್ಲ.

—ಗೊಂದಲ—

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರಾದ ಶ್ರೀ ಹೆಮ್ಮಿಗೆಯವರು...........

SRI M. RAGHUPATHY.—Sir of you permit this motion it will be bad precedent.

—ಗೊಂದಲ—

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ಹಕ್ಕು ಭಾದ್ಯತೆ ಏನಿದೆ ಎಂದು ನಮಗೆ ಗೊತ್ತಿದೆ.

—ಗೊಂದಲ—

ಅಧ್ಯಕ್ಷರು.—ನಾನು ಇನ್ನೂ ರೂಲಿಂಗ್ ಅನ್ನು ಕೊಟ್ಟಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಅಡ್ಜರ್ನ್‌ಮೆಂಟ್ ಮೋಷನ್.........

—ಗೊಂದಲ—

ಶ್ರೀ ಧರ್ಮಸಿಂಗ್.—ಮಾನ್ಯ ರಘುಪತಿಯವರು ಏನೋ ಹೇಳಿದರು.

—ಗೊಂದಲ—

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಕೇಳೋಣ ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ ಮಾನ್ಯ ಮಂತ್ರಿಗಳನ್ನು ಕೇಳಿ ಆ ಮೇಲೆ ರೂಲಿಂಗ್ ಕೊಡ ಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ನಿಲುವಳಿ ಸೂಚನೆಯನ್ನು ತರಬೇಕಾದರೆ ಆ ಘಟನೆ ಅತ್ಯಂತ.........

—ಗೊಂದಲ—

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಬ್ಲಿಕ್ ಇಂಪಾರ್ಟೆನ್ಸ್ ಏನು ಇದೆ ಎಂದು ....

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲವೆಂದು ಹೇಳಿಲ್ಲ ಇನ್ನೂ ರೂಲಿಂಗ್ ಕೊಟ್ಟಿಲ್ಲ ಅವರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿಷಯವನ್ನು ಪ್ರಸ್ತಾಪ ಮಾಡಿ ಪಬ್ಲಿಕ್ ಇಂಪಾರ್ಟೆನ್ಸ್ ಇದೆಯೋ ಇಲ್ಲವೋ, ಡೆಫೆನೆಟ್ ಇಷ್ಯೂ ಇದೆಯೋ ಇಲ್ಲವೋ ಎಂಬುದನ್ನು ಕೇಳಿದ ಮೇಲೆ ಅವರು ಹೇಳಲಿ, ಅಲ್ಲಿಯವರೆಗೆ ನಮಗೆ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಬಿ. ರಾಚಯ್ಯ.—ಈ ಕಾಯಿದೆಯು ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದ್ದು ಇದಕ್ಕೆ ಒಪ್ಪಿಗೆ ಕೂಡ ನೀಡಿದೆ ಅಲ್ಲದೆ, ರಾಷ್ಟ್ರಪತಿಗಳ ಒಪ್ಪಿಗೆ ಕೂಡ ಕೊಟ್ಟಿದೆ, ಇದು ಹೊಸ ವಿಷಯವೇನೂ ಅಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ರೀತಿಯಾಗಿ ತೊಂದರೆಯಾಗಿದೆ ಎಂಬುದನ್ನು ಹೇಳುತ್ತೇವೆ ಆಮೇಲೆ ತಾವು ಉತ್ತರ ಕೊಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಹೇಳುವುದನ್ನು ಕೇಳಲಿಕ್ಕೆ...

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ ಅವಕಾಶ ಮಾಡಿಕೊಟ್ಟರೆ, ಈಗ ತಾವು ಮಾನ್ಯ ವಿರೋಧ ಪಕ್ಷದ ನಾಯಕಿಯವರಿಗೆ ನೋಟೀಸ್ ಅನ್ನು ಓದಲು ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಸರಕಾರಕ್ಕೆ ಅದು ಗೊತ್ತಾಗಬೇಕೋ ಬೇಡವೋ,

ಶ್ರೀ ಎಂ. ಎಸ್. ಕೃಷ್ಣನ್.—ಒಳ್ಳೆಯ ಕೆಲಸ ಮಾಡಿದ್ದೀರಿ ನಾನು ಸರಿಯಲ್ಲವೆಂದು ಹೇಳಲಿಲ್ಲ. ನಿಯಮದ ಪ್ರಕಾರ ಏನಿದೆ ಎಂದರೆ,

> "63 (1) The Speaker, if he gives consent under rule 60 and holds that the matter proposed to be discussed is in order, shall after the qustions and before the list of business is entered upon, call the member concerned who shall raise in his place and ask for leave to move the adjournment of the House :
>
> Provided that where the Speaker has refused his consent under rule 59 or is of his opinion that the matter proposed to be discussed is not in order, he may, if he thinks it necessary, read the notice of motion and state the reasons for refusing consent or holding the motion as not being in order :
>
> Provided further that where the Speaker is not in possession of full facts about the matter mentioned therein, he may before giving or refusing his consent read the notice of the motion and hear from the Minister and/or members concerned a brief statement of facts and then give his decision on the admis-sibility of the motion."

ಇದು ಈಗ ಬಹಳ ಮುಖ್ಯವಾದುದು. ತಾವು ಇದರ ಬಗ್ಗೆ ಏನೂ ತೀರ್ಮಾನ ಮಾಡಿಲ್ಲ. ಮೋಷನ್‌ಗೆ ಒಪ್ಪಿಗೆ ಕೊಡಬೇಕೇ ಬೇಡವೇ ಎನ್ನುವುದರ ಬಗ್ಗೆ ತಾವು ಇನ್ನು ಏನೂ ತೀರ್ಮಾನ ಮಾಡಿಲ್ಲ. ತಾವು ಫ್ಯಾಕ್ಟ್ಸನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ವಿರೋಧ ಪಕ್ಷದ ನಾಯಕಿಯವರು ನೋಟೀಸನ್ನು ಓದಿದರು. ಫ್ಯಾಕ್ಟ್ಸನ್ನು ಪೂರ್ತಿಯಾಗಿ ಹೇಳಿಲ್ಲ. ಪೂರ್ತಿಯಾಗಿ ಹೇಳುವುದಕ್ಕಿಂತ ಮುಂಚೆಯೇ ರಘುಪತಿಯವರು ಎದ್ದು ನಿಂತು ಅವರು ಹೇಳುವುದಕ್ಕೇ ಅಧಿಕಾರ ಇಲ್ಲ. ಅದು ಸರಿಯಾದುದು ಅಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ರಘುಪತಿಯವರು ರೂಲ್ಸ್ ಆಫ್ ಪ್ರೊಸೀಜರನ್ನು ಓದಿಲ್ಲ. ಓದದೇ ಹೇಳುತ್ತಿದ್ದಾರೆ. ಅವರ ಇವತ್ತಿನ ದಿವಸ ದಯವಿಟ್ಟು, ಅವರು ಪೂರ್ತಿಯಾಗಿ ಹೇಳುವುದಕ್ಕೆ ಅವಕಾಶ ಕೊಡಬೇಕು. ಪೂರ್ತಿ ಹೇಳಿದನಂತರ ಮಾನ್ಯ ಮಂತ್ರಿಗಳವರು ಹೇಳಬೇಕು, ಆನಂತರ ತಾವು ತೀರ್ಮಾನಕ್ಕೆ ಬರಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಕೃಷ್ಣನ್‌ರವರು ಏನು ವಿಧಿನಿಯಮಗಳನ್ನು ಸದನದ ಗಮನಕ್ಕೆ ತಮ್ಮ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡಿದರೋ ಅವರು ನಿಲುವಳಿ ಸೂಚನೆಯ ಬಗ್ಗೆ ಯಾವ ಯಾವ ರೀತಿಯಲ್ಲಿ ನಾವು ನಡೆದುಕೊಳ್ಳಬೇಕು ಎನ್ನತಕ್ಕಂಥ ವಿಧಿನಿಯಮವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಲಾಗಿದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕಿಯವರು ಒಂದು ಕಾಲದಲ್ಲಿ ಸಭಾಧ್ಯಕ್ಷರಾಗಿ ಕೆಲಸಮಾಡಿದ್ದಾರೆ. ಅವರಿಗೆ ಎರಡೂ ಅನುಭವ ಇದೆ. ಒಂದು ಲೆಜಿಸ್ಲೇಟೀವ್ ಮೆಂಬರ್ಸ್‌ನಲ್ಲಿ ನಾವು ಏನು ಈಗ ಈ ಸದನದ ಒಂದು ಕಾನೂನನ್ನು ಮಾಡಿದೆಯೋ ಆ ಕಾನೂನಿನಲ್ಲಿ ಕೆಲವು ತಿದ್ದುಪಡಿ ಬರತಕ್ಕಂಥ ವಿಷಯದ ಬಗ್ಗೆ, ಅದು ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರುತ್ತದೋ, ಇಲ್ಲವೋ ಎನ್ನತಕ್ಕಂಥದ್ದನ್ನು ತೀರ್ಮಾನ ಮಾಡತಕ್ಕಂಥದ್ದಕ್ಕೆ ಇಲ್ಲಿ ಚರ್ಚೆಗೆ ಅವರ ಕಡೆಯಲ್ಲಿ ಅಭಿಪ್ರಾಯ ಹೇಳಿ, ಈ ಸರ್ಕಾರದ ಅಭಿಪ್ರಾಯವನ್ನು ಹೇಳಿ ನಂತರ ತೀರ್ಮಾನ ಮಾಡುವುದು.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಹೇಳಿದಂದ್ದು ನಿಯಮದ ಸಲುವಾಗಿ ಅಲ್ಲ, ಕಾನೂನು ವಿರುದ್ಧವಾಗಿ ಕೆಲಸ ಮಾಡಿದಂಥ......

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಪಾಟೀಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಅಕ್ಷೇಪ ಏನೆಂದರೆ ಯಾವ ಒಂದು ಈ ಸದನ ಇಂಥ ಒಂದು ಮಸೂದೆಗೆ ಅಂಗೀಕಾರ ಕೊಟ್ಟಿತ್ತೋ ಅದರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡತಕ್ಕಂಥದ್ದರ ಬಗ್ಗೆ ಸರ್ಕಾರ ಪ್ರವೇಶವ ಮಾಡಿದೆ ಎಂದು ಹೇಳಿದರೆ ಈ ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರುತ್ತದೆ ಇಲ್ಲವೇ ? ಎನ್ನತಕ್ಕಂಥದ್ದು ಬಹುಶಃ ಸನ್ಮಾನ್ಯ ವಿರೋಧ ಪಕ್ಷದ ನಾಯಕಿಯರಿಗೆ ಗೊತ್ತಿದೆ. ಅವರು ಆ ಜಾಗದಲ್ಲಿ ಕುಳಿತು ಆರು ವರ್ಷ ಕೆಲಸ ಮಾಡಿದ್ದಾರೆ. ಆದ್ದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ ಮತ್ತು ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ಈ ಸದನದ ಕಾರ್ಯಕಲಾಪಗಳನ್ನು ಇದಕ್ಕೋಸ್ಕರ ಮುಂದೂಡತಕ್ಕಂಥದ್ದು ಅಷ್ಟು ಗ್ರಾಸವಾಗುತ್ತದೆ ಎಂದು ಹೇಳುವುದಾದರೆ ನಾನು ನನ್ನ ಮಾತನ್ನು ನಿಲ್ಲಿಸುತ್ತೇನೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಮೀಟಿಂಗ್ ಕರೆಯಬೇಕಾದ್ದನ್ನು ಕರೆದಿಲ್ಲ. ಅದರ ಸಲುವಾಗಿ ಈ ನಿಲುವಳಿ ಸೂಚನೆ ಇದೆ......

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನು ಸರ್ಕಾರದ ಗಮನಕ್ಕೆ ನಿಲುವಳಿ ಸೂಚನೆ ಮೂಲಕ ತರಬೇಕಾದ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಧರ್ಮಸಿಂಗ್.—ಈ ಪಂಚಾಯಿತಿ ಚುನಾವಣೆ ಮಾಡಿದ್ದೇವೆ ಎಂದು......

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ.—ಈ ಸದನದಲ್ಲಿ ವಿರೋಧ ಪಕ್ಷದವರು ಹೇಳಲಿಕ್ಕೆ ಅವಕಾಶಗಳನ್ನು ಮೊಟಕು ಮಾಡತಕ್ಕಂಥದ್ದು ಸರ್ಕಾರಕ್ಕೆ, ಆಗಲೀ ಪಕ್ಷಕ್ಕೆ ಆಗಲೀ ಇಚ್ಛೆ ಇಲ್ಲ. ಇವೊತ್ತು ನಮ್ಮ ನಿಯಮಗಳಲ್ಲಿ ಹಲವಾರು ರೀತಿಯಾದಂಥ ಅವಕಾಶಗಳು ಇದೆ.

೧೨–೩೦ ಪಿ. ಎಂ.

ನಾವು ಕೇಳುವುದಕ್ಕೆ ಕುಳಿತಿದ್ದೇವೆ. ಆದರೆ ಇದನ್ನು ನಿಳುವಳಿ ಸೂಚನೆ ರೂಪದಲ್ಲಿ ತೆಗೆದುಕೊಳ್ಳತಕ್ಕದ್ದು ಸರಿಯಲ್ಲ ಎನ್ನುವ ಮಾತನ್ನು ಸನ್ಮಾನ್ಯ ರಘುಪತಿ ಅವರು ಹೇಳಿದರು. ಚರ್ಚೆಗೆ ಅವಕಾಶವನ್ನು ಕೊಡಬೇಡಿ ಎಂದು ನಾವು ಹೇಳಲಿಲ್ಲ. ಚರ್ಚೆ ಮಾಡಿ, ಇದರ ಬಗ್ಗೆ ಯಾವುದೇ ವಿರೋಧ ಇಲ್ಲ. ಆದರೆ ಈ ವಿಷಯವನ್ನು ಕೇಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಅದಕ್ಕೋಸ್ಕರ ಮತ್ತೆ ಮಾತನಾಡುವುದಕ್ಕೆ ಅವಕಾಶ ಇಲ್ಲ ಎಂದು. ಇಂತಹ ನಿಲುವಳಿ ಸೂಚನೆ ಮೂಲಕ ನಾವು ಇಲ್ಲಿ ಏನು ಹೇಳಬಹುದು ಎಂಬುದನ್ನು ಸ್ಪಷ್ಟವಾಗಿ ರೂಲ್ ನಂಬರ್ ೬೧ರಲ್ಲಿ ಹೇಳಲಾಗಿದೆ. ಯಾವುದನ್ನು ತೆಗೆದುಕೊಳ್ಳುತ್ತೇವೆಂದು ಅದರಲ್ಲಿ ಹೇಳಲಾಗಿದೆ. ಇದರಲ್ಲಿ ಏನು ಹೇಳಲಾಗಿದೆ ಎಂದರೆ :

"The right to move the adjournment of the House for the purpose of discussing a definite matter of public inportance shall be subject to following restrictions, namely ; (i) not more than one such motion shall be at the same sitting, (ii) not more than one matter shall be discussed on the same motion, (iii) the motion shall be restricted to a specific matter of recent occurrence......

Sri M. Raghupathy.—That is what exactitly I pointed out.

ಶ್ರೀ ಎಂ. ಎಸ್. ಕೃಷ್ಣನ್.—ನಾನೂ ಒಬ್ಬ ಸದಸ್ಯ. ಈ ವಿಚಾರವನ್ನು ತೀರ್ಮಾನ ಮಾಡುವವರು ಯಾರು ? ತೀರ್ಮಾನ ಮಾಡುವುದಕ್ಕೆ ತಮಗೆ ಹಕ್ಕು ಇದೆ ಎಂದು ಮಾನ್ಯ ರಘುಪತಿಯವರು ಹೇಳಿದರು. ಅವರಿಗೆ ಯಾವ ಹಕ್ಕು ಇದೆ ಎಂದು ನಾನು ಕೇಳುತ್ತೇನೆ. ತಾವು ನಮ್ಮ ಅಭಿಪ್ರಾಯ ಕೊಡಿ ಎಂದು ಕೇಳಬಹುದು. ಅದನ್ನು ಸ್ಪಷ್ಟವಾಗಿ ತೀರ್ಮಾನ ಮಾಡುವುದಕ್ಕೆ ತಮಗೆ ಸಾಧ್ಯ ಆಗಬಹುದು. ಈ ಮನೆ ಅದನ್ನು ಮಾಡಲು ಒಪ್ಪಿಕೊಳ್ಳಬಹುದು. ಇದರಿಂದ ಉದ್ಭವಿಸುವ ಅನೇಕ ತೊಂದರೆಗಳಿಂದಾಗಿ ಪ್ರಜಾಪ್ರಭುತ್ವದಲ್ಲಿ ಹೊಣೆಗಾರರು ಯಾರು ? ಆದುದರಿಂದ ಈ ಸಲುವಳಿ ಸೂಚನೆಗೆ ಅವಕಾಶ ಕೊಡಬಹುದು. ಪೂರ್ತಿ ವಿಚಾರ ಇನ್ನೂ ಮಾಡಿಲ್ಲ. ಮಾನ್ಯ ರಘುಪತಿಯವರು ಮಾತನ್ನು ಸಮಂಜಸ, ಅದು ಸಮರ್ಥ ಎಂದು ದೇವೇಗೌಡರು ಹೇಳಿದ್ದಾರೆ.

SRI R. VENKATARAMAIAH.—Sir, according to Kaul and Shakdher, an adjournment motion to be admissible must possess the following essential elements.—

"Generally speaking, the subject-matter of an adjournment motion must have direct or indirect relation to the conduct or default on the part of the Government of India and must be in nature of the criticism of the action of the Government of India either for having done some action or for having ommited to do some action which was urgently necessary at the moment.

An adjournment motion is deemed to have been duly made after leave of the House to move it has been granted.

Ordinarily the object of a motion for adjourning the business of the Assembly is to discuss and criticize the conduct or attitude of the Government in a definite matter of urgent public importance..."

ಇಷ್ಟು ಸ್ವಾಮಿ ಅವರು ಹೇಳಿರುವುದು. ವಿರೋಧ ಪಕ್ಷದ ನಾಯಕಿಯವರು ಏನು ಹೇಳಿದ್ದಾರೆ, ಈಗ ನೀವು ಬಂದು ಲ್ಯಾಪ್ಸ್ ಮಾಡಿದ್ದೀರಿ. ಆಕ್ಟ್‌ನಲ್ಲಿ ಇಬ್ಬರನ್ನೂ ನಾಮಿನೇಟ್ ಮಾಡುವುದಕ್ಕೆ ಒಂದು ಅಧಿಕಾರ ಲ್ಯಾಪ್ಸ್ ಆಗಲಿಲ್ಲ. ಅದಕ್ಕೋಸ್ಕರ ನಿಳುವಳಿ ಸೂಚನೆ ಅವಶ್ಯಕವೆಂದು ಹೇಳಿದ್ದಾರೆ. It is as per law. I don't think he has gone out of the way. It has to be admitted.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಯಾವ ಅರ್ಥದಲ್ಲಿ ಎಂದರೆ ರೂಲ್ '೫೩ ಮತ್ತು ೬೧' ರಲ್ಲಿ ಸ್ಪಷ್ಟವಾಗಿದೆ. A motion shall not revive the matter which has been discussed in the same session.

SMT. K. S. NAGARATHNAMMA.—What I am thinking to say has not been discussed.

(Interruption)

ಅಧ್ಯಕ್ಷರು.—ಸ್ವಲ್ಪ ದಯವಿಟ್ಟು ಕೇಳಿ, ಎಂ. ಎಸ್. ಕೃಷ್ಣನ್‌ರವರೇ ಸ್ವಲ್ಪ ಕೇಳಿ.

AN HON. MEMBER.—Can we go on saying anything on record ? The subject is not at all discussed.

SRI K. H. SRINIVAS.—Sir, I raise to a Pcint of Order......

ಶ್ರೀ ಎಂ. ರಘುಪತಿ.—ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ ಈ ವಿಷಯವನ್ನು ಆಗಲೇ ತೀರ್ಮಾನ ಮಾಡಲಾಗಿದೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.- ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆಯನ್ನು ತಮ್ಮ ಮುಂದೆ ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ತಾವು ಸ್ವೀಕಾರ ಮಾಡುವುದಕ್ಕೆ ಅರ್ಹವಾಗಿದೆ ಎಂದು ತಮ್ಮನ್ನು ಒಪ್ಪಿಸುವುದಕ್ಕೆ ಮತ್ತು ಸದನದ ನಾಯಕರಾಗಿ ಈ ಹೊತ್ತಿನಲ್ಲಿ ನಿಲುವಳಿ ಸೂಚನೆ ಎಂದು ಮಂಡಿಸಲು ತಾವು ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು.— ಇವರು ಅವರು ಮಾತನಾಡುತ್ತಿದ್ದಾರೆ. ನಾನು ತೀರ್ಮಾನ ಕೊಟ್ಟಿಲ್ಲ. I have to see whether there is prima facie or not.

ಶ್ರೀ ಕೆ. ಎಚ್. ಶ್ರೀನಿವಾಸ್.—ನೀವು ತೀರ್ಮಾನ ಕೊಡುವುದಕ್ಕೆ ಮುಂಚಿತವಾಗಿ ಮಾನ್ಯ ಕೃಷ್ಣನ್ ಅವರು ಹೇಳಿದಂತೆ whether this motion is in order ಎಂದು ಒಂದು ಮಾತನ್ನು ಹೇಳಿದ್ದಾರೆ.

ಮಾನ್ಯ ಮಂತ್ರಿಗಳು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇದರ ಬಗ್ಗೆ ಯಾರಾದರೂ ಬೇರೆ ಮಾತನಾಡುತ್ತಿದ್ದರೆ, ಯಾವುದಾದರೊಂದು ವಿಧಿ, ನಿಯಮಗಳಿಗನುಸಾರವಾಗಿ ಮಾತನಾಡುತ್ತಿದ್ದಾರೆಯೋ ? ಪಾಯಿಂಟ್ ಆಫ್ ಆರ್ಡರ್‌ನಂತೆ ಬೇರೆ ಬೇರೆ ಯಾರು ಬೇಕಾದರೂ ಕೇಳುವುದಕ್ಕೆ ಅಧಿಕಾರ ಇದೆಯೋ ? ನಿಮ್ಮ ಜ್ಞಾನಾಭಿವೃದ್ಧಿ ದೃಷ್ಟಿಯಿಂದ ಅಥವಾ ನಮ್ಮ ಜ್ಞಾನಾಭಿವೃದ್ಧಿ ದೃಷ್ಟಿಯಿಂದ ಮಾತನಾಡುವುದಕ್ಕೆ ಅವಕಾಶ ಕೊಡಬಹುದು, ಅವರಿಗೆ ಅವಕಾಶ ಕೊಡುವುದಕ್ಕೆ ಮುಂಚೆಯೇ ನೀವು ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶ ನೀಡುವುದು ಸರಿಯಲ್ಲ. ಮೊದಲು ಅವರಿಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಅವರು ಎತ್ತಿ ಇತರರು ಅವರಿಗೆ ಮಾತನಾಡಲು ಅವಕಾಶ ಕೊಡಬಾರದು ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ರಘುಪತಿ.—ಯಾವುದೇ ರೀತಿಯಲ್ಲಿ ಒತ್ತಾಯ ಮಾಡಿದರೆ ಮಾತ್ರ ಅವಕಾಶ ಕೊಡಬಾರದು. ಸಾಮಾನ್ಯವಾದ ವಿಷಯಗಳಿಗೆ ನೀವು ಮಾತನಾಡುವುದಕ್ಕೆ ಅವಕಾಶ ಕೊಡುವುದು ಸರಿಯಲ್ಲ.

ಅಧ್ಯಕ್ಷರು.—ಶ್ರೀನಿವಾಸ್‌ರವರೇ, ಅವರು ಏನು ಹೇಳುತ್ತಾರೆಂದರೆ, whether there is any prima facie case or not ಎನ್ನುವುದನ್ನು ಹೇಳುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತಿದ್ದಾರೆ ಯಾವ ಕ್ರಿಯಾಲೋಪವನ್ನು ಉಪಯೋಗಿಸಿಕೊಂಡು ಶ್ರೀನಿವಾಸ್ ಅವರು ಈ ವಿಷಯವನ್ನು ಎತ್ತಿದ್ದಾರೋ ಅಂಥಾ ಅಧಿಕಾರವನ್ನೇ ಉಪಯೋಗಿಸಿಕೊಂಡು ಶ್ರೀಮಾನ್ ಹೆಮ್ಮಿಗೆಯವರು

ಪ್ರಸ್ತಾಪ ಮಾಡಿದ್ದಾರೆ. ಇದು ಗಮನ ಸೆಳೆಯುವ ಸೂಚನೆಯೇ ಆಗಿಲ್ಲ. ಈ ವಿಷಯ ನಿಲುವಳಿ ಸೂಚನೆಯ ವಿಷಯವೇ ಆಗಿಲ್ಲವೆನ್ನುವುದು ಅವರ ಅಭಿಪ್ರಾಯ. ಅದನ್ನು ಅವರು ವಿಸ್ತರಿಸಿ, ಶ್ರೀಮಾನ್ ರಘುಪತಿ ಅವರು ಎತ್ತಿರುವ ವಿಷಯವನ್ನು ಮಾನ್ಯ ದೇವೇಗೌಡರು ಸಮರ್ಥಿಸಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ರಘುಪತಿ ಅವರ ಅಭಿಪ್ರಾಯ ಏನೆಂದರೆ ಇದನ್ನು ಗಮನ ಸೆಳೆಯುವ ಸೂಚನೆ ಮಾಡುವುದಕ್ಕೆ ಬರುವುದಿಲ್ಲ. ಬಹುಶಃ ಅವರು ಆತುರಾತುರವಾಗಿ ಹೇಳಿದ್ದಾರೆ.

(ಗೊಂದಲ)

ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ನಾವು ಮಾತನಾಡಬೇಕಾಗುತ್ತದೆ. ಆದರೆ ಪಾಯಿಂಟ್ ಡಿಸ್ಕಷನ್ ಆದಂತೆ ಆಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಎಲ್ಲೋ ಅವರಿಗೊಂದು ಕನಸು ಬಿದ್ದಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ ನನಗೆ ಎಲ್ಲಾ ಗೊತ್ತಿದೆ. ಅವರಿಗೆ ಕನಸಿನ ಭ್ರಮೆ ಇದೆ. ಆ ಭ್ರಮೆಗಳನ್ನೆಲ್ಲಾ ಇಲ್ಲಿ ಬರೆದಿದ್ದಾರೆ. ಆ ಭ್ರಮೆಗಳೆಲ್ಲಾ ಒಂದು ಪಕ್ಷದ ಲಾಭನಷ್ಟ ಆಗದು. ಶಾಸನದಿಂದ ಅದು ಸಾಧ್ಯವಾಗುವುದಿಲ್ಲ. ಶಾಸನಗಳೆಲ್ಲಾ ಬೇರೆ. ಈ ವಿಷಯ ಹೊಸ ವಿಷಯವಲ್ಲ. ಇದು ಆಗಲೇ ಈ ಸಭೆಯಲ್ಲಿ ಚರ್ಚೆಯಾಗಿದೆ, ಆದ್ದರಿಂದ ಇದಕ್ಕೆ ಈಗ ಅವಕಾಶ ಕೊಡಕೂಡದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಕೂಸು ಹುಟ್ಟುವ ಮೊದಲೇ ಕುಲಾವಿಯನ್ನು ಹಾಕಿದಂತೆ. ಆದರೆ ಹುಟ್ಟುವ ಕೂಸು ಗಂಡೋ, ಹೆಣ್ಣೋ ಮತ್ತು ಅದರ ಗಾತ್ರ ಎಷ್ಟು ಎಂಬುದನ್ನು ತಿಳಿದ ನಂತರ ತಾನೇ ಕುಲಾವಿಯನ್ನು ಹಾಕಬೇಕು......

(ಗೊಂದಲ)

ಅಧ್ಯಕ್ಷರು.—ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೇಳುವುದನ್ನು ಕೇಳುವುದಕ್ಕೆ ಎದುರು ಪಕ್ಷದವರಿಗೆ ಇಷ್ಟವಿಲ್ಲ...

(ಗೊಂದಲ)

ಅಧ್ಯಕ್ಷರು.—ಪ್ರೈಮಾಫೇಸಿ ಕೇಸ್ ಇದೆಯೋ ಇಲ್ಲವೋ ಎಂದು ಕೇಳಿದ್ದೀರಿ, ಅದಕ್ಕೆ ಅವಕಾಶ ವಿಲ್ಲವೆಂದು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಏನು ಹೇಳುತ್ತಿದ್ದೀರಿ, ನಾನು ಆಗಲೇ ಹೇಳಿದೆ ಇನ್ನೂ ರೂಲಿಂಗ್ ಕೊಟ್ಟಿಲ್ಲ ಎಂದು...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಹೇಳುವುದಕ್ಕೆ ಅವಕಾಶ ಕೊಡಿ...

ಅಧ್ಯಕ್ಷರು.—ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ...

(ಗೊಂದಲ)

ಶ್ರೀ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಕೋಳಿವಾಡ್‌ರವರು ಏನೋ ಹೇಳಬೇಕೆಂದಿದ್ದಾರೆ ಅದನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನಾನು ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಇನ್ನೂ ರೂಲ್ ೬೯ರಲ್ಲಿ ಇದ್ದೇವೆ.

(ಗೊಂದಲ)

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ. ನಾನು ರೂಲಿಂಗ್ ಕೊಟ್ಟಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ನಜೀರ್ ಸಾಬ್‌ರವರು ಏನು ಹೇಳತ್ತಾರೋ, ಅದನ್ನು ಕೇಳೋಣ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಪ್ರೈಮಾಫೇಸಿಯಾಗಿ ನಾವು ಹೇಳುವುದಕ್ಕೆ ಅವಕಾಶ ಇರಬೇಕು...

(ಗೊಂದಲ)

SRI ABDUL NAZIR SAB.—Mr. Speaker...

(Interruption)

MR. SPEAKER.—Nothing will go on record. ಈ ತರಹ ಎಲ್ಲರೂ ನಿಂತರೆ ಸಭೆ ನಡೆಸುವುದಕ್ಕಾಗುವುದಿಲ್ಲ.

SRI K. H. PATIL.—Sir, the Government has failed in holding elections within 4 weeks from the date of elections. ಇದು ಮುಖ್ಯವಾದ ಪ್ರಶ್ನೆ. ಇದರ ಬಗ್ಗೆ ಮೊದಲೇನಾದರೂ ಚರ್ಚೆಯಾಗಿದ್ದರೆ, ಅದರಲ್ಲಿ ನಮ್ಮದೇನಾದರೂ ತಪ್ಪು ಇದ್ದರೆ ನಾವು ತಿದ್ದಿಕೊಳ್ಳುತ್ತೇವೆ.

(Interruption)

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಪ್ರಶ್ನೆಯನ್ನು ಯಾವ ವಿಷಯಕ್ಕಾಗಿ ಎತ್ತಿರುವುದ ಎನ್ನುವುದು ಈ ನೋಟೀಸ್‌ನಲ್ಲಿ ಏನು ಇದೆ ಅದರ ಬಗ್ಗೆ ಈಗಾಗಲೇ ಈ ಸದನದಲ್ಲಿ ಚರ್ಚೆಯಾಗಿ ಅದಕ್ಕೆ ಉತ್ತರವನ್ನೂ ಸಹ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಇದರ ಬಗ್ಗೆ ಯಾವ ರೀತಿಯಾಗಿ ಮಾಡಿದ್ದೀರಿ ಎನ್ನುವುದು ನಮಗೆ ಬಂದಿರುವ ಟೆಲೆಕ್ಸ್ ಮೆಸೇಜ್‌ನಲ್ಲಿ ಇದೆ, ನೋಡಿ....

(Interruption)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಈ ರೀತಿ ಮಾಡುತ್ತಾ ಇದ್ದೀರಿ ಈ ದೇಶದ ಸ್ವತ್ತು ನಿಮ್ಮದೇನು ? Why should you become so emotional ?

(Interruption)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಅಬ್ದುಲ್ ನಜೀರ್ ಸಾಹೇಬರು ಈ ವಿಷಯು ಈ ಮನೆಯಲ್ಲಿ ಹಲವಾರು ಬಾರಿ ಚರ್ಚೆಯಾಗಿದೆ, ಚರ್ಚೆಯಾಗಿರುವುದನ್ನೇ ಮತ್ತೊಂದು ಸಾರಿ ಚರ್ಚೆ ಮಾಡುವುದು ಸರಿಯಲ್ಲ ಎನ್ನುವ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಚರ್ಚೆಯಾದ

ವಿಷಯವನ್ನೇ ಮತ್ತೆ ಚರ್ಚೆ ಮಾಡಬೇಕೇ, ಬೇಡವೇ ಎನ್ನುವುದರ ಬಗ್ಗೆ ಶಕ್ದರ್ ಅಂಡ್ ಕೌಲ್ ಪುಸ್ತಕದಲ್ಲಿ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದನ್ನು ಓದುತ್ತೇನೆ. ದಯವಿಟ್ಟು ಕೇಳಿ. ಅದು ಈ ರೀತಿ ಇದೆ.—

> "The motion should not revive discussion on a matter which has been discussed in the same Session.
>
> An adjournment motion on a matter which is substantially identical with the one already raised by an adjournment motion consent to the moving of which has been withheld by the Speaker or leave of the House to the moving of which has been refused during the same session, is not in order. Similarly, a matter already discussed by the House cannot be revived during the same session by way of an adjournment motion unless anything new has arisen which warrants interruption of the normal business of the House"

It says 'unless there is anything new'. If something new has arisen then, of course, it can be allowed. Whether a new thing has arisen will be informed by the hon. Leader of Opposition and others. Therefore, I request the Hon. Speaker to hear the Members of opposition as to what they are going to say about the new thing. If there is something new kindly permit them to move the adjournment motion.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ರೂಲ್ ೬೯ ಏನು ಇದೆ ಅದು ಸ್ಪಷ್ಟವಾಗಿದೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಈ ರೀತಿ ಇದೆ.

> "If the Speaker is satisfied, after calling for such information from the member who had given notice and from the Minister as he may consider necessary, that the matter is urgent and is of sufficient importance to be raised in the House at an early date, he may admit the notice..." ಎಂದು ಇದೆ.

ಆದುದರಿಂದ ಇದರ ಬಗ್ಗೆ ಮೊದಲು ಶ್ರೀಮತಿ ಕೆ. ಎಸ್ ನಾಗರತ್ನಮ್ಮ ಅವರ ಅಭಿಪ್ರಾಯ ಕೇಳಬೇಕು, ಆನಂತರ ಮಂತ್ರಿಗಳಿಂದ ಅವರ ಅಭಿಪ್ರಾಯ ಕೇಳಬೇಕು. ಆನಂತರ ತಾವು ಇದರ ಬಗ್ಗೆ ರೂಲಿಂಗ್ ಕೊಡಬೇಕು. ರೂಲ್ ೬೯ರ ಪ್ರಕಾರ ಮೊದಲು ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ತಾವು ಅವಕಾಶ ಕೊಡಬೇಕು.

ಶ್ರೀ ಎಂ. ರಘುಪತಿ.— ನಾವು ಇನ್ನೂ ನಿಯಮ ೬೧ರಲ್ಲಿಯೇ ಇದ್ದೇವೆ. ಮಾನ್ಯ ವೆಂಕಟರಾಮಯ್ಯನವರು ಹೇಳಿದಂತೆ ನಾವು ಇನ್ನೂ ನಿಯಮ ೬೯ಕ್ಕೆ ಹೋಗಿಲ್ಲ. ಇದರ ಜೊತೆಗೆ ಈ ವಿಷಯ ಇಲ್ಲಿ ಈಗಾಗಲೇ ಒಂದೆರಡು ಸಲ ಚರ್ಚೆಯಾಗಿದೆ ಮತ್ತು ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮಾನ್ಯ ನಜೀರ್ ಸಾಬ್ ಅವರು ಇದೇ ವಿಚಾರದಲ್ಲಿ ಇಲ್ಲಿ ಅಮೆಂಡ್‌ಮೆಂಟ್‌ಗಳನ್ನು ತಂದಾಗಲೂ ಸಹ ಇದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಈ ಕಾರಣದಿಂದ ಈ ನಿಲುವಳಿ ಸೂಚನೆಯನ್ನು ನಿಮ್ಮ ಛೇಂಬರ್‌ನಲ್ಲಿಯೇ ಡಿಸ್-ಅಲೋ ಮಾಡಬಹುದಾಗಿತ್ತು. ಕೇವಲ ರಾಜಕೀಯ ಉದ್ದೇಶದಿಂದ ಈ ನಿಲುವಳಿ ಸೂಚನೆಯನ್ನು ತಂದಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದನ್ನು ತಾವು ಅಲೋ ಮಾಡಬಾರದಾಗಿತ್ತು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ಮಾತನ್ನು ಅಧ್ಯಕ್ಷರು ಹೇಳಬಹುದೇ ಹೊರತು ಮಾನ್ಯ ಸದಸ್ಯರಿಗೆ ಆ ರೀತಿ ಹೇಳಲು ಹಕ್ಕಿಲ್ಲ.

ಶ್ರೀ ಎಂ. ರಘುಪತಿ.—ನಾನು ಮಾನ್ಯ ಅಧ್ಯಕ್ಷರಿಂದ ಈ ಬಗ್ಗೆ ರೂಲಿಂಗ್ ಕೇಳುತ್ತಿದ್ದೇನೆಯೇ ಹೊರತು ವಿರೋಧ ಪಕ್ಷದ ನಾಯಕರಿಂದ ನಾನು ರೂಲಿಂಗ್ ಕೇಳುತ್ತಿಲ್ಲ. ಈ ಸದನವನ್ನು ನಡೆಸುವವರು ಅಧ್ಯಕ್ಷರೇ ಹೊರತು ಬೇರೆಯವರಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನು ಅಲೋ ಮಾಡಬಾರದಾಗಿತ್ತು ಎಂದು ಅವರು ತಪ್ಪು ಭಾವನೆಯಿಂದ ಹೇಳುತ್ತಿದ್ದಾರೆ. ಈ ರೀತಿ ಹೇಳುವಂತಹ ಅಧಿಕಾರ ಅವರಿಗೆ ಇಲ್ಲ.

(ಗೊಂದಲ)

ಅಧ್ಯಕ್ಷರು.—ನನಗೆ ಛೇಂಬರ್‌ನಲ್ಲಿಯೇ ಇಂಥಾದ್ದನ್ನು ರಿಜೆಕ್ಟ್ ಮಾಡುವ ಅಧಿಕಾರ ಇದೆ. ಅಲ್ಲಿ ಸಾಧ್ಯವಾಗದಿದ್ದರೆ ಇಲ್ಲಿ ಎರಡು ಕಡೆಯವರ ವಾದವನ್ನು ಕೇಳಿದ ನಂತರ ರಿಜೆಕ್ಟ್ ಮಾಡಬಹುದು. ನಿಲುವಳಿ ಸೂಚನೆಯನ್ನು ರಿಜೆಕ್ಟ್ ಮಾಡಿ ಬೇರೆ ನಿಯಮದ ಪ್ರಕಾರ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡುವ ಅಧಿಕಾರ ಸಹ ನನಗೆ ಇದೆ. ಆದರೆ ಈಗ ಈ ಮೂರನ್ನು ಸಹ ಮಾಡಲು ನಾನು ಹೋಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಅಲೋ ಮಾಡಬಾರದಾಗಿತ್ತು ಎಂದು ನಿಮಗೆ, ಮಾನ್ಯ ರಘುಪತಿ ಅವರು ಹೇಳಿದ್ದಾರೆ, ಅದು ಸರಿಯೇ ?

ಅಧ್ಯಕ್ಷರು.—ಅವರು ಇದಕ್ಕೆ ಅವಕಾಶ ಮಾಡಿಕೊಡಬಾರದಾಗಿತ್ತು ಎಂದು ಹೇಳಿದ್ದಾರೆ. ಇಂಥಾದ್ದನ್ನು ನನ್ನ ಛೇಂಬರ್‌ನಲ್ಲಿ ರಿಜೆಕ್ಟ್ ಮಾಡುವ ಅಥವಾ ಬಿಡುವ ಅಧಿಕಾರ ನನಗೆ ಸೇರಿದ್ದುದು.

ಅಧ್ಯಕ್ಷರು.—ಈಗ ಮಾನ್ಯ ದೇವೆಗೌಡರು ಸರ್ಕಾರದ ಪರವಾಗಿ ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಜಿ. ಎಂ. ಕಾನಡೆ.—ವಿರೋಧಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಡದೆ ತಾವು ಅವರನ್ನು ಕರೆದಿದ್ದು ಸರಿಯಲ್ಲ. ಈ ರೀತಿಯಾದರೆ ನಮಗೆ ರೂಲ್ಸ್ ಏತಕ್ಕೆ ಬೇಕು ?

ಅಧ್ಯಕ್ಷರು.—ನಾನು ಈಗ ಅವರನ್ನು ಕರೆದಿದ್ದೇನೆ. ಅವರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ತಾವು ಸನ್ಮಾನ್ಯ ವಿರೋಧ ಪಕ್ಷದ ನಾಯಕಿ ಅವರು ಮತ್ತು ಹಲವಾರು ವಿರೋಧ ಪಕ್ಷದ ಗೌರವಾನ್ವಿತ ಸದಸ್ಯರು ಸಹಿ ಮಾಡಿರುವಂತಹ ಈ ನಿಲುವಳಿ ಸೂಚನೆಯನ್ನು ಇಲ್ಲಿ ಓದುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದು ತಪ್ಪು ಎಂದು ವಾದ ಮಾಡುವುದಕ್ಕೆ ನಾನು ಹೋಗುತ್ತಿಲ್ಲ. ಈ ವಿಷಯವನ್ನು ನಿಲುವಳಿ ಸೂಚನೆ ಮೂಲಕ ಇಲ್ಲಿ ತೆಗೆದುಕೊಳ್ಳುವುದಕ್ಕೆ ಮತ್ತು ಅದರ ಬಗ್ಗೆ ಇಲ್ಲಿ ಇಲ್ಲಿ ಬೆಳಕು ಚೆಲ್ಲುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಹೇಳಿದರು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಅವರು ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿ ಪ್ರಸ್ತಾಪ ಮಾಡಿರುವುದನ್ನು ಉಲ್ಲೇಖ ಮಾಡಿ ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕಿ ಅವರು ಈ ಸದನದಲ್ಲಿ ೬ ವರ್ಷಗಳ ಕಾಲ ಅಧ್ಯಕ್ಷೆಯಾಗಿ ಕೆಲಸ ಮಾಡಿದಾರೆ

(ಗೊಂದಲ)

೧-೦೦ ಪಿ. ಯಂ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಇನ್ನೂ ಏನನ್ನೂ ಎಕ್ಸ್‌ಪ್ಲೈನ್ ಮಾಡಲಿಲ್ಲ. ನಾನು ಅಧ್ಯಕ್ಷೆಯಾಗಿದ್ದಾಗ ಅವರು ಇಲ್ಲಿದ್ದಾಗ ಎಷ್ಟೋ ಸಾರಿ ಅಡ್ಜರ್ನ್‌ಮೆಂಟ್ ಮೋಷನ್ ಎತ್ತಿದ್ದಾರೆ, ನಾನು ಕೇಳಿದ್ದೇನೆ. ನಾನು ಈಗ ಎಕ್ಸ್‌ಪ್ಲೈನ್ ಮಾಡುವುದಕ್ಕೆ ಮುಂಚೆ ಪಾಯಿಂಟ್ ಆಫ್ ಎತ್ತಿದರೆ ಹೇಗೆ ?

(ಗೊಂದಲ)

ಶ್ರೀ ಎಚ್. ಡಿ. ದೇವೇಗೌಡ.— ನಾನು ಏನು ಹೇಳುತ್ತಿದ್ದೇನೆಂದರೆ, ಈ ಸದನವೇ ನಿರ್ಣಯ ಮಾಡಿದಂಥ ಒಂದು ಶಾಸನ, ಅದಕ್ಕೆ ತತ್ಸಂಬಂಧವಾಗಿ ಹೊರಡಿಸಿರತಕ್ಕಂಥ ನೋಟಿಫಿಕೇಷನ್ ಇವತ್ತು ನಿಲುವಳಿ ಸೂಚನೆಯ ವಿಧಿಬಿಂದುವನ್ನು ಆಕರ್ಷಣ ಮಾಡುತ್ತದೆಯೋ ಎನ್ನುವ ಪ್ರಶ್ನೆ ನಮ್ಮ ಮುಂದಿರತಕ್ಕಂಥಾದ್ದು. ವಿಷಯದ ಚರ್ಚೆ ಬಗ್ಗೆ ನೀವು ಬೇರೆ ಬೇರೆ......

(ಗೊಂದಲ)

SRI K. H. PATIL.— Failure of the Government to hold election.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಲ್ಪ ಕೇಳಿ, ನಾನು ಮತ್ತೊಮ್ಮೆ ಉಚ್ಚಾರ ಮಾಡುತ್ತೇನೆ. ಈ ಸದನ ಮಾಡಿರತಕ್ಕಂಥ ಒಂದು ಶಾಸನದ ವ್ಯಾಪ್ತಿಯಲ್ಲಿ ಒಂದು ನೋಟಿಫಿಕೇಷನ್ ತೆಗೆಯುವ ಅಧಿಕಾರವನ್ನು ಸರ್ಕಾರಕ್ಕೆ ಸದನ ಕೊಟ್ಟಿದೆ. ಈ ಒಂದು ನೋಟಿಫಿಕೇಷನ್ ಬಗ್ಗೆ ಇಲ್ಲಿ ಉದಾಹರಿಸಿದ್ದಾರೆ. ಅದರ ಬಗ್ಗೆ ಮುಂದೆ ಬರುತ್ತೇನೆ. ಇದು ನಿಲುವಳಿ ಸೂಚನೆಯ ವಿಧಿಬಿಂದುವನ್ನು ಆಕರ್ಷಣ ಮಾಡುತ್ತದೆಯೋ ಎನ್ನುವುದು ಪ್ರಶ್ನೆ. ಸ್ವಾಮಿ, ಇಲ್ಲಿ ತಾವು ಯಾವ ವಿಷಯಗಳನ್ನು ಅಳವಡಿಸಿದ್ದೀರಿ, ನಾವೇ ನಿಯಮಿಸಿರತಕ್ಕಂಥ ನಿಯಮ ೬೧ರ ವ್ಯಾಪ್ತಿಯಲ್ಲಿ ನಾನು ಮಾತನಾಡುತ್ತೇನೆ ಬೇರೆ ಯಾವುದಾದರೂ ಒಂದು ವಿಷಯಕ್ಕೆ ಸೀಮಿತವಾಗಿರತಕ್ಕಂಥ ವಿಚಾರ ನಿಲುವಳಿ ಸೂಚನೆ ಪ್ರಕಾರ ಪ್ರಕಾರ ಚರ್ಚೆಗೆ ಬರಬೇಕು ಎಂದು ಹೇಳಿದ್ದಾರೆ. ಇದರೊಳಗೆ ಒಂದು ವಿಷಯ ಇದೆ.

(ಗೊಂದಲ)

SRI M. MALLIKARJUNA KHARGE.-She has not explained what is it.

ಶ್ರೀ ಹೆಚ್. ಡಿ. ದೇವೇಗೌಡ.— ನಾನು ಇನ್ನೂ ನನ್ನ ಮಾತನ್ನು ಮುಗಿಸಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರು ಮೆರಿಟ್ ಮೇಲೆ ಎಕ್ಸ್‌ಪ್ಲೈನ್ ಮಾಡುತ್ತಾ ಇದ್ದಾರೆ. ಅವರು ಪಾಯಿಂಟ್‌ಗೆ ಬರುತ್ತಾ ಇದ್ದಾರೆ. ಇದರ ಬಗ್ಗೆ ಹೇಳುವುದಕ್ಕೆ ನಮಗೆ ಅವಕಾಶ ಕೊಟ್ಟಿಲ್ಲ. He is reading the adjournment motion notice. and telling.

ಅಧ್ಯಕ್ಷರು.— ಪ್ರೈಮಾಫೇಸಿ ಎಂದು ನೋಡಲಿಕ್ಕೆ ಅವಕಾಶ ಕೂಡ ಕೊಡಬಾರದು ಎಂದು ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.— ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ. ಅವರು ಏನು ಹೇಳುತ್ತಾರೋ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಏಕೆ ಕೇಳಬೇಕು ?

(ಗೊಂದಲ)

ಅಧ್ಯಕ್ಷರು.— ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ, ತೀರ್ಮಾನಕ್ಕೆ ಬಂದಿಲ್ಲ, ಪ್ರೈಮಾಫೇಸಿ ಹೌದು ಇಲ್ಲ ಎಂತಲೂ ಹೇಳಲಿಲ್ಲ, ಬೇರೆ ರೀತಿಯಲ್ಲಿ ಇದಕ್ಕೆ ಅವಕಾಶ ಕೊಡಬೇಕು ಎಂದೂ ಹೇಳಲಿಲ್ಲ, ಅಥವಾ ರಿಜೆಕ್ಟ್ ಮಾಡುತ್ತೇನೆ ಎಂದೂ ಹೇಳಲಿಲ್ಲ. ಅವರು ಸೀನಿಯರ್‌ಮೋಸ್ಟ್ ಮಿನಿಸ್ಟರ್ ಇದ್ದಾರೆ, ಅವರು ಸರ್ಕಾರದ ಪರವಾಗಿ ಹೇಳುತ್ತಾರೆ, ಕೇಳಿ ಸ್ವಲ್ಪ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅವರು ಪಾಯಿಂಟ್ ಹೇಳುತ್ತಾ ಇದ್ದಾರೆ.

ಅಧ್ಯಕ್ಷರು.— ನಾನು ನಿಮ್ಮನ್ನೂ ಕೇಳಬೇಕು, ಅವರನ್ನೂ ಕೇಳಬೇಕು ಕೇಳದೇ ರೂಲಿಂಗ್ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಈಗ ನೋಟಿಸ್ ಕೊಟ್ಟ ಮೇಲೆ ಎಕ್ಸ್‌ಪ್ಲೈನ್ ಮಾಡಬೇಕು, ಎಕ್ಸ್‌ಪ್ಲೈನ್ ಮಾಡಿದ ನಂತರ ಇದಕ್ಕೆ ಯೋಗ್ಯತೆ ಇದೆ ಅಥವಾ ಇಲ್ಲ......

ಅಧ್ಯಕ್ಷರು.— ನಿಮಗೆ ಎಕ್ಸ್‌ಪ್ಲೈನ್ ಮಾಡುವುದಕ್ಕೆ ಅವಕಾಶ ಕೊಡಬಾರದು ಎನ್ನುವುದು ಅವರ ವಾದ. ನಿಮಗೆ ಅವಕಾಶ ಕೊಡಬೇಕೆ ಅಥವಾ ಕೊಡಬಾರದೇ ಎನ್ನುವುದಕ್ಕೆ ನಾನು ರೂಲಿಂಗ್ ಕೊಡುತ್ತೇನೆ, ಅವರು ಹೇಳಲಿ ಸ್ವಲ್ಪ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಿಮಗೆಲ್ಲಾ ಗೊತ್ತಿಲ್ಲ......

ಅಧ್ಯಕ್ಷರು.— ಶ್ರೀಮತಿ ನಾಗರತ್ನಮ್ಮನವರೇ ನಿಮಗೆ ಅವಕಾಶ ಕೊಡಬಾರದು ಎಂದು ಹೇಳಲಿಕ್ಕೆ ಹತ್ತಿದ್ದಾರೆ. ಅವಕಾಶ ಕೊಡಬಾರದು, ಪ್ರೀಮಾಫೇಸಿ ಎನ್ನುವುದಕ್ಕೆ ಹೇಳುತ್ತಾ ಇದ್ದಾರೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ಇದಕ್ಕೆ ಅವಕಾಶ ಕೊಡಬೇಕು ಅಥವಾ ಕೊಡಬಾರದು ಎನ್ನುವುದರ ಬಗ್ಗೆ ತೀರ್ಮಾನ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ನೀವು ಹೇಳುವುದನ್ನು ಕೇಳುತ್ತೇನೆ ನನಗೆ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಪಾಯಿಂಟೂ ಇಲ್ಲ. ಆರ್ಡರೂ ಇಲ್ಲ.

ಅಧ್ಯಕ್ಷರು.— ಅವರು ಏನು ಹೇಳುತ್ತಾರೆಂಬುದನ್ನು ಮೊದಲು ಕೇಳಿ. ಪ್ರೀಮಾಫೇಸಿ ಏನಿದೆ ಎನ್ನುವುದನ್ನು ನೋಡಬೇಡವೇ ? ಅಡ್ಜರ್ನ್‌ಮೆಂಟ್ ಮೋಷನ್ ಅಲೋ ಮಾಡುವುದು ರಿಜೆಕ್ಟ್ ಮಾಡುವುದರ ಬಗ್ಗೆ ನಾನು ಕೇಳುವುದು ಬೇಡವೇ ? ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ......

ಶ್ರೀ ಹೆಚ್. ಡಿ. ದೇವೇಗೌಡ.— ನಾನು ಇನ್ನೂ ಮಾತನಾಡಿಯೇ ಇಲ್ಲ......

ಶ್ರೀ ಎಸ್. ಬಂಗಾರಪ್ಪ.— ನೀವು ಹೇಳುವುದಕ್ಕೆ ಅಡ್ಡಿ ಬರಬೇಕೆಂಬ ಉದ್ದೇಶ ಇಲ್ಲ. ಮಾನ್ಯ ದೇವೇಗೌಡರು ಬಹಳ ಈ ವರ್ಷಗಳ ಅನುಭವವುಳ್ಳವರು......

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ, ಅವರು ಏನು ಹೇಳುತ್ತಾರೆ ಕೇಳಿ......

ಶ್ರೀ ಹೆಚ್. ಡಿ. ದೇವೇಗೌಡ.— ನಾನು ಒಂದು ಸೆಕೆಂಡಿನಲ್ಲಿ ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ನಾನು ಒಂದೇ ಒಂದು ವಿಷಯ ಹೇಳುತ್ತೇನೆ.

ಅಧ್ಯಕ್ಷರು.— ಬೇಡ, ಅವರು ಮುಗಿಸಲಿ.

ಶ್ರೀ ಎಸ್. ಬಂಗಾರಪ್ಪ.— ಇವರನ್ನು ಕೇಳಿದ್ದೀರಿ, ಅಡ್ಜರ್ನ್‌ಮೆಂಟ್ ಮೋಷನ್ ದೇವೇಗೌಡರು ಕಳುಹಿಸಿದ್ದಾರೋ, ನಜೀರ್ ಸಾಬರು ಕಳುಹಿಸಿದ್ದಾರೋ, ರಾಚಯ್ಯನವರು ಕಳುಹಿಸಿದ್ದಾರೋ ? ನಿಲುವಳಿ ಸೂಚನೆ ಯಾರು ಕಳುಹಿಸಿದ್ದಾರೆ. ಅವರ ಅಭಿಪ್ರಾಯವನ್ನು ತಾವು ಕೇಳಬೇಕೆ ಹೊರತು ಇವರನ್ನಲ್ಲ.

ಅಧ್ಯಕ್ಷರು.— ಅವರನ್ನು ಕರೆದಿದ್ದೇನೆ ಹೇಳಲಿ...

ಶ್ರೀ ಎಸ್. ಬಂಗಾರಪ್ಪ.— ನಿಲುವಳಿ ಸೂಚನೆ ಯಾರು ಕಳುಹಿಸಿಕೊಟ್ಟಿದ್ದಾರೆ, ಅವರು ಪೂರ್ವಭಾವಿಯಾಗಿ ವಿಚಾರಗಳನ್ನು ಅಭಿಪ್ರಾಯಗಳನ್ನು ಹೇಳಬೇಕಾಗುತ್ತದೆ. ಅದು ಅಡ್ಮಿಟಾದ ಮೇಲೆ ಬೇರೆ ವಿಚಾರ.

ಅಧ್ಯಕ್ಷರು.— ಅವರು ಏನು ಹೇಳುತ್ತಾರೋ ಕೇಳಿ...

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ದೇವೇಗೌಡರ ಮಾತು ಕೇಳಬಾರದೆಂದು ನಾನು ಹೇಳುತ್ತಿಲ್ಲ.

ಅಧ್ಯಕ್ಷರು.— ಪ್ರೈಮಾಫೇಸಿ ಕೇಸ್ ಇದೆಯೋ, ಇಲ್ಲವೇ ಎಂದು ಕೇಳಬೇಡವೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಪ್ರೈಮಾಫೇಸಿ ಇದೆಯೋ ಇಲ್ಲವೇ ಎಂದು ಹೇಳ ಬೇಕಾದವರು ಯಾರು ? ನಾನು ಇನ್ನೂ ಕೂಡ ಏನೂ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಪ್ರೈಮಾಫೇಸಿ ಇದೆಯೋ ಇಲ್ಲವೋ ಎನ್ನುವುದನ್ನು ಯಾರು ನೋಟೀಸ್ ಕೊಟ್ಟಿದ್ದಾರೋ ಅವರು ಹೇಳಿದ ಮೇಲೆ, ಅವರು ಇಲ್ಲ ಎನ್ನತಕ್ಕ ಮಾತನ್ನು ಹೇಳಲಿ. ಈ ಕಡೆ ಕೇಳದೆ, ಅವರು ಹೇಳುವುದನ್ನು ಮಾತ್ರ ಕೇಳಿದರೆ, ಇದು ಯಾವ ನ್ಯಾಯ, ಇದು ಒಳ್ಳೆಯದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ನೋಟೀಸ್ ನೋಡಿಕೊಂಡು ಎಕ್ಸ್‌ಪ್ಲೇನ್ ಮಾಡುತ್ತಿದ್ದಾರೆ. ಅವರು ಮೊದಲೇ ಮೆರಿಟ್ ಮತ್ತು ರೀ ಮೆರಿಟ್ ಬಗ್ಗೆ ಹೇಳಿದರೆ ಹೇಗೆ ? ಅವರು ನೋಟೀಸ್ ನೋಡಿಕೊಂಡು ಇಂಥಿಂಥಾದ್ದು ಇದೆ, ಪಾರ್ಟಿ ಮೇಲೆ ದೂರು ಮಾಡ ಲಾಗಿದೆಯೆಂದು ವಿವರಣೆ ಕೊಡುತ್ತಿದ್ದಾರೆ.........

ಅಧ್ಯಕ್ಷರು.—ನಾನು ನನ್ನ ಛೇಂಬರ್‌ನಲ್ಲಿಯೇ ರೂಲಿಂಗ್ ಕೊಡಬಹುದಿತ್ತು. ಇಲ್ಲಿ ರೂಲಿಂಗ್ ಕೊಡಬೇಕಾದುದು ಒಳ್ಳೆಯ ಸಂಪ್ರದಾಯ ಎಂದು ಇಲ್ಲಿ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ನಾನು ಎರಡೂ ಕಡೆಯವರ ವಾದವನ್ನು ಕೇಳಿ ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಿಜ ಹೇಳಬೇಕೆಂದರೆ, ಒಳ್ಳೆಯ ಅಧ್ಯಕ್ಷರ ಪಟ್ಟಿಯ ಸಾಲಿಗೆ ನಿಮ್ಮನ್ನು ಸೇರಿಸುವುದಕ್ಕೆ ದೊಡ್ಡ ಕಾರಣ ಇದಕ್ಕಿಂತಲೂ ಬೇರೆ ಇಲ್ಲ.

ಅಧ್ಯಕ್ಷರು.—ನಾನು ಈಗ ದೇವೇಗೌಡರನ್ನು ಕರೆದಿದ್ದೇನೆ......

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು.—ನಾನು ಈಗ ದೇವೇಗೌಡರಿಗೆ ಕರೆದಿದ್ದೇನೆ ಅವರು ಮಾತನಾಡಲಿ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಾವು ಹೇಳುವುದನ್ನು ದಯವಿಟ್ಟು ಗಮನಿಸಬೇಕು, ನೋಟೀಸ್ ಯಾರು ಕಳುಹಿಸಿದ್ದಾರೆ ಅವರ ಅಭಿಪ್ರಾಯವನ್ನು ಕೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೋಟೀಸ್ ಕಳುಹಿಸಿದವರ ಅಭಿಪ್ರಾಯ ಕೇಳಿದ ಮೇಲೆ ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು.—ಆ ಸ್ಟೇಜಿಗೆ ಇನ್ನೂ ನಾವು ಬಂದಿಲ್ಲ. ಬಹಳ ಪ್ರಿಲಿಮಿನರಿ ಸ್ಟೇಜ್‌ನಲ್ಲಿ ಇದ್ದೇವೆ.

(ಗೊಂದಲ)

Sri S. Bangarappa.—Even to find out whether there is a prima facie case is there or not......

(ಗೊಂದಲ)

ಅಧ್ಯಕ್ಷರು.—ನಿಮ್ಮ ವಾದ, ಅವರ ವಾದ ಕೇಳಬೇಕೆಂಬುದೇ ನನ್ನ ಇಷ್ಟ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವು ಅವರಿಗೆ ಕೇಳಬಾರದು ಎಂದು ಹೇಳಿಲ್ಲ.

Mr. Speaker—I will hear the Hon'ble Minister.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ,......

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಾವು ಅವರಿಗೆ ಕೇಳಬಾರದು ಎಂದು ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಡುವುದಕ್ಕೆ ಮುಂಚೆಯೇ ಅವರಿಗೂ ತಮಗೂ ಇಬ್ಬರಿಗೂ ಕೇಳುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವು ನೋಟೀಸ್ ಕಳುಹಿಸಿರುವುದು ಪ್ರೈಮಾಫೇಸಿ ಕೇಸ್ ಬಗ್ಗೆ ಇದೆ. ತಾವು ಈ ಅಡ್ಜರ್ನ್‌ಮೆಂಟ್ ಮೋಷನ್ ಅಡ್ಮಿಟ್ ಮಾಡಿದ ಮೇಲೆ ಅದರ ಮೆರಿಟ್ ಬಗ್ಗೆ ಹೇಳುತ್ತೇವೆ.

(ಗೊಂದಲ)

ಅಧ್ಯಕ್ಷರು.—ನಾನು ಇನ್ನೂ ಅಡ್ಮಿಟ್ ಮಾಡಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಪ್ರೇಮಾಫೇಸಿ ಕೇಸ್ ಇದೆ ಅಡ್ಮಿಟ್ ಮಾಡಿ ಎಂದು ನಾವು ಸೂಚನೆಯನ್ನು ಕಳುಹಿಸಿದ್ದೇವೆ. ಇದನ್ನು ಅಡ್ಮಿಟ್ ಮಾಡಿ, ನಮ್ಮ ಕಡೆಯಿಂದ ಎರಡು ನಿಮಿಷ ಕೇಳಿದ ಮೇಲೆ ಅವರ ಕಡೆಯಿಂದ ಎರಡು ನಿಮಿಷ ಕೇಳಬಹುದು, ಈಗ ಈ ಕಡೆ ಕೇಳದೇ, ಆ ಕಡೆ ಕೇಳುವುದು ಸರಿಯಾದುದು ಅಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ತಿಳಿದುಕೊಳ್ಳಬೇಕೋ ತಿಳಿದುಕೊಳ್ಳಬಾರದೋ !

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ,......

ಅಧ್ಯಕ್ಷರು.— ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ......

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ನಿಮ್ಮನ್ನು ಪರ್‌ಮಿಷನ್ ಕೇಳಿದೆ......

ಅಧ್ಯಕ್ಷರು.—ನಾನು ಈಗ ಪ್ರೇಮಾಫೇಸಿ ಕೇಸ್ ಇದೆಯೋ, ಇಲ್ಲವೋ ಎನ್ನುವುದನ್ನು ನೋಡಿ ಹೇಳಬೇಕಾಗುತ್ತದೆ. ಈಗ ರಿಜೆಕ್ಟ್ ಮಾಡುವುದಾಗಲಿ, ಅಲೋ ಮಾಡುವುದು ಆಗಲಿ, ಆ ಪ್ರಶ್ನೆಗೆ ನಾನು ಹೋಗುವುದಿಲ್ಲ. ಈಗ ಅವರು ಪ್ರೇಮಾಫೇಸಿ ಇಲ್ಲ ಎಂದು ಹೇಳುತ್ತಿದ್ದಾರೆ, ಅದು ಹೌದೋ, ಅಲ್ಲವೋ ನೋಡಿ ನಾನು ರೂಲಿಂಗ್ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀಮಂತಿ ಕೆ. ಎಸ್. ನಾಗರತ್ನಮ್ಮ.—ನಾನು ಏನು ಮಾತನಾಡಿದ್ದೇನೆ .....

(ಗೊಂದಲ)

ಅಧ್ಯಕ್ಷರು.—ನನಗೆ ಕೇಳಲಿಕ್ಕೆ ಹಕ್ಕು ಇದೆಯೋ, ಇಲ್ಲವೋ, ಅಭಿಪ್ರಾಯ ಕೇಳಬೇಕೋ, ಕೇಳಬಾರದೋ.

(ಗೊಂದಲ)

SRI K. H. SRINIVAS.—I rise to a point of order.

ಅಧ್ಯಕ್ಷರು.—ದಯಮಾಡಿ ಎಲ್ಲ ಸದಸ್ಯರು ಕುಳಿತುಕೊಳ್ಳಬೇಕು......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಅವರು ಫ್ಯಾಕ್ಟ್ಸ್ ಎಕ್ಸ್‌ಪ್ಲೇನ್ ಮಾಡುತ್ತಿದ್ದಾರೆ, ಪಾಯಿಂಟ್ ಆಫ್ ಆರ್ಡರ್ ಬಗ್ಗೆ ತಾವು ರೂಲಿಂಗ್ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ರೂಲ್ಸ್‌ನಲ್ಲಿ ಇಲ್ಲದಿರತಕ್ಕದ್ದಕ್ಕೆ ಡಿಸ್ಕಷನ್ ಮಾಡಲು ತಾವು ಅವಕಾಶವನ್ನು ಕೊಟ್ಟಿದ್ದೀರಿ. ರೂಲ್ಸ್ ಪ್ರಕಾರ ಡಿಸ್ಕಷನ್‌ಗೆ ಅವಕಾಶವನ್ನು ಕೊಟ್ಟಿಲ್ಲ. ಆದ್ದರಿಂದ ಪ್ರೈಮಾಫೇಸಿ ಮೇಲೆ ಪ್ರೈಮಾಫೇಸಿ ಇದೆ. ಇದರ ಮೇಲೆ ಇನ್ನೂ ಒಂದು ಪ್ರೈಮಾಫೇಸಿ. ರೂಲ್ಸ್ ಪ್ರಕಾರ ಡಿಸ್ಕಷನ್‌ಗೆ ಅಲೋ ಮಾಡಿದರೆ ಇಂಥ ತೊಂದರೆಗಳೇ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದಾರೆ. ನಾನು ಅವರಿಗೆ ರೂಲಿಂಗ್ ಕೊಡುತ್ತೇನೆ.

ಶ್ರೀಮಂತಿ ಕೆ. ಎಸ್. ನಾಗರತ್ನಮ್ಮ.—ನಾನು ಇನ್ನೂ ಇದನ್ನು ಓದೇ ಇಲ್ಲವಲ್ಲಾ !

(ಗೊಂದಲ)

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಕೇಳಿ. ಮಾನ್ಯ ದೇವೇಗೌಡರು ಮೊದಲು ಏನು ಹೇಳುತ್ತಾರೋ ಹೇಳಲಿ. ಆಮೇಲೆ ನೋಡೋಣ.

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ, ಇಷ್ಟೊಂದು ಜನ ಎದ್ದು ನಿಂತು ಕೂಗಾಡುತ್ತಿರುವುದನ್ನು ನೋಡಿದರೆ, ಇದೇನು ಜಾತ್ರೆಯೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕಿಯವರು ಏನು ಹೇಳುತ್ತಾರೆಂಬುದನ್ನು ತಮಗೆ ಕೇಳುವುದಕ್ಕೆ ಆಗುವುದಿಲ್ಲವೆ ?

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ರೂಲಿಂಗ್ ಕೊಡುವವನು ನಾನು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಅವರಿಗಿಂತಲೂ ಮೊದಲೇ ನಾನು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದೇನೆ.

ಅಧ್ಯಕ್ಷರು.—ಅವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಅವರು ಏನು ಹೇಳುತ್ತಾರೋ ಹೇಳಲಿ, ಅನಂತರ ನಾನು ರೂಲಿಂಗ್ ಕೊಡುತ್ತೇನೆ. ಅವರು ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರೋ, ಇಲ್ಲವೋ ?

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ಪ್ರೈಮಾಫೇಸಿ ಮೇಲೆ ಕ್ಲಾರಿಫಿಕೇಷನ್...

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಹೊಸ ಪ್ರೊಪೊಸಿಷನನ್ನು ತಾವು ಸಭೆಯ ಮುಂದಿಟ್ಟಿದ್ದೀರಿ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್—ಈಗ ಪ್ರೈಮಾಫೇಸಿ ಮೇಲೆ ಒಂದು ಪ್ರೈಮಾಫೇಸಿ ಇದೆ. ಅದರ ಮೇಲೆ ನನ್ನದೊಂದು ಪ್ರೈಮಾಫೇಸಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಅವರ ಪಾಯಿಂಟ್ ಆಫ್ ಆರ್ಡರ್ ಮೇಲೆ ನಾನು ರೂಲಿಂಗ್ ಕೊಡಬೇಕಾಗಿದೆ. ಅವರು ಏನು ಹೇಳುತ್ತಾರೋ ಹೇಳಲಿ. ಅದನ್ನು ನಾನು ಅಪ್‌ಹೆಲ್ಡ್ ಮಾಡಿಲ್ಲ. ಡಿಸ್ ಅಲೋನೂ ಮಾಡಿಲ್ಲ.......

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನ್ನ ಪಾಯಿಂಟ್ ಆಫ್ ಆರ್ಡರ್ ಮೇಲೆ ತಾವು ಏನು ರೂಲಿಂಗ್ ಕೊಟ್ಟಿರಿ ?

(ಗೊಂದಲ)

ಅಧ್ಯಕ್ಷರು.—ನಾನು ಇನ್ನೂ ರೂಲಿಂಗ್‌ನ್ನು ಕೊಟ್ಟಿಲ್ಲ. ತಾವು ಏತಕ್ಕೆ ಮಾತನಾಡುತ್ತಿದ್ದೀರಿ ? ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನಾವು ಈ ಸಮಸ್ಯೆಯನ್ನು ಮುಗಿಸಬೇಕೋ ಬೇಡವೋ. ಅವರು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದಾರೆ. ನಾನು ಅದರ ಬಗ್ಗೆ ರೂಲಿಂಗ್ ಕೊಡ ಬೇಕಾಗುತ್ತದೆ. ಅವರು ಏನು ಹೇಳುತ್ತಾರೋ ಹೇಳಲಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ.ಎಚ್. ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ ಮೇಲೆ ಅವರಿಗೆ ನೀವು ಅವಕಾಶ ಕೊಡದೆ ಹೋದರೆ ಹೇಗೆ ? ಅವರಿಗಿಂತ ಮುಂಚೆಯೇ ಇವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದುದು.

ಅಧ್ಯಕ್ಷರು.— ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಲಿಲ್ಲ, ಕೊಡುವುದಿಲ್ಲವೆಂದೂ ಕೂಡ ಹೇಳಲಿಲ್ಲ, ರೂಲ್ಸ್ ಪ್ರಕಾರ ಕೇಳಿದ್ದಾರೆ, ನಾವು ರೂಲ್ಸ್ ಪ್ರಕಾರ ಅವಕಾಶ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂಲ್ಸ್ ಪ್ರಕಾರ ಹೇಳಿ, ಅವರಿಗೆ ಅವಕಾಶ ಕೊಡಬೇಕೋ ಬೇಡವೋ ಎನ್ನುವುದನ್ನು ಹೇಳಿ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ಸರ್ಕಾರ ಏನು ಹೇಳುತ್ತದೆ ಎನ್ನುವುದನ್ನು ಕೇಳಬೇಕಲ್ಲವೇ, ಅವರು ನೀವು ಎತ್ತಿದ ಪಾಯಿಂಟ್ ಆಫ್ ಆರ್ಡರ್‌ಗೆ ಏನು ಹೇಳುತ್ತಾರೋ ಹೇಳಲಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ.ಎಚ್. ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಅದರ ಬಗ್ಗೆ ರೂಲಿಂಗ್ ಬರಲಿ. ಅದನ್ನು ಹೇಳುವುದಕ್ಕೆ ನಾವು ತಯಾರಾಗಿಲ್ಲ. ಎಷ್ಟು ಸಾರಿ ಹೇಳಿದರೂ ಅದನ್ನೇ ಹೇಳುತ್ತೀರಲ್ಲ ತಾವು !

(ಗೊಂದಲ)

ನಾವು ಕೊಟ್ಟಂತಹ ನೋಟೀಸ್‌ನ್ನು ಅವರು ಎಕ್ಸ್‌ಪ್ಲೇನ್ ಮಾಡಿದ್ದಾರೆ.

ಶ್ರೀ ಎಂ. ರಘುಪತಿ.—ಯಾವ ಅಧ್ಯಕ್ಷರನ್ನು ತೃಪ್ತಿ ಮಾಡಲಿಕ್ಕೆ ?

ಅಧ್ಯಕ್ಷರು.—ನಿಮಗೆ ಅವಕಾಶ ಎಂದರೆ, ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಎತ್ತಿದ್ದಾರಲ್ಲ ಮೇಲ್ನೋಟಕ್ಕೆ ಅವರು ಹೇಳುವುದಕ್ಕೆ ಹೊರಟಿದ್ದಾರೆ. ಅವಕಾಶವನ್ನು ಕೊಡಬೇಕು, ಕೊಡಬಾರದು ಎನ್ನುವ ಬಗ್ಗೆ ರೂಲಿಂಗ್ ಕೊಡಬೇಕಾಗಿದೆ, ವಿಷಯ ಅವರು ಹೇಳಲಿ,

(ಗೊಂದಲ)

ಮಾನ್ಯ ಬಂಗಾರಪ್ಪನವರೇ ತಾವು ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಚನ್ನಪ್ಪನವರೇ ತಾವು ಸಹ ಕುಳಿತುಕೊಳ್ಳಿ, ಮಾನ್ಯ ದೇವೇಗೌಡರೆ ತಾವು ಕೂಡ ಸ್ವಲ್ಪ ಕುಳಿತುಕೊಳ್ಳಿ.

(ಗೊಂದಲ)

ಈಗ ಯಾವುದೇ ಒಂದು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ನಮ್ಮ ಕಡೆ ಬಂದಾಗ ನಾವು ನಮ್ಮ ಚೇಂಬರ್‌ನಲ್ಲಾದರೂ ರಿಜೆಕ್ಟ್ ಮಾಡಬಹುದು, ಅಥವಾ ಇಲ್ಲಿ ತಮ್ಮನ್ನು ಕೇಳಿ, ಅವರನ್ನು ಕೇಳಿ ಮೇಲ್ನೋಟಕ್ಕೆ ಕೇಸ್ ಇದೆಯೋ ಇಲ್ಲವೋ ಎನ್ನುವುದನ್ನು ನೋಡಿ ರಿಜೆಕ್ಟ್ ಮಾಡಬಹುದು. ಅಥವಾ ರೂಲ್ ೬೮ರ ಪ್ರಕಾರ ಕನ್ವರ್ಟ್ ಮಾಡಬಹುದು. ಅಥವಾ ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಳ್ಳಬಹುದು. ಆದರೆ ನಾನು ಚೇಂಬರ್‌ನಲ್ಲಿ ಇದನ್ನು ರಿಜೆಕ್ಟ್ ಮಾಡಲಿಕ್ಕೆ ಹೋಗುವುದಿಲ್ಲ. ಮೇಲ್ನೋಟಕ್ಕೆ ಆಯಿತೋ ಇಲ್ಲವೋ ನೋಡಿ ರಿಜೆಕ್ಟ್ ಮಾಡಬೇಕೋ ಅಲೋ ಮಾಡಬೇಕೋ ಇಲ್ಲ ಬೇರೆ ರೂಲ್ ೬೮ರ ಪ್ರಕಾರ ಕನ್ವರ್ಟ್ ಮಾಡಬೇಕೋ ಎನ್ನುವುದನ್ನು ಹೇಳಬೇಡವೇ ? ಆದ್ದರಿಂದ ಈ ಏನಾಗಿದೆ ಎಂದರೆ ಪ್ರಿಲಿಮಿನರಿ ವಿಷಯಕ್ಕೆ ನೋಟೀಸ್ ಕೊಟ್ಟಿದ್ದಾರೆ ಆ ಟೈಮ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಇವರು ಹೇಳಿದ್ದು. ಆದ್ದರಿಂದ ಮೇಲ್ನೋಟಕ್ಕೆ ಅವರಿಗೆ ಅವಕಾಶ ಕೊಡಬಾರದು ಎಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಈಗ ನಾವು ಮೇಲ್ನೋಟಕ್ಕೆ ಪ್ರೈಮಾಫೇಸಿ ಇದೆಯೋ ಇಲ್ಲವೇ ಎಂಬುದನ್ನು ನೋಡುವುದು ಬೇಡವೆ ? ಅವಕಾಶ ಕೊಡಬೇಕೋ ಬೇಡವೇ ಎಂಬುದನ್ನು ನೋಡುವುದು ಬೇಡವೆ ? ರೂಲಿಂಗ್ ಕೊಡಬೇಕೇ ಬೇಡವೆ ? ಮೊದಲನೆಯ ಪಾಯಿಂಟ್ ಆಫ್ ಆರ್ಡರ್ ಏನು ಎತ್ತಿದ್ದಾರೆಂದರೆ ಮೇಲ್ನೋಟಕ್ಕೆ ಇದು ಅನರ್ಹವಾದ ಕೇಸು, ಇದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿದ್ದಾರೆ. ಮೇಲ್ನೋಟಕ್ಕೆ ನೋಡಿಯಾದರೂ ನಾನು ತೀರ್ಮಾನ ಕೊಡಬೇಕೇ ಬೇಡವೆ ? ಕಂಟಿನ್ಯೂ ಮಾಡಿ ಎಂದು ಹೇಳಬೇಕೇ ಬೇಡವೇ ? ಕಂಟಿನ್ಯೂ ಮಾಡಿ ಎಂದು ಹೇಳಬಹುದು ಅಥವಾ ರೂಲ್ ೬೮ರ ಪ್ರಕಾರ ಕನ್ವರ್ಟ್ ಮಾಡಬಹುದು. ಈಗ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆಂದಮೇಲೆ ಅದನ್ನು ಸಬ್‌ಸ್ಟ್ಯಾನ್‌ಷಿಯೇಟ್ ಮಾಡಿ ಹೇಳಿ ಎಂದು ಹೇಳಿದ್ದೇನೆ. ಮಾನ್ಯ ದೇವೇಗೌಡರು ಹೇಳಿದ ಮೇಲೆ ನಿಮ್ಮನ್ನೂ ಕೇಳುತ್ತೇನೆ. ಈಗ ಕ್ರಿಯಾಲೋಪ ಎತ್ತಿದ್ದಾರೆ. ಅವಕಾಶ ಮಾಡಿಕೊಡಬೇಕೋ ಬೇಡವೆ ಎಂಬುದರ ಬಗ್ಗೆ ಪ್ರೈಮಾಫೇಸಿ ಬಗ್ಗೆ ಆಮೇಲೆ ರೂಲಿಂಗ್ ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ರೂಲೇ ಇಲ್ಲ, ರೂಲಿಂಗ್ ಏನು ಕೊಡುತ್ತೀರಿ ?

(ಗೊಂದಲ)

ಅಧ್ಯಕ್ಷರು.—ಪ್ರೈಮಾಫೇಸಿ ಇದೆಯೋ ಇಲ್ಲವೇ ಎಂಬ ಬಗ್ಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೇಲ್ನೋಟ, ಒಳನೋಟವನ್ನೆಲ್ಲ ಮೊದಲು ಕೇಳಿಕೊಳ್ಳಿ.

ಶ್ರೀ ಎಂ. ರಘುಪತಿ.—ನಿಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡುವುದಕ್ಕೆ ಅವರಿಗೆ ಹಕ್ಕು ಇಲ್ಲ.

(ಗೊಂದಲ)

ಶ್ರೀಮತಿ ಕೆ.ಎಸ್, ನಾಗರತ್ನಮ್ಮ.—ಏನಿದು ಈ ಕೂಗಾಟ ?

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್‌ಗೆ ರೂಲಿಂಗ್ ಕೊಡಬೇಕೇ ಬೇಡವೆ ? ಈಗ ದೇವೇಗೌಡರು ಹೇಳುವುದನ್ನು ಕೇಳುತ್ತೇನೆ, ನಂತರ ನೀವು ಹೇಳುವುದನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗಿರತಕ್ಕ ಪ್ರಶ್ನೆ ಏನೆಂದರೆ...

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ,

ಶ್ರೀ ಎಸ್. ಬಂಗಾರಪ್ಪ.—ರೂಲಿಂಗ್ ಕೊಡಿ, ಕೊಡುವುದು ಬೇಡ ಎಂದು ಅಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ದೇವೇಗೌಡರದ್ದು ಆದಕೂಡಲೇ ನಿಮಗೆ ಅವಕಾಶ ಕೊಡುತ್ತೇನೆ.

(ಭಾರಿ ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾಳೆಯಿಂದ ಎಲ್ಲರಿಗೂ ಒಂದೊಂದು ಬಡಿಗೆ ಕೊಡಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಅದು ನಿಮ್ಮ ಕಾಂಗ್ರೆಸ್ ಸಂಸ್ಕೃತಿ ; ನಮ್ಮದಲ್ಲ.

(ಗೊಂದಲ)

ಅಧ್ಯಕ್ಷರು.—ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆಂದು ಆಗಲೇ ಹೇಳಿದ್ದೇನೆ. ಅವರದ್ದು ಆದ್ಮಕೂಡಲೇ ನೀವು ಹೇಳುವಿರಂತೆ.

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳಿದಿರಿ...

ಅಧ್ಯಕ್ಷರು.—ನಾನು ಅವರನ್ನು ಕರೆದಿದ್ದೇನೆ.

SMT K.S. NAGARATHNAMMA.—That is a supporting thing.

ಅಧ್ಯಕ್ಷರು.—ಆಮೇಲೆ ಬಂಗಾರಪ್ಪನವರನ್ನು ಕರೆಯುತ್ತೇನೆ. ಇಬ್ಬರದ್ದನ್ನೂ ಕೇಳಿದ ನಂತರ ರೂಲಿಂಗ್ ಕೊಡುತ್ತೇನೆ.

(ಗೊಂದಲ)

೧-೩೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ತಾವು ಒಂದು ಅಭಿಪ್ರಾಯ ಕೊಟ್ಟಿದ್ದೀರಿ. ಒಂದು ಸಾರಿ ಒಬ್ಬ ಮಾನ್ಯ ಸದಸ್ಯರು ಕ್ರಿಯಾಲೋಪ ಎತ್ತಿದ ಮೇಲೆ ಅದರ ಬಗ್ಗೆ ರೂಲಿಂಗ್ ಕೊಡಬೇಕೆಂಬ ಅಭಿಪ್ರಾಯವನ್ನು ತಾವು ಹೇಳಿದ್ದೀರಿ. ಅದು ಒಪ್ಪತಕ್ಕ ಮಾತು.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹೇಳಬೇಕಾದ್ದನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡಬೇಕಾಗುತ್ತದೆ. ಅದು ಪ್ರೈಮಾಫೇಸಿ ಕೇಸ್ ಸಂಬಂಧಪಟ್ಟಿರಬಹುದು. ಅದರ ಬಗ್ಗೆ ಪ್ರಶ್ನೆ ನಾನು ಮಾಡುತ್ತಿಲ್ಲ. ಒಂದೇ ಯಾರ್ಡ್‌ಸ್ಟಿಕ್ ಅಪ್ಲೈ ಮಾಡಿದರೆ ಮೊದಲು ಯಾರು ಕ್ರಿಯಾಲೋಪ ಎತ್ತಿದ್ದಾರೆ. ಅದಕ್ಕೆ ತಾವು ರೂಲಿಂಗ್ ಕೊಟ್ಟು ನಂತರ ಮತ್ತೊಂದು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್‌ಗೆ ರೂಲಿಂಗ್ ಕೊಡಬೇಕೋ ಕೊಡಬಾರದೋ ಹೇಳಿ. ಮಾನ್ಯ ದೇವೇಗೌಡರ ಅಭಿಪ್ರಾಯ, ನಿಮ್ಮ ಅಭಿಪ್ರಾಯ ಇಬ್ಬರದ್ದೂ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೇವೇಗೌಡರು ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕಿಂತ ಮುಂಚೆ ಶ್ರೀನಿವಾಸ್ ಅವರು ಎತ್ತಿದ್ದಾರೆ. ಅದರ ಬಗ್ಗೆ ಮೊದಲು ರೂಲಿಂಗ್ ಕೊಡಿ. ಆಮೇಲೆ ಅವರದು ತೆಗೆದುಕೊಳ್ಳಿ.

ಅಧ್ಯಕ್ಷರು.—ಅವರದೇ ಮೊದಲು ಇರುವುದು ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಸ್. ಬಂಗಾರಪ್ಪ.—ಶ್ರೀನಿವಾಸ್ ಅವರದೂ ಇದೆ.

(ಗೊಂದಲ)

ಅಧ್ಯಕ್ಷರು.—ಅವರ ಪಾಯಿಂಟ್ ಆಫ್ ಆರ್ಡರ್ ಕೇಳೋಣ. ಅದು ಮುಗಿದ ಮೇಲೆ ಇದಕ್ಕೆ ಹೊಸ ರೂಲಿಂಗ್ ಕೊಡುತ್ತೇನೆ. ಮೊದಲು ಅವರದಾಗಲಿ. ನಂತರ ಇವರದು ತೆಗೆದು ಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮೊದಲು ಪಾಯಿಂಟ್ ಆಫ್ ಆರ್ಡರ್ ಯಾರು ಎತ್ತಿದ್ದಾರೆ ಅವರಿಗೆ ರೂಲಿಂಗ್ ಕೊಡಿ.

ಅಧ್ಯಕ್ಷರು.—ಮೊದಲು ಅವರದು ಇದೆ.

(ಗೊಂದಲ)

ಅಧ್ಯಕ್ಷರು.—ಎರಡಕ್ಕೂ ರೂಲಿಂಗ್ ಕೊಡುತ್ತೇನೆ ನಾನು

ಶ್ರೀ ಹೆಚ್. ಡಿ. ದೇವೇಗೌಡ.—ನನ್ನ ಪಾಯಿಂಟ್ ಆಫ್ ಆರ್ಡರ್ ಇನ್ನೂ ಡಿಸ್ಪೋಸ್ ಆಗಿಲ್ಲ ಆಮೇಲೆ...

(ಗೊಂದಲ)

ಅಧ್ಯಕ್ಷರು.—ಈಗ ಆಯಿತಲ್ಲ ? ಎರಡನೇ ಪಾಯಿಂಟ್ ಆಫ್ ಆರ್ಡರ್ ಅವರದು ಇವರದು ಕೇಳಿ ಒಮ್ಮೆಗೇ ರೂಲಿಂಗ್ ಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮೊದಲು ನನ್ನ ಕ್ರಿಯಾಲೋಪಕ್ಕೆ ರೂಲಿಂಗ್ ಕೊಡಬೇಕು.

SRI S. BANGARAPPA.—You will have to give first ruling on the point of order raised by the hon. Member Sri K. H. Srinivas.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರು ನೋಟೀಸ್ ಓದಿದಕೂಡಲೇ ಅವರು(ದೇವೇಗೌಡರು) ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಇವರದು ಆಮೇಲೆ ಬಂದಿದೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ನಜೀರ್ ಸಾಹೇಬರು ಹೇಳಿದ ತಕ್ಷಣ (ಕೆ.ಹೆಚ್.ಶ್ರೀನಿವಾಸ್) ಅವರು ಕ್ರಿಯಾಲೋಪ ಎತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನನಗರ್ಥವಾಗುವುದಿಲ್ಲ. ಬಹಳ ಸಿಂಪಲ್ ವಿಷಯ ಇದು ಲೀಡರ್ ಆಫ್ ದಿ ಅಪೊಸಿಷನ್ ಅವರದು ಪ್ರೈಮಾಫೇಸಿ ಕೇಸ್ ಕೇಳಿ ನಂತರ ದೇವೇಗೌಡರದು ಕೇಳಿ. ಅದಕ್ಕೆ ನಮ್ಮ ಅಬ್ಜೆಕ್ಷನ್ ಇಲ್ಲ.

ಅಧ್ಯಕ್ಷರು.—ಅದನ್ನು ರಿಜೆಕ್ಟ್ ಮಾಡುವ ಹಾಗಿದ್ದರೆ ಚೇಂಬರ್‌ನಲ್ಲೇ ಮಾಡಬಹುದಾಗಿತ್ತು. ಆ ರೀತಿ ಮಾಡಿಲ್ಲ. ಇಲ್ಲಿ ತಂದಿರುವ ಉದ್ದೇಶ ಅವರೂ ಹೇಳಲಿ ಎಂದು.

ಶ್ರೀ ಎಸ್. ಬಂಗಾರಪ್ಪ.—ಹೇಳುವುದಕ್ಕೆ ಬಿಟ್ಟಿಲ್ಲವಲ್ಲ. You have not allowed the Hon. Leader of the Opposition. Have you allowed to make preliminary submission regarding prima facie case of the matter?

(ಗೊಂದಲ)

ಅಧ್ಯಕ್ಷರು.—ಕೆ. ಹೆಚ್. ಶ್ರೀನಿವಾಸ್‌ರವರೂ...

ಶ್ರೀ ಎಂ. ಎಸ್. ಕೃಷ್ಣನ್.—ಪಾಯಿಂಟ್ ಆರ್ಡರ್ ಬಗ್ಗೆ ಮಾನ್ಯ ದೇವೇಗೌಡರಿಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಅವರ ಪಾಯಿಂಟ್ ಆಫ್ ಆರ್ಡರಿಗೂ ಮುಂಚೆ ಅನೇಕ ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಮೊದಲನೆಯದಾಗಿ ಶ್ರೀಮಾನ್ ವೇದಾಂತ ಹೆಮ್ಮಿಗೆಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಆಮೇಲೆ ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಆಮೇಲೆ ಪಾಯಿಂಟ್ ಆಫ್ ಆರ್ಡರನ್ನು ಎತ್ತಿದಂತಹವರು ಶ್ರೀಮಾನ್ ದೇವೇಗೌಡರು.

ಶ್ರೀ ಹೆಚ್. ಡಿ. ದೇವೇಗೌಡ.—ಅದು ಮೊದಲ ಪಾಯಿಂಟ್ ಆಫ್ ಆರ್ಡರ್ ಮೇಲೆಯೇ ಎಲ್ಲರೂ ಮಾತನಾಡಿದ್ದಾರೆ. ಮೊದಲು ಅದು ತೀರ್ಮಾನವಾಗಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮೊದಲು ಪಾಯಿಂಟ್ ಆಫ್ ಆರ್ಡರ್ ಎತ್ತಿದಂತಹವರಿಗೆ ಮೊದಲು ಅವಕಾಶ ಮಾಡಿಕೊಟ್ಟು ಆದರ ಮೇಲೆ ತಾವು ರೂಲಿಂಗನ್ನು ಕೊಡಬೇಕು. ಯಾವ ಪಾಯಿಂಟ್ ಆಫ್ ಆರ್ಡರ್‌ಗೂ ರೂಲಿಂಗನ್ನು ತಾವು ಕೊಡದಿದ್ದರೆ ಏನು ಪ್ರಯೋಜನ ಬಂತು?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಕೃಷ್ಣನ್‌ನವರು ಹೇಳಿದ್ದಕ್ಕೆ ನನ್ನ ಅನುಮೋದನೆಯನ್ನು ಕೊಡುತ್ತೇನೆ. ಈ ಸದನದಲ್ಲಿ ಯಾರೇ ಸದಸ್ಯರು ಅವರು ಮಾತನಾಡತಕ್ಕ ಹಕ್ಕು ಏನು ಇದೆ, ಅದನ್ನು ಕಸಿದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಸಿದ್ಧನಿಲ್ಲ. ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾನ್ಯ ಕೃಷ್ಣನ್‌ರವರು ಹೇಳಿದಂತೆ ಶ್ರೀಮಾನ್ ವೇದಾಂತ ಹೆಮ್ಮಿಗೆಯವರು ಹೇಳಿದಂತಹ ಕ್ರಿಯಾಲೋಪ, ನಾನು ಎತ್ತಿದಂಥ ಕ್ರಿಯಾಲೋಪ, ನಂತರ ಶ್ರೀಮಾನ್ ರಘುಪತಿಯವರು ಎತ್ತಿದಂತಹ ಕ್ರಿಯಾಲೋಪಗಳ ಬಗ್ಗೆ ಆ ಕ್ರಿಯಾಲೋಪಗಳು ಉರುಳಿಲ್ಲದ್ದು ಎಂಬುದಾಗಿ ಈ ಸದನದಲ್ಲಿ ಶಕ್ಧರ್ ಕೌಲ್‌ನ ಉದಾಹರಣೆ ಮಾಡಿದ್ದೀರಿ. ಈ ಹಂತದಲ್ಲಿ ನಾವು ಇದ್ದೇವೆ. ಇದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದಲ್ಲ

(ಗೊಂದಲ)

SRI H. D. DEVEGOWDA.—Madam, please excuse me.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಅದನ್ನು ಹೇಳುವಾಗ ಯಾರೂ ಅಬ್ಜಕ್ಷನ್ ಎತ್ತಲಿಲ್ಲ ಆದರೆ ಅದೇ ಮಾನ್ಯ ವಿರೋಧ ಪಕ್ಷದ ನಾಯಕಿಯವರು ನೋಟೀಸನ್ನು ತೆಗೆದುಕೊಂಡು ಒಂದೊಂದನ್ನೆ, ಪಾಯಿಂಟನ್ನು ಓದುತ್ತಾ ಹೋಗುತ್ತಿದ್ದರು. ಆ ಹಂತದಲ್ಲಿ ಇದ್ದೇವೆ. ಮಾನ್ಯ ಅಧ್ಯಕ್ಷರು ನಮಗೆ ಪೂರ್ತಿಯಾಗಿ ಅದರ ಬಗ್ಗೆ ವಿವರಣೆಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಬರೀ ನೋಟೀಸ್‌ನಲ್ಲಿ ಇರುವುದನ್ನು ಒಂದೊಂದೇ ಪಾಯಿಂಟನ್ನು ಹೇಳುತ್ತಿದ್ದ ಹಂತದಲ್ಲೇ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡುವುದು ಏನಿದೆ ಇದು ಸರಿಯಾದುದಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀಮಾನ್ ಎಂ. ಎಸ್. ಕೃಷ್ಣನ್ ಹೇಳಿದ್ದನ್ನೇ ನಾನು ಪುಷ್ಟೀಕರಿಸುತ್ತೇನೆ. ಅದರ ಬಗ್ಗೆ ತಾವೂ ಹೇಳಿದ್ದೀರಿ. ಇದರಲ್ಲಿ ಕ್ರಿಯಾಲೋಪ ಇಲ್ಲ ಎನ್ನತಕ್ಕಂತಹದ್ದನ್ನು ಸಮರ್ಥನೆ ಮಾಡಿದ್ದೀರಿ. ಅದರ ಬಗ್ಗೆ ಕೆಲವು ಪಾರ್ಲಿಮೆಂಟರಿ ಪ್ರೊಸೀಜರ್‌ನಲ್ಲಿರತಕ್ಕ ವಿಧಿ ನಿಯಮಗಳನ್ನು ಉದಾಹರಿಸಿದ್ದೀರಿ. ಇದಕ್ಕೆ ಅವಕಾಶ ಕೊಡಬಾರದು ಎಂಬುದಾಗಿ ಹೇಳುವುದಕ್ಕೆ ನಾನೊಂದು ಕ್ರಿಯಾಲೋಪವನ್ನು ಎತ್ತಿದ್ದೇನೆ. ಸನ್ಮಾನ್ಯ ವಿರೋಧಪಕ್ಷದ ನಾಯಕಿಯವರು ಸೂಚನೆಯನ್ನು ಮಂಡನೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ—ಬೇಡಬೇಕೋ ಎಂಬುದು ತಮಗೆ ಸೇರಿದ್ದು. ಮಾನ್ಯ ಕೆ. ಎಚ್. ಪಾಟೀಲ್‌ರವರು ಒಂದು ಡೆಪ್ಯೂಟ್ ವಿಷಯದ ಬಗ್ಗೆ ಚರ್ಚೆ ಮಾಡುತ್ತೇವೆಂದು ಹೇಳಿದರು. ನಾನು ಇಲ್ಲಿ ನಮ್ಮ ಸಭೆಯ ಗಮನಕ್ಕೆ, ನಮ್ಮ ಸದನದ ನಿಯಮಾವಳಿ ೭೧ರ ಪ್ರಕಾರ ಇಲ್ಲಿರತಕ್ಕ ನಿಯಮಗಳು ಏನು ಇವೆ ಅವುಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇದನ್ನು ಸಿಟ್‌ಔಟ್ ಮಾಡುವುದಕ್ಕೆ ಅಲ್ಲಿ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದೂ ಅಲ್ಲ. ಮಾನ್ಯ

ಕೃಷ್ಣನ್‌ರವರು ಹೇಳಿದ್ದನ್ನೇ ಮತ್ತೊಮ್ಮೆ ಸ್ಪಷ್ಟೀಕರಣ ಮಾಡುವುದಕ್ಕೆ ಸರ್ಕಾರದ ಪತಿಯಿಂದ ಎದ್ದು ನಿಂತಿದ್ದೇನೆ ಈ ಕ್ರಿಯಾಲೋಪದ ಬಗ್ಗೆ ಅದನ್ನು ತಿರಸ್ಕಾರ ಮಾಡಬಹುದು. ಅಥವಾ ಚರ್ಚೆಗೆ ಯಾವ ರೂಪದಲ್ಲಾದರೂ ತೆಗೆದುಕೊಳ್ಳಬಹುದು. ಆ ವಿಷಯ ಬೇರೆ. ನಾನು ಆ ನೋಟೀಸನ್ನು ಓದುವುದಕ್ಕೆ ಹೋಗುವುದಿಲ್ಲ, ತಾವೇ ಅದನ್ನು ಓದಿದ್ದೀರಿ, ಅದು ಈ ಸದನದ ಸ್ವತ್ತಾಗಿದೆ, ಇದರಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದ್ದಲ್ಲದೆ ಹತ್ತಾರು ವಿಷಯಗಳ ಬಗ್ಗೆ ವಿಷಯ ಅಡಕವಾಗಿರುವುದು. ಇದು ಒಂದು. ತಾವು ಅಲ್ಲಿ ಎತ್ತರದ ಸ್ಥಾನದಲ್ಲಿ ಕುಳಿತಿದ್ದೀರಿ ? ಇದು ಒಂದೇ ವಿಷಯದ ಬಗ್ಗೆ ಸಂಬಂಧಿಸಿದ್ದು ಎಂದು ಹೇಳಿ ತಾವು ನಿರ್ಧಾರಕ್ಕೆ ಬರುವುದಾದರೆ ಅದಕ್ಕೆ ನನ್ನದೇನೂ ಅಡ್ಡಿ ಇಲ್ಲ. ಅವರು ಏನೊಂದು ಸೂಚನೆಯನ್ನು ಮಂಡನೆ ಮಾಡಿದ್ದಾರೆ There are dozens of issues involved. Is it going to attract Adjournment Motion under Rule 61 ? ತಾವು ಸದನದ ೬೧ನೇ ನಿಯಮಾವಳಿಯನ್ನು ನೋಡಿ, ಇನ್ನೊಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಡ್ಜರ್ನ್‌ಮೆಂಟ್ ಮೋಷನ್‌ನ ಅಡ್ಮಿಸಿಬಿಲಿಟಿಯ ಬಗ್ಗೆ ತಾವು ಕೋಟ್ ಮಾಡಿದ್ದೀರಿ. ಕೌಲ್ ಅಂಡ್ ಶಕ್ದರ್ ಪಾರ್ಲಿಮೆಂಟರಿ ಪ್ರೊಸೀಜರ್ ಕೆಲವು ಕಲಮುಗಳನ್ನು ಕೋಟ್ ಮಾಡಿ ತಾವೇ ಹೇಳಿದ್ದೀರಿ. ಅದರ ಪುಟ ೪೧೮ರಲ್ಲಿ ಏನಿದೆ ಎಂಬುದನ್ನು ಹೇಳುವುದಾದರೆ

> "An Adjournment Motion cannot be moved also on a matter where the Minister exercises discretionary powers conferred on him by a Statute."

ಇಷ್ಟೆ ಇವತ್ತು ಈ ಸದನದಲ್ಲಿರತಕ್ಕ ಒಂದು ಕಾಯಿದೆಯ ವ್ಯಾಪ್ತಿಯಲ್ಲಿ ಒಂದು ನೋಟಿಫಿಕೇಷನ್ ಅನ್ನು ಅವರು ಓದಿದ್ದಾರೆ. ಇವತ್ತು ಈ ಸದನದಲ್ಲಿ ನಿಲುವಳಿ ಸೂಚನೆ ವ್ಯಾಪ್ತಿಯಲ್ಲಿ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ನಾನು ಕೋಟ್ ಮಾಡಿ ಹೇಳಿದ್ದೇನೆ. ತಾವು ಇದರ ವ್ಯಾಪ್ತಿಯಲ್ಲಿ ಇದು ಬರುತ್ತದೆಂದರೆ ಅಡ್ಡಿ ಇಲ್ಲ. ನಿಮ್ಮ ರೂಲಿಂಗ್‌ಗೆ ನಾ ತಲೆಬಾಗಿಸುತ್ತೇವೆ.

(ಗೊಂದಲ)

ಇಷ್ಟೆಲ್ಲಾ ಹೇಳಿ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಇದು ನಿಲುವಳಿ ಸೂಚನೆ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ತಮಗೆ ಮನವರಿಕೆಯಾದರೆ ಇನ್ನೊಂದು ಮಾತನ್ನು ಸರ್ಕಾರದ ಪರವಾಗಿ ಹೇಳುತ್ತೇನೆ. ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಎರಡೂವರೆ ಗಂಟೆ ಚರ್ಚೆಗಾದರೂ ಇಡಿ ಇಡೀ ದಿವಸದ ಚರ್ಚೆಯಾದರೂ ಆಗಲಿ. ಅರ್ಧ ಗಂಟೆ ಚರ್ಚೆಗಾದರೂ ತಗೊಳ್ಳಿ, ಚರ್ಚೆ ಮಾಡಲು ನಮ್ಮದು ಅಡ್ಡಿ ಇಲ್ಲ. ವಿರೋಧ ಪಕ್ಷದವರು ಎಷ್ಟು ಹೇಳುವುದಕ್ಕೆ ಇಷ್ಟಪಡುತ್ತಾರೋ ಅಷ್ಟೂ ಹೇಳಲಿ. ಆದರೆ ಅಡ್ಜರ್ನ್‌ಮೆಂಟ್ ಮೋಷನ್ ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ ಎನ್ನುವುದು ನಮ್ಮ ಅಭಿಪ್ರಾಯ.

(ಗೊಂದಲ)

ಅಧ್ಯಕ್ಷರು.— ಕೆ.ಎಚ್. ಪಾಟೀಲರೇ, ಬೇರೆ ರೂಲ್ಸ್ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ. ಎಚ್. ಪಾಟೀಲ್.— ಮಾನ್ಯ ದೇವೇಗೌಡರು ಹೇಳಿದ ಮಾತನ್ನು ಕೇಳಿದ್ದಿರಿ. ನಾವೂ ಹೇಳಿದ ಮಾತನ್ನು ಕೇಳಿದ್ದಿರಿ. ಅವರೂ ಕೂಡಾ ವಿಷಯವನ್ನು ಅರ್ಥ ಮಾಡಿಕೊಂಡಿದ್ದಾರೆ. ಒಂದೇ ವಿಷಯದ ಸಲುವಾಗಿ 'This is only on account of the failure of the Government to take the statute in proper in perspective' is her point as I understand ಮಾನ್ಯ ದೇವೇಗೌಡರು ಯೋಗ್ಯ ಮಾತನ್ನು ಹೇಳಿದ್ದಾರೆ. ತಮಗೆ ಹೇಗೆ ತಿಳಿಯುತ್ತದೆಯೋ ಹಾಗೇ ಮಾಡಿ ಎಂದು ಅವರು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.— ಯಾವುದಾದರೂ ಬೇರೆ ನಿಯಮದ ಪ್ರಕಾರ ಚರ್ಚೆಗೆ ಅವಕಾಶ ಕೊಟ್ಟರೆ ತಕರಾರು ಇಲ್ಲ ಎಂದು ಸರ್ಕಾರದ ಪರವಾಗಿ ಹೇಳಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ದೇವೇಗೌಡರ ಹೇಳಿರುವ ಮಾತನ್ನು ಕೇಳಿದರೆ ನಾವು ಹೇಳಿರತಕ್ಕ ಮಾತನ್ನು ಅವರೂ ಒಪ್ಪಿಕೊಂಡಹಾಗೆ ಆಯಿತು. ಈಗ ಅದನ್ನು ತಾವೂ ಕೂಡಾ ಒಪ್ಪಿಕೊಂಡಹಾಗೆ ಆಯಿತು. ಅಡ್ಮಿಸಿಬಲಿಟಿ ಬಗ್ಗೆ ಯಾವುದೇ ರೀತಿಯಲ್ಲಿ ಅವರು ಅಭಿಪ್ರಾಯ ಕೊಡುವುದಕ್ಕೆ ಅವಕಾಶ ಇಲ್ಲ ಎಂದು ನಾವು ಹೇಳಲಿಲ್ಲ. ಇದು ಯಾವಾಗ ಬರುತ್ತದೆ ? ನಿಲುವಳಿ ಸೂಚನೆಯನ್ನು ಮೂವ್ ಮಾಡಿರುವ ವಿರೋಧಿ ಪಕ್ಷದ ನಾಯಕರು ಅದನ್ನು ಎಕ್ಸ್‌ಪ್ಲೇನ್ ಮಾಡುತ್ತಿರುವ ಹೋತಿನಲ್ಲಿ ನೀವು ಏನು ಹೇಳಿದಿರಿ ? ಇದರಲ್ಲಿ ಪ್ರೈಮಾಫೇಸಿ ಇದೆಯೋ ಎಂದು ವಿಷಯವನ್ನು ಎತ್ತುವುದಕ್ಕೆ ಅವಕಾಶ ಉಂಟೋ ಇಲ್ಲವೋ ಎನ್ನುವುದರ ಬಗ್ಗೆ ಡಿಸ್‌ಕಷನ್ ಅಂತ ಹೇಳಿದಿರಿ ಈಗ ದೇವೇಗೌಡರು ಅದನ್ನು ಹೇಳುತ್ತಾ ಇಲ್ಲ. He is fairly conceded, In fact I am grateful to him for this. ಅವರು ಫೇರ್ ಆಗಿ ಹೇಳುತ್ತಿದ್ದಾರೆ. ಏನೆಂದರೆ, ಅಡ್ಮಿಸಿಬಲಿಟಿ ಬಗ್ಗೆ ಅವರು ಹೇಳಿದರೇ ಹೊರತು ತಾವು ಏನು ಡಿಸ್‌ಕಷನ್‌ಗೆ ಅಲೋ ಮಾಡಿದ್ದೀರಿ ಎನ್ನುವ ಭಾವನೆಯಲ್ಲಿ ಇದ್ದಿರಿ, ತಾವು ಏನು ತಿಳಿಕೊಂಡಿದ್ರಿ ಪ್ರೈಮಾಫೇಸಿಯಾಗಿ ಈ ವಿಷಯವನ್ನು ಎತ್ತಲಿಕ್ಕೂ ಬರುತ್ತದೋ ಇಲ್ಲವೋ ಎನ್ನುವ ಬಗ್ಗೇನೇ ಡಿಸ್‌ಕಷನ್ ಎಂದು ಹೇಳಿದ್ದಿರಿ.

ಅಧ್ಯಕ್ಷರು.— ಅವರು ಹೇಳಿದ್ದು ನಾನು ಹೇಳಿದ್ದು ಅಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.— ಅವರು ಹೇಳಲಿಲ್ಲ ಅದನ್ನು.

ಅಧ್ಯಕ್ಷರು.— ಮೊದಲನೇ ವಿಚಾರ ಬಿಟ್ಟು, ಈಗ ಅವರು ಏನು ಹೇಳಿದರು ಎಂದರೆ ನೀವು ಬೇರೆ ನಿಯಮದ ಪ್ರಕಾರ ಚರ್ಚೆ ಮಾಡುವುದಕ್ಕೆ ತಾಸುಗಟ್ಟಲೆ ಮಾಡಿ, ನನ್ನ ಅಡಿ ಇಲ್ಲ ಆದರೆ ನಿಲುವಳಿ ಸೂಚನೆಗೆ ಇದು ಬರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದಕ್ಕೆ ಕೆ. ಎಚ್ ಪಾಟೀಲರು ಏನು ಹೇಳಿದರು ಎಂದರೆ ನೀವು ಆಪ್ರಕಾರ ಮಾಡುವುದಕ್ಕೆ ನೀವು ಅವರನ್ನು ಕೇಳಿ ಮಾಡಿ ತೀರ್ಮಾನ ಕೊಡಿ ಎಂದು ಹೇಳಿದ್ದಾರೆ.

SRI K. H. SRINIVAS.— Please afford me a hearing. ಬೇರೆ ನಿಯಮದ ಪ್ರಕಾರ ತೆಗೆದುಕೊಳ್ಳಿ, ಅಡ್ಜರ್ನ್‌ಮೆಂಟ್ ಮೋಷನ್ ಬೇಡ, ಅಡ್ಜರ್ನ್‌ಮೆಂಟ್ ಮೋಷನ್‌ಗೆ ಸಮರ್ಪಕವಾದ ಸಬ್ಜೆಕ್ಟ್ ಇದಲ್ಲ ಇವೆಲ್ಲಾ ಹೇಳುವುದು ಯಾವುದರ ಮೇಲೆ ? When there is a discussion on maintainability of the adjournment motion. ನಿಮ್ಮ ಪ್ರಕಾರ ಮೆಂಟ್‌ನಬಲಿಟಿ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಉಂಟೋ ಇಲ್ಲವೋ ಎಂದು ಹೇಳಿಬಿಟ್ಟು ಪ್ರೈಮಾಫೇಸಿ ಹೇಳುವುದಕ್ಕ ಅವಕಾಶ ಉಂಟೋ ಇಲ್ಲವೋ ಎಂದು.

ಅಧ್ಯಕ್ಷರು.— ಅವಕಾಶ ಇಲ್ಲ ಎಂದು ಅವರು ಹೇಳುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ಹಾಗೇ ಹೇಳಲಿಲ್ಲ ಈಗ. ರೂಲ್ಸ್‌ನಲ್ಲಿ ಇಲ್ಲದೇ ಇರತಕ್ಕ ಒಂದು ಪ್ರಪೋಸಿಷನ್‌ನ್ನು ಇಲ್ಲಿ ಸಭೆಯ ಮುಂದೆ ಇಟ್ಟರಿ. ಅದಕ್ಕಾಗಿ ಇಷ್ಟೆಲ್ಲಾ ಗೊಂದಲ. ಏನೇ ಕೂಡಾ ಅಬ್ಜೆಕ್ಷನ್ಸ್ ಇದ್ದರೂ ಕೂಡಾ, ಅವರು ಏನು ಹೇಳುವುದು ಇದ್ದರೂ ಕೂಡಾ ಲೀಡರ್ ಇಫ್ ದಿ ಅಪೋಶಿಷನ್ ಹೇಳಿದಮೇಲೆ they may take whatever objections they can.

ಶ್ರೀ ಎಚ್. ಡಿ ದೇವೇಗೌಡ.— ನಿಲುವಳಿ ಸೂಚನೆಯು ವ್ಯಾಪ್ತಿಯಲ್ಲಿ ಏನೇನು ಬರುತ್ತದೆಂದು ನಿಯಮಾವಳಿಗಳನ್ನು ಕೋಟ್ ಮಾಡಿದ್ದೇನೆ ಅದರ ಪ್ರಕಾರ ನೀವು ಅವಕಾಶ ಕೊಡಿ. ಇಲ್ಲದೇ ಇದ್ದರೆ ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರದ ಆಂತಕ ಏನೂ ಇಲ್ಲ ಎಂಬುದನ್ನು ಮತ್ತೊಮ್ಮೆ ಸ್ಪಷ್ಟ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರಾದ ದೇವೇಗೌಡರು ಹೇಳಿರತಕ್ಕ ಮಾತನ್ನು ಕೇಳಿದ್ದೇನೆ. ನಾವು ತಿಳಿದುಕೊಂಡಿದ್ದೆವು ಮಾನ್ಯ ಶ್ರೀನಿವಾಸ್‌ರವರು ಹೇಳಿದಹಾಗೆ ಹೇಳುತ್ತಾರೆಂದು ತಿಳಿದಿದೆವು. ಅವರು ವಿಷಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಇಂಗಿತದ ಮುಖಾಂತರ ಕೊಟ್ಟಿದ್ದಾರೆ ಸಭಾಧ್ಯಕ್ಷರು ತಾವು ತಮ್ಮ ತೀರ್ಮಾನವನ್ನು ಕೊನೆಯಲ್ಲಿ ಮಾಡಬೇಕಾಗಿತ್ತು.

ಅಧ್ಯಕ್ಷರು.—ನಾನು ತೀರ್ಮಾನವನ್ನು ಕೊಡುವುದಕ್ಕೆ ಹೋಗಿಲ್ಲವೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಬಹಳ ಒಳ್ಳೆಯ ನೀತಿ. ಅದನ್ನು ನಾವು ಮೆಚ್ಚಿಕೊಂಡಿದ್ದೇವೆ. ಡಿಸ್‌ಕಷನ್‌ಗೆ ಅವಕಾಶ ಕೊಡುವುದಕ್ಕೆ ಬರುತ್ತದೆ, ಅಡ್ಮಿಷನ್ ಮಾಡುವುದಕ್ಕೆ ಬರುತ್ತದೆ, ರಿಜೆಕ್ಟ್

ಮಾಡುವುದಕ್ಕೆ ಬರುತ್ತದೆ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆ ಪಾಯಿಂಟ್ ಕೂಡಬಂತು. ಬೇರೆ ನಿಯಮಾವಳಿ ಪ್ರಕಾರ ಚರ್ಚೆಗೆ ಅವಕಾಶವಿರುತ್ತದೆ, ಸರ್ಕಾರ ಹೇಳಿರುವುದಕ್ಕೂ ತಾವು ಹೇಳಿರುವುದಕ್ಕೂ ಹೊಂದಾಣಿಕೆ ಒಂದು ಅಭಿಪ್ರಾಯ ಅಂತಿಮವಾಗಿ ಬಂತು. ಬೇರೆ ರೀತಿಯಲ್ಲಿ ಇದನ್ನು ತೆಗೆದುಕೊಂಡು ಏನೂ ತಕರಾರು ಇಲ್ಲವೆಂದು ಗೊತ್ತಾಯಿತು. ವಿರೋಧ ಪಕ್ಷದವರ ಭಾವನೆ ಏನಿದೆ ಎಂಬುದನ್ನು ಸ್ಪಷ್ಟಪಡಿಸಬೇಕಾದರೆ ಅವಕಾಶ ಕೊಡಬೇಕು. ಸರ್ಕಾರ ಹೇಳುವಹಾಗೆ ಅಧಿಕಾರ ವಿಕೇಂದ್ರೀಕರಣ, ಜನರ ಕೈಗೆ ಅಧಿಕಾರ, ಇದು ಬಹಳ ದೊಡ್ಡ ದೊಡ್ಡ ವಿಚಾರ.

ಶ್ರೀ ಎಂ. ರಘುಪತಿ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. You are allowing for discussion.

ಶ್ರೀ ಎಸ್. ಬಂಗಾರಪ್ಪ.—ನಾನು ರೂಲ್ಸನ್ನು ಹೇಳುತ್ತೇನೆ. ಮಾನ್ಯ ರಘುಪತಿಯವರೇ ಏತಕ್ಕೆ ಹೀಗೆ ಮಾಡುತ್ತೀರಿ ? ಸ್ವಲ್ಪ ತಾಳಿ. ಅದರ ಅರ್ಥ ಏನೆಂದರೆ, ಇದು ಸಣ್ಣ ವಿಚಾರವಲ್ಲ. ಏಕೆಂದರೆ ವರ್ಷಾನುಗಟ್ಟಲೆ ಭಾಷಣ ಮಾಡಿ ಪ್ರಚಾರ ತೆಗೆದುಕೊಂಡು ಮುಗಿಸಿದ್ದೀರಿ. ಆದ್ದರಿಂದ ಬೇರೆ ನಿಯಮಾವಳಿ ಪ್ರಕಾರ ಚರ್ಚೆಗೆ ತೆಗೆದುಕೊಂಡರೆ ಅವರು ಹೇಳಿದ ಅರ್ಥ ಇದೆ ಅದು ಹಿಂದಕ್ಕೆ ಹೋಗುತ್ತದೆ. ಯಾವ ಜನವನ್ನು ಆಯ್ಕೆಮಾಡಿ ಮಂಡಲ್‌ಗೆ ಕಳುಹಿಸಬೇಕಾಗಿದೆಯೋ ? ಇದು ದೊಡ್ಡ ವಿಚಾರ.

ಶ್ರೀ ಎಂ. ರಘುಪತಿ.—ನನ್ನದು ಕ್ರಿಯಾಲೋಪವಿದೆ. ಅವರು ಮೆರಿಟ್‌ಗೆ ಹೋಗುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಘುಪತಿಯವರೇ ನೀವು ಏತಕ್ಕೆ ಹೀಗೆ ಮಾಡುತ್ತೀರಿ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನ್ನದು ಕ್ರಿಯಾಲೋಪವಿದೆ. ಮಾನ್ಯ ದೇವೇಗೌಡರು ಮೆರಿಟ್‌ಗೆ ಹೋಗಲಿಲ್ಲವೆ ?

SRI M. RAGHUPATHY.—Why you are allowing for discussion ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ದೇವೇಗೌಡರು ಏನು ಹೇಳಿದರು ಎನ್ನುವ ವಿವರಕ್ಕೆ ಹೋಗುವುದಿಲ್ಲ. Did he not go on the merits of the matter ? Did he not say that this matter can be discussed under some other rules of the House ? ಅದಕ್ಕೋಸ್ಕರ ನಿಲುವಳಿ ಸೂಚನೆ ಬಿಟ್ಟು ಬೇರೆ ಯಾವುದೇ ನಿಯಮಾವಳಿಯ ಪ್ರಕಾರ ಇದನ್ನು ತೆಗೆದುಕೊಂಡರೂ ಅದು ತನ್ನ ಪ್ರಾಮುಖ್ಯತೆಯನ್ನು ಜರೂರಾತಿಯನ್ನು ಸಂಪೂರ್ಣವಾಗಿ ಕಳೆದು ಕೊಳ್ಳುತ್ತದೆ. ಸರ್ಕಾರದವರು ಏನೊಂದು ಅಭಿಪ್ರಾಯವನ್ನು ಪಟ್ಟಿದ್ದಾರೆ ಅದಕ್ಕೆ ತಾವು ತಮ್ಮ ಒಪ್ಪಿಗೆಯನ್ನು ಕೊಡುವುದು ಬೇಡ. ಪ್ರಾಮುಖ್ಯತೆಯ ದೃಷ್ಟಿಯಿಂದ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಇದಕ್ಕಿಂತ ದೊಡ್ಡ ಅವಕಾಶ ತಮಗೆ ಸಿಗುವುದಿಲ್ಲ. ಆಯಿತು ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನಾನು ಪ್ರಿಲಿಮಿನರಿ ಬಗ್ಗೆ ಹಿಯರಿಂಗ್......

ಶ್ರೀ ಎಸ್. ಬಂಗಾರಪ್ಪ.—ಪ್ರಿಲಿಮಿನರಿಯನ್ನು ಮತ್ತೆ ಏತಕ್ಕೆ ತರುತ್ತೀರಿ ? When the hon Minister has spoken on the merits of the matter where is the question of merit ? Straight-away we have to go to the subject. ನಿಲುವಳಿ ಸೂಚನೆಗೆ ನಮ್ಮ ಒತ್ತಡವಿದೆ. ವಿರೋಧಪಕ್ಷದ ನಾಯಕಿಯವರು ಅದನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್ —ಮಾನ್ಯ ದೇವೇಗೌಡರು ಮಾತನಾಡುತ್ತಾ ನನ್ನನ್ನು ರೆಫರ್ ಮಾಡಿದರು. ನಾನು ನನ್ನ ಕ್ರಿಯಾಲೋಪವನ್ನು ಸಮರ್ಥನೆ ಮಾಡುತ್ತಾ ಮಾತನಾಡಿದ್ದೇನೆ. ನಾನು ಏನು ಯೋಚನೆ ಮಾಡಿದ್ದೆ ಎಂದರೆ, ಅವರು ಮಾತನಾಡುವಾಗ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಪ್ರೈಮಾಫೇಸಿ ಆಗಿ ನಿವೇದನೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ, ಆ ವಾದದ ಬಗ್ಗೆ ನಾನು ಮಾತನಾಡಿಲ್ಲ, ಅದರ ಬಗ್ಗೆ ಚಕಾರ ಶಬ್ದ ಕೂಡ ಎತ್ತಲಿಲ್ಲ. ಅವರು ಮಾತನಾಡುವಾಗ ರೂಲ್ಸ್

೭೧ರ ಪ್ರಕಾರ ರೂಲ್ ೧೦೩ರ ಪ್ರಕಾರ ಇನ್ನೊಂದು ರೂಲ್ ಕೋಟ್ ಮಾಡಿ ಕೌಲ್ ಅಂಡ್ ಶಕ್ದರ್ ಪುಸ್ತಕವನ್ನು ಕೋಟ್ ಮಾಡಿ ಕ್ರಿಯಾಲೋಪ ಆಗುವುದಿಲ್ಲವೆಂದು ಹೇಳಿದರು. ಅದರಲ್ಲಿ ಪ್ರೈಮಾಫೇಸಿಯಲ್ಲಿ ಎನ್ನುವ ಪ್ರಶ್ನೆ ಇಲ್ಲವೇ ಇಲ್ಲ. ಇದನ್ನು ಅಡ್ಮಿಟ್ ಮಾಡಬೇಕೇ ಬೇಡವೇ ಎಂದು ಹೇಳುವಾಗ ಶ್ರೀ ದೇವೇಗೌಡರು ಅಡ್ಮಿಸಿಬಿಲಿಟಿ ಇಲ್ಲವೆಂದು ಹೇಳಿಬಿಟ್ಟರು. ಮಾನ್ಯ ವಿರೋಧಪಕ್ಷದ ನಾಯಕರಾದವರು ಪೂರ್ತಿಯಾಗಿ ಹೇಳದೇ ಇರುವುದರಿಂದ......

(ಗೊಂದಲ)

ತಾವು ತೀರ್ಮಾನ ಕೊಡುವುದಕ್ಕೆ ಮುಂಚೆ ವಿರೋಧ ಪಕ್ಷದ ನಾಯಕರಾದವರು ಏನು ಹೇಳುತ್ತಾರೆ ಎಂದು ಕೇಳಬೇಕಾಗುತ್ತದೆ. ಎರಡು ಪ್ರಶ್ನೆಗಳನ್ನು ಎತ್ತಿದ್ದಾರೆ. Several matters, not only one matter, more than one matter. ಆ ಮೇಲೆ Minister has got right to amend the rules ಈ ರೀತಿಯಲ್ಲಿ ಮಾತನಾಡಿದರು ಇದರ ಬಗ್ಗೆ ಈ ಕಡೆಯಿಂದ ಏನು ಹೇಳುತ್ತಾರೆ ಎಂದು ತಿಳಿದುಕೊಂಡ ಮೇಲೆ ಅದಕ್ಕೆ ಅವಕಾಶ ಮಾಡಬೇಕೇ ವಿನಹ, ತಮ್ಮ ತೀರ್ಮಾನಕ್ಕೆ ನಾವು ತಲೆಬಾಗುತ್ತೇವೆ. ಅವರು ಹೇಳುವುದಕ್ಕೆ ಮುಂಚೆಯೇ ತಾವು ತೀರ್ಮಾನ ಹೇಳಿದರೆ ಅದು ಅಪಚಾರವಾಗುತ್ತದೆ.

(Interruption)

SRI K. H. SRINIVAS.—It is a premature suggestion. Even the Chair should not get prejudiced. ತಾವು ಕೂಡ ಅನ್‌ಮೆರಿಟ್ಸ್‌ನ್ನು ನೋಡಬೇಕೇ ಹೊರತು, ಅದಕ್ಕೆ ಏನು ಹೇಳುತ್ತೀರಿ, ಇದಕ್ಕೇನು ಹೇಳುತ್ತೀರಿ ಎಂದು ಕೇಳುವುದು ಸರಿಯಲ್ಲ.

ಅಧ್ಯಕ್ಷರು.—ಅಡ್ಮಿಸಿಬಿಲಿಟಿ ಬಗ್ಗೆ ಈ ಪ್ರಶ್ನೆ ಬಂದಿದೆ. ನಾನಾದರೂ ಕೂಡ ಹೇಳುವುದೇನೆಂದರೆ ನಮ್ಮಲ್ಲಿ ಹಿಂದಿನಿಂದ ಬಂದ ಸಂಪ್ರದಾಯ ಇದೆ. ಅಡ್ಮಿಸಿಬಿಲಿಟಿ ಬಗ್ಗೆ ಅವಕಾಶ ಕೊಟ್ಟು, ಸರ್ಕಾರಕ್ಕೂ ಅವಕಾಶ ಕೊಟ್ಟು, ಇಬ್ಬರ ವಾದವನ್ನೂ ಕೇಳಿ ಅನಂತರ ಅಡ್ಮಿಸಿಬಿಲಿಟಿ ಬಗ್ಗೆ ವಿಚಾರ ಮಾಡಿ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅಪ್ಪಣೆ ಕೊಡಬಹುದು ಅಥವಾ ರಿಜೆಕ್ಟ್ ಮಾಡಬಹುದು. ಅಥವಾ ಬೇರೆ ನಿಯಮಾವಳಿಗಳ ಪ್ರಕಾರ ಇದನ್ನು ಕನ್ವರ್ಟ್ ಮಾಡಬಹುದು. ಆದ್ದರಿಂದ ನಾನು ಏನು ಮಾಡುತ್ತಿದ್ದೇನೆ ಎಂದರೆ, ಅಡ್ಮಿಸಿಬಿಲಿಟಿ ಬಗ್ಗೆ ನೀವು ಹತ್ತು ನಿಮಿಷ ಮಾತನಾಡಿರಿ, ಶ್ರೀ ಖರ್ಗೆಯವರು ಹತ್ತು ನಿಮಿಷ ಮಾತನಾಡಲಿ ಆ ಮೇಲೆ ಸರ್ಕಾರ ಹೇಳುವುದನ್ನು ಕೇಳಿಕೊಂಡು ನಂತರ ಅಡ್ಮಿಸಿಬಿಲಿಟಿ ಬಗ್ಗೆ ತೀರ್ಮಾನ ಕೊಡುತ್ತೇನೆ. ಈಗ ಹತ್ತು ಹತ್ತು ನಿಮಿಷ ಮಾತನಾಡಿರಿ.

ಶ್ರೀ ಕೆ.ಎಚ್. ಶ್ರೀನಿವಾಸ್.—ಇದನ್ನೇ ನಾನು ಶಂಕು ಹೊಡೆದುಕೊಂಡಿದ್ದು.

ಅಧ್ಯಕ್ಷರು.—ನೀವು ಇಲ್ಲಿ ಬಂದು ಕುಳಿತುಕೊಂಡು ನೋಡಿ, ಆಗ ಗೊತ್ತಾಗುತ್ತದೆ.

† ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ಅಧ್ಯಕ್ಷರೇ, ಧನ್ಯವಾದಗಳು. ಶ್ರೀ ದೇವೇಗೌಡರು ಇದರಲ್ಲಿ ಅನೇಕ ಸಮಸ್ಯೆಗಳನ್ನು ಸೇರಿಸಿಬಿಟ್ಟು ಒಂದಕ್ಕಿಂತ ಹೆಚ್ಚು ಪಾಯಿಂಟ್ ಮೇಲೆ ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದಾರೆ ಎಂದು ಹೇಳಿದರು. ಇದು ಅವರ ಮೊದಲನೆಯ ತಪ್ಪು ಏಕೆಂದರೆ ಇವೆಲ್ಲ ಸಪೋರ್ಟಿಂಗ್ ಫ್ಯಾಕ್ಟರ್ಸ್. ನಮ್ಮ ಮುಖ್ಯ ಪಾಯಿಂಟ್ ಎಂದರೆ, ಕಾನೂನು ಪ್ರಕಾರ ಚುನಾವಣೆ ನಂತರ ನಾಲ್ಕು ವಾರಗಳಲ್ಲಿ ಪ್ರಧಾನ ಮತ್ತು ಉಪಪ್ರಧಾನ ಚುನಾವಣೆ ಸೇರಿದಂತೆ ಮಂಡಲ್ ಪಂಚಾಯತ್ ರಚನೆ ಆಗಬೇಕಿತ್ತು. ಸರ್ಕಾರದ ಇತ್ತೀಚಿನ ಆದೇಶದ ಪ್ರಕಾರ ನಾಮಕರಣ ಮಾಡಿದ ನಂತರವೇ ಪ್ರಧಾನ ಮತ್ತು ಉಪಪ್ರಧಾನ ಚುನಾವಣೆ ಮಾಡಬೇಕಾಗಿದೆ ಎಂದು ಸರ್ಕಾರ ಸುತ್ತೋಲೆ ಮೂಲಕ ಜಿಲ್ಲಾಧಿಕಾರಿಗಳಿಗೆ ತಿಳಿಸಿರುವುದು ಕಾನೂನು ಬಾಹಿರವಾಗಿದೆ. ಇದು ನಮ್ಮ ಮೊದಲನೆಯ ಪಾಯಿಂಟು. ಬಾಕಿ ಎಲ್ಲಾ ಸಪೋರ್ಟಿಂಗ್ ಪಾಯಿಂಟ್‌ಗಳು. ಅದಕ್ಕೋಸ್ಕರ ನನ್ನ ಅಬ್ಜೆಕ್ಷನ್‌ನ್ನು ಎತ್ತಿಹಿಡಿಯಬೇಕು ಮತ್ತು ಎಲ್ಲಾ ವಿಚಾರ ಹೇಳುವುದಕ್ಕೆ ಅವಕಾಶ ಕೊಡಬೇಕೆಂಬುದು ನನ್ನ ಮೊದಲ ಪ್ರಾರ್ಥನೆ. ಅಧ್ಯಕ್ಷರೇ, ಈ ಎಲೆಕ್ಷನ್ ಡಣಾಡಂಗೂರ ಎರಡು–ಮೂರು ವರ್ಷಗಳಿಂದ ಹೊಡೆದು ಎಲೆಕ್ಷನ್ ಮಾಡಿ ಆಯಿತು. ನಮ್ಮ ಅಧಿಕಾರ ನಿಮಗೆ ಕೊಟ್ಟು, ನಮ್ಮ ಆಡಳಿತ ಎಲ್ಲಾ ನಿಮ್ಮದಾಯಿತು ಎಂದು ಹೇಳಿದರು. ಇದಾದಮೇಲೆ ಇಲ್ಲಿ ದೊಡ್ಡ ಜಾತ್ರೆ ಮಾಡಿದರು. ಅದೂ ಆಯಿತು. ಈ ದೊಡ್ಡ ಜಾತ್ರೆಯನ್ನು

ಮಾಡುವಾಗ ತಹಸೀಲ್ದಾರರ ಕೈಯಲ್ಲಿ ಅಲ್ಲಿ ಇಲ್ಲಿ ಎಲೆಕ್ಟ್ ಮಾಡತಕ್ಕಂಥ ಎಲ್ಲಾ ಮೆಂಬರುಗಳನ್ನು ಅವರಿಗೆ ಅಂತಹ, ಇಂತಹ ಮೆಂಬರುಗಳೆಂದು ಪಟ್ಟಿ ಹಚ್ಚಿ ಅದನ್ನು ಪ್ರಕಟಣೆ ಮಾಡಿ ಇಲ್ಲಿ ಜಾತ್ರೆಗೆ ಕರೆದುಕೊಂಡು ಬಂದಿದ್ದೂ ಆಯಿತು. ಕರೆದುಕೊಂಡು ಬಂದಮೇಲೆ, ನಿಮ್ಮ ಸೆಕ್ಷನ್ ೪೩ರಲ್ಲಿ ಹೇಳಿದೆ. ನಾಲ್ಕು ವಾರದಲ್ಲಿ ಪ್ರಧಾನ ಮತ್ತು ಉಪಪ್ರಧಾನರನ್ನು ನೇಮಿಸಬೇಕು ಎಂದು ಹೇಳಿ ಆ್ಯಕ್ಟಿನಲ್ಲಿದೆ. ಅದನ್ನು ಉಲ್ಲಂಘನೆ ಮಾಡಿರುವುದು ದೊಡ್ಡ ತಪ್ಪು. ಇಷ್ಟು ಸಾಲದು ಎಂದು ಕೆಲವು ಜಿಲ್ಲಾ ಪರಿಷತ್ತುಗಳಿಗೆ ಪ್ರಧಾನ ಮತ್ತು ಉಪಪ್ರಧಾನರನ್ನು ಎಲೆಕ್ಟ್ ಮಾಡಿ ಎಂದು ನೋಟೀಸ್ ಕಳಿಸಿದ್ದನ್ನು ತಿರುಗಿ ವಾಪಸ್ಸು ತೆಗೆದುಕೊಂಡಿದ್ದಾರೆ, ವಿತ್ ಡ್ರಾ ಮಾಡಿ ಕೊಂಡಿದ್ದಾರೆ. ಇದು ಎರಡನೆಯ ತಪ್ಪು. ಮೊದಲನೆಯ ದಿವಸ ಒಂದು ಸುತ್ತೋಲೆಯನ್ನು ೫ನೇ ತಾರೀಖು ಹೊರಡಿಸಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಅದನ್ನು ವಿತ್ ಡ್ರಾ ಮಾಡಿಕೊಂಡಿರುವುದು ಎರಡನೇ ತಪ್ಪು. ಒಂದು ಸುತ್ತೋಲೆ ಹೊರಡಿಸಿದ್ದಾರೆ. ಆ ಪ್ರಕಾರ ಇಲ್ಲಿ ಇಬ್ಬರನ್ನು ನಾಮಿನೇಷನ್ ಮಾಡಬೇಕು ಬ್ಯಾಕ್‌ವರ್ಡ್ ಕ್ಲಾಸ್‌ನವರು ಆಗಿರಬೇಕು, ಅವರ ಆದಾಯ ೬೪೦೦ ರೂಪಾಯಿಗಳ ಒಳಗಿರಬೇಕು, ಅವರು ಆರ್ಟಿಸಾನ್ ಲೇಬರ್ಸ್ ಆಗಿರಬೇಕು ಹೀಗೆ ೨-೩ ಕಂಡೀಷನ್ ಹಾಕಿ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದೂ ತಾರೀಖು ೨೫ ಎಂದು ಹಾಕಿದ್ದಾರೆ. ಇದು ನಮಗೆ ಸಿಕ್ಕಿರುವುದು ನಿನ್ನೆ ಮೊನ್ನೆ. ಅಬ್ಜೆಕ್ಷನ್ ಫೈಲ್ ಮಾಡಬೇಕಾದರೆ ೧೫ ದಿವಸ ಟೈಮ್ ಬೇಕು. ಅಷ್ಟರಲ್ಲಿ ನಮಗೆ ಸುತ್ತೋಲೆ ಸಿಕ್ಕಲಿಲ್ಲ. ಇದರಲ್ಲೂ ಸಹ ಕುತಂತ್ರ. ಬ್ಯಾಕ್‌ವರ್ಡ್ ಕ್ಲಾಸ್ ಯಾರೆಂದು ೧೯೮೩ರಲ್ಲಿಯೇ ಗುರುತಿಸಿದ್ದಾರೆ. ಅದಕ್ಕೆ ಒಂದು ದೊಡ್ಡ ಯಾದಿಯೇ ಇದೆ. ಬ್ಯಾಕ್‌ವರ್ಡ್ ಕ್ಲಾಸ್ ಎಂಪ್ಲಾಯ್‌ಮೆಂಟ್‌ಗೆ ಒಂದು, ಎಜುಕೇಷನ್‌ಗೆ ಒಂದು, ಊಟಕ್ಕೇ ಒಂದು, ತಿಂಡಿಗೇ ಒಂದು ಮಾಡುವುದಕ್ಕಾಗುವುದಿಲ್ಲ. ವೆಂಕಟಸ್ವಾಮಿ ರಿಪೋರ್ಟ್ ಬಂದು, ಬ್ಯಾಕ್‌ವರ್ಡ್ ಕ್ಲಾಸ್ ಯಾರೆಂದು ಐಡೆಂಟಿಫೈ ಮಾಡಿದ್ದಾರೆ. ಅದು ಬಿಟ್ಟು ಇಲ್ಲಿ ನಾಮಿನೇಷನ್ ಮಾಡುವ ಸಲುವಾಗಿಯೇ ಆರ್ಟಿಸಾನ್, ೬೪೦೦ ರೂಪಾಯಿಗಳ ಆದಾಯ ಇರಬೇಕೆಂದು ತೆಗೆದರು ಮತ್ತೆ ಲ್ಯಾಂಡ್‌ಲೆಸ್ ಲೇಬರರ್ಸ್ ಎಂದು. ಲ್ಯಾಂಡ್‌ಲೆಸ್ ಲೇಬರರ್ಸ್ ಯಾರೂ ಅಲ್ಲ. ಕುಂಬಾರ, ಬಡಗಿ, ನೇಯ್ಗೆ, ರೇಷ್ಮೆ ನೂಲುವವನು, ಕಸೂತಿ ಹಾಕುವ ಹೆಣ್ಣು ಮಕ್ಕಳು, ಇವರೆಲ್ಲರೂ ಆರ್ಟಿಸಾನ್ಸ್. ನೀವು, ನಿಮಗೆ ಬೇಕು ಬೇಕಾದ ಕ್ಲಾಸ್ ಮಾಡಿಕೊಂಡು ಅವ್ಯವಸ್ಥೆಯಾಗಿದೆ ಇದನ್ನು ಮಾಡುವುದು ಸ್ವಲ್ಪವೂ ಸರಿಯಲ್ಲ. ಒಂದೊಂದಕ್ಕೆ ಯಾರ್ಡ್‌ಸ್ಟಿಕ್ ಮಾಡಿಕೊಂಡು ಒಂದೊಂದು ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಇದನ್ನು ಬೇಕಾದರೆ ನಾನು substantiate ಮಾಡುತ್ತೇನೆ. ಆದ್ದರಿಂದ ತಾವು ದಯವಿಟ್ಟು ನನ್ನ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಪರ್ಮಿಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ (ಗುರುಮಿಠ್ಕಲ್).—ಮಾನ್ಯ ಅಧ್ಯಕ್ಷರೇ, ತಾವು ನಮ್ಮ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಈಗಾಗಲೇ ನಮ್ಮ ನಾಯಕರು ಹೇಳಿದಹಾಗೆ, ಈ ಒಂದು ಮಂಡಲ್ ಪಂಚಾಯ್ತಿ ಪ್ರಧಾನ ಮತ್ತು ಉಪ ಪ್ರಧಾನರ ಚುನಾವಣೆ ೪ ವಾರಗಳಲ್ಲಿ ನಡೆಯಬೇಕಾಗಿತ್ತು. ಇದಕ್ಕೆ ಸರ್ಕಾರದವರು ತಮಗೆ ಬೇಕಾದ ರೀತಿಯಲ್ಲಿ, ಮಂಡಲ್ ಪಂಚಾಯ್ತಿಗಳನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕೆಂದು ಹೊಸ ಕುತಂತ್ರವನ್ನು ಮಾಡಿ ಇವತ್ತಿನ ದಿವಸ ಹೊಸ ನೋಟಿಫಿಕೇಷನ್ ಇಷ್ಯೂ ಮಾಡಿದ್ದಾರೆ. ಕಾನೂನು ಪ್ರಕಾರ ಅವರು ೪ ವಾರಗಳಲ್ಲಿ ಚುನಾವಣೆ ಮಾಡಬೇಕಾಗಿತ್ತು. ಇದು ಸೆಕ್ಷನ್ ೪೦ ಮತ್ತು ೪೩ ರಲ್ಲೂ ಇದೆ.

೨-೦೦ ಪಿ.ಎಂ.

ಅಧ್ಯಕ್ಷರೇ ತಾವು ಈ ಕಡೆ ಗಮನ ಕೊಟ್ಟರೆ ಒಳ್ಳೆಯದು, ನೀವು ನಿಜವಾಗಲೂ ಪ್ರಜಾಪ್ರಭುತ್ವದಲ್ಲಿ ಆಸಕ್ತಿ ಇರತಕ್ಕಂಥವರು, ಅದರಲ್ಲೂ ಹಳ್ಳಿಯಲ್ಲಿ ಇರತಕ್ಕಂಥವರು............

ಶ್ರೀ ಅಬ್ದುಲ್ ನಜೀರ್ ಸಾಬ್.—ಏನು ಇದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆಯೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಇವರಿಗೆ ಏತಕ್ಕೆ ಇಷ್ಟೊಂದು ಆತುರ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಏತಕ್ಕೆ ಆತುರ ಎಂದರೆ, ನಿಮಗೆ ಯಾವ ರೀತಿ ಆತುರ ಇದೆಯೋ ನಮಗೂ ಅದೇ ರೀತಿ ಇದೆ. ನಿಮಗೆ ಮಾತ್ರ ನಿಯಮಗಳ ಚೌಕಟ್ಟು ನಮಗೆ ನಿಯಮಗಳು ಇಲ್ಲವೇನೋ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಾನು ಈಲ್ಡ್ ಆಗಿಲ್ಲ.

ಅಧ್ಯಕ್ಷರು.—ನಾನು ಏನು ನಿಮ್ಮ ಅಭಿಪ್ರಾಯ ತಿಳಿದುಕೊಂಡು ಇದರ ಅಡ್ಮಿಸಿಬಿಲಿಟಿ ಬಗ್ಗೆ ವಿಚಾರ ಮಾಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಧ್ಯಕ್ಷರೆ, ಇದು ನನಗೆ ಅರ್ಥವಾಗಿಲ್ಲ. ಅಡ್ಮಿಸಿಬಿಲಿಟಿ ಬಗ್ಗೆ ಅವರು ಏನು ಹೇಳುತ್ತಾರೆ, ನಾವೂ ಸಹ ಹೇಳುತ್ತೇವೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅವರು ಹೇಳುವುದನ್ನು ಬೇಡ ಎನ್ನುವುದಕ್ಕೆ ಆಗುತ್ತದೆಯೋ ಅಧ್ಯಕ್ಷರೇ, ನೀವು ಹೇಳಿ, ನೀವು ಹೇಳುವುದನ್ನು ತಡೆಯುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಹೇಳಿ, ನಾವು ಕೇಳಿ ಸಾಕಾಗಿದೆ. ನಾನು ಹೇಳುವುದನ್ನು ಇನ್ನೊಮ್ಮೆ ಕೇಳಿ.

ಅಧ್ಯಕ್ಷರು.—ಈಗ ಇದರ ಅಡ್ಮಿಸಿಬಿಲಿಟಿ ಬಗ್ಗೆ ಚರ್ಚೆ ಆಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಜಾಪ್ರಭುತ್ವದ ತತ್ವದ ಪ್ರಕಾರ ನಿಮ್ಮ ಕಾನೂನು ಪ್ರಕಾರ ನಾಲ್ಕು ವಾರಗಳಲ್ಲಿ ಚುನಾವಣೆ ನಡೆಯಬೇಕಾದುದನ್ನು ಏತಕ್ಕೆ ತಪ್ಪಿಸಿದರು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಈ ದಿಸೆಯಲ್ಲಿ ಅಧ್ಯಕ್ಷರ ಮನ ಒಲಿಸತಕ್ಕಂಥ ಪ್ರಯತ್ನ ಮಾಡುತ್ತಿದ್ದೇನೆ. ಎಂಟೈರ್ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಟ್ಟು ಹೇಳುತ್ತಿಲ್ಲ. ನಿಯಮ ೪೩ರಲ್ಲಿ ಏನು ಹೇಳಲಾಗಿದೆ ಎಂದರೆ.

> "Election of Pradhan on establishment of Mandal Panchayath. On the establishment of Mandal Panchayath for the first time under this Act or on its reconstitution or establishment under Section 132 or on its re-constitution on the expiry of the term of the Members of Mandal Panchayath a meeting of the Mandal Panchayath shall be called within four weeks from the date of commencement of the term of office of the Members of the Mandal Panchayath under section 40 by the prescribed officer who shall himself preside over the meeting, but shall have no right to vote and the meeting shall proceed to elect a Pradhan."

ಎಂದು ಕಾನೂನು ಪ್ರಕಾರ ೪ ವಾರಗಳಲ್ಲಿ ಚುನಾವಣೆ ಆಗಬೇಕಾಗಿತ್ತು. ಆದರೆ ಇವರು ಏತಕ್ಕೆ ಇದನ್ನು ತಪ್ಪಿಸಿದರು ಎಂದರೆ, ನಾಮಿನೇಟ್ ಮಾಡುವುದಕ್ಕೆ ಒಂದೆರಡು ಬ್ಯಾಕ್‌ವರ್ಡ್‌ಕ್ಲಾಸ್ ಜನರನ್ನು ನಾಮಿನೇಟ್ ಮಾಡಬೇಕೆಂದು ಸೆಕ್ಷನ್ ೫ರ ಸಬ್‌ಕ್ಲಾಸ್ (೩) ನಲ್ಲಿ ಈ ಪ್ರಕಾರ ಹೇಳಿದೆ.

> "Where no person belonging to backward-class is elected to a Mandal Panchayath the Zilla Parishad shall nominate two persons belonging to the said class to the Mandal Panchayath."

ಈ ಒಂದು ಸೆಕ್ಷನ್ ೫ ಸಬ್‌ಕ್ಲಾಸ್ (೩)ರ ಪ್ರಕಾರ ಇಬ್ಬರು ಬ್ಯಾಕ್‌ವರ್ಡ್ ಕ್ಲಾಸಸ್‌ನವರನ್ನು ನಾಮಿನೇಟ್ ಮಾಡಬೇಕಾಗಿತ್ತು. ಬ್ಯಾಕ್‌ವರ್ಡ್ ಕ್ಲಾಸ್ ಯಾರು ಎಂಬುದನ್ನು ಇಲ್ಲಿ ಹೇಳಿದ್ದಾರೆ.

> "Backward class means such class as may be prescribed."

ಇದನ್ನು ಇವರು ಪ್ರಿಸ್ಕ್ರೈಬ್ ಮಾಡಿದ್ದಾರೆ. ಈ ರೂಲ್ಸ್ ಪ್ರಕಾರ ನೋಟಿಫಿಕೇಷನ್ ಹೊರಡಿಸಿ, ಇದಕ್ಕೆ ತಕ್ಕಂತೆ ರೂಲ್ಸ್ ಮಾಡಿದರು. ೧೦ನೇ ಮಾರ್ಚ್ ೮೬ರಲ್ಲಿ ರೂಲ್ಸ್ ತಂದಿದ್ದಾರೆ. ಅದರಲ್ಲಿ ಏನು ಹೇಳುತ್ತಾರೆ ಎಂದರೆ.

> "Backward class means the backward communities, backward castes and backward tribes notified by the Government in order No. DPAI. SBC. 77 dated 4th March, 1977 or such other order as may be issued from time to time."

ಈ ೧೯೭೭ ರ ಆರ್ಡರ್ ಇವತ್ತು ಅಸ್ತಿತ್ವದಲ್ಲಿ ಇಲ್ಲ. ವೆಂಕಟಸ್ವಾಮಿ ರಿಪೋರ್ಟ್ ಕೊಟ್ಟಮೇಲೆ ಒಂದು ಗದ್ದಲ ಆಯಿತು, ಅದು ತಮಗೆ ಗೊತ್ತಿದೆ, ಅದರ ಮೆರಿಟ್ಸ್ ಮೇಲೆ ನಾನು ಹೋಗುವುದಿಲ್ಲ. ಸರಕಾರ ಮುಂದೆ ಒಂದು ಹೊಸ ಆಜ್ಞೆಯನ್ನು ೧೫ ಅಕ್ಟೋಬರ್ ೧೯೮೬ ರಲ್ಲಿ ಹೊರಡಿಸಿ, ಬ್ಯಾಕ್‌ವರ್ಡ್‌ಕ್ಲಾಸ್ ಎಂದರೆ ಯಾರು ಎಂಬುದನ್ನು ಡಿಫೈನ್ ಮಾಡಿದರು.

ಬ್ಯಾಕ್‌ವರ್ಡ್ ಕ್ಲಾಸ್ಟನವರು ಯಾರುಯಾರು ಎನ್ನುವುದನ್ನು ಡಿಫೈನ್ ಮಾಡಿದರು. ಇಂತಿಂತಹವರು ಬ್ಯಾಕ್‌ವರ್ಡ್ ಕ್ಲಾಸ್ಟನವರು ಎಂದು ಹೇಳಿ ಅದರಲ್ಲಿ ಎ ಬಿ ಸಿ ಡಿ. ಎಂದು ನಾಲ್ಕು ಗ್ರೂಪ್ ಮಾಡಿ ಒಂದು ಆರ್ಡರ್ ಹೊರಡಿಸಿದ ಮೇಲೆ ಹಿಂದಿನ ಆರ್ಡರ್ ಅಸ್ತಿತ್ವವನ್ನು ಕಳೆದು ಕೊಂಡು ಈ ಆರ್ಡರ್ ಅಸ್ತಿತ್ವಕ್ಕೆ ಬಂತು. ಈ ಒಂದು ಕಾನೂನು ಪ್ರಕಾರ, ಈ ಒಂದು ಆಕ್ಟ್ ಪ್ರಕಾರ, ಈ ಒಂದು ಪ್ರಾವಿಜನ್ ಪ್ರಕಾರ, ನಾಮಿನೇಟ್ ಮಾಡುವುದಕ್ಕೆ ಬರುವುದಿಲ್ಲ ಕಾನೂನಿನ ಪ್ರಕಾರ ನಾಲ್ಕು ವಾರಗಳಲ್ಲಿ ಏತಕ್ಕೆ ಚುನಾವಣೆಗಳನ್ನು ಮಾಡಲಿಲ್ಲ ? ಈ ಒಂದು ಕಾನೂನಿನ ಪ್ರಕಾರ ಚುನಾವಣೆಗಳನ್ನು ಮಾಡಿದರೆ ಇವರಿಗೆ ಅನುಕೂಲವಾಗುವುದಿಲ್ಲವೆಂದು ತಿಳಿದುಕೊಂಡು ಇದಕ್ಕೆ ಬೇರೆ ಅವರದೇ ಒಂದು ಡೆಫನೇಶನ್ ಕೊಟ್ಟು ಪ್ರಜಾಪ್ರಭುತ್ವವನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದಾರೆ ಇವತ್ತಿನ ದಿವಸ ನಮಗೆ ಗೊತ್ತಿರುವ ಪ್ರಕಾರ ೩೦೦ ಮಂಡಲ ಪಂಚಾಯಿತಿಗಳಲ್ಲಿ ಸ್ವತಂತ್ರವಾಗಿ ಗೆದ್ದು ಬಂದಿರುವವರ ಕೈಗೆ ಹೋಗುತ್ತವೆ. ಇನ್ನು ೧೦೦-೧೫೦ ಮಂಡಲ ಪಂಚಾಯಿತಿಗಳಲ್ಲಿ ಬೇರೆ ಪಕ್ಷದವರು ಮೆಜಾರಿಟಿ ಒಂದು ಎರಡು ಸೀಟುಗಳಲ್ಲಿ ಬರುತ್ತದೆ. ಅದಕ್ಕೆ ಇವರೇನು ಮಾಡುತ್ತಿದ್ದಾರೆಂದರೆ ತಮಗೆ ಬೇಕಾದವರನ್ನು ತಮ್ಮ ಪಕ್ಷದಿಂದ ನಾಮಕರಣ ಮಾಡಿದರೆ ಆ ಮಂಡಲ ಪಂಚಾಯಿತಿಗಳನ್ನು ಸಹ ತಮ್ಮ ವಶಕ್ಕೆ ತೆಗೆದುಕೊಳ್ಳಬಹುದು ಎನ್ನುವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆ. ಮತ್ತು ಮುಂದೆ ವಿಧಾನ ಪರಿಷತ್ತು ಚುನಾವಣೆಗಳು ಬಂದಾಗ ಅಲ್ಲಿಯೂ ಕೂಡ ತಮ್ಮ ಪಕ್ಷದ್ದೆ ಬಹುಮತ ಪಡೆದುಕೊಳ್ಳಬಹುದು ಎನ್ನುವ ದುರುದ್ದೇಶವನ್ನು ಇಟ್ಟುಕೊಂಡು ಈ ರೀತಿ ಮಾಡುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ವಿರೋಧಪಕ್ಷದ ನಾಯಕರುಗಳ ಕ್ಷೇತ್ರದಲ್ಲಿ ಸುಮಾರು ೧೫೨ ಮಂಡಲ ಪಂಚಾಯಿತಿ ಕ್ಷೇತ್ರಗಳು ತಮ್ಮ ಪಕ್ಷಕ್ಕೆ ಹೋಗುತ್ತವೆ .....

ಶ್ರೀ ಎಸ್. ಬಂಗಾರಪ್ಪ.—ಈಗ ಎಂ. ಎಲ್. ಎ. ಗಳು ಹೇಳಿದವರನ್ನು ತಾವು ನಾಮಕರಣ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಅದು ಆಗುವುದಿಲ್ಲ ತಮ್ಮ ಅಭಿಪ್ರಾಯ ಆ ರೀತಿ ಇರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಈಗಾಗಲೇ ಲಿಸ್ಟ್ ಸಹ ತಯಾರು ಮಾಡಿರಬಹುದು. ಏಕೆಂದರೆ ೩೧ನೇ ತಾರೀಖಿನ ದಿವಸ ಎಲ್ಲಾ ಮಂಡಲ ಪಂಚಾಯಿತಿ ಪ್ರತಿನಿಧಿಗಳನ್ನು ಐಡೆಂಟಿಫಿಕೇಷನ್ ಕಾರ್ಡ್‌ಕೊಟ್ಟು ಬೆಂಗಳೂರಿಗೆ ಅವರನ್ನು ಕರೆಯಿಸಿಕೊಂಡರು. ಆ ಪ್ರತಿನಿಧಿಗಳನ್ನು ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್ಸ್ ಅಥವಾ ತಹಸೀಲ್ದಾರರು ಕರೆದುಕೊಂಡು ಬಂದಿದ್ದರು. ಅವರ ಲಿಸ್ಟನ್ನು ಪಬ್ಲಿಷ್ ಮಾಡದಿದ್ದರೆ ಅವರನ್ನು ಕರೆದುಕೊಂಡು ಬರುತ್ತಿರಲಿಲ್ಲವೆಂದು ನನ್ನ ಅಭಿಪ್ರಾಯ. ಇದ ಒಂದು ಕಡೆ ಇನ್ನೊಂದು ಕಡೆ ಮುಂದೆ ಬರತಕ್ಕ ಕೌನ್ಸಿಲ್ ಎಲೆಕ್ಷನ್‌ನಲ್ಲಿ ತಮ್ಮ ಮೆಜಾರಿಟಿ ಮಾಡಿಕೊಂಡು ನಾಮಿನೇಟ್ ಮಾಡಿ ಆ ಮಂಡಲಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ದುರುದ್ದೇಶದಿಂದ ಈ ಕೆಲಸವನ್ನು ಮಾಡಿದ್ದಾರೆ ಈಗ ಸೆಕ್ಷನ್ ೫(೯)ರಲ್ಲಿ ತಾವೇನು ಹೇಳಿದ್ದೀರಿ,

"The Deputy Commissioner shall publish in the prescribed manner the names of members elected or deemed to have been duly elected or nominated."

ಲಿಸ್ಟನ್ನು ಯಾವಾಗ ಮಾಡಬೇಕೆನ್ನುವುದು ಇದರಲ್ಲಿ ಇದೆ. ಲಿಸ್ಟ್ ಮಾಡಿದ್ದರೂ ಮಾಡಿರ ಬಹುದು ಈಗಾಗಲೇ ಅನೇಕ ಕೆಲಸಕಾರ್ಯಗಳನ್ನು ನಡೆಸಿದ್ದೀರಿ ಅದಾದ ಮೇಲೂ ಕೂಡ ಮುಂದೆ ಒಂದು ಮಾತನ್ನು ಹೇಳಿದ್ದೀರಿ, ಅದೇನೆಂದರೆ ಸೆಕ್ಷನ್ ೪೦ರ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಈ ರೀತಿ ಹೇಳಿದ್ದೀರಿ ಅದು ಹೀಗಿದೆ.

"When the names of members elected at a general election or at a second election under Sub-section (7) of Section 5 or nominated or published on more than one date, the date on which the names of not less than 2/3 of the total number of members has been published shall be deemed to be the date of publication for purposes of this section."

ಮೆಂಬರ್ಸ್ ಇದ್ದರೆ ಪ್ರಧಾನರ ಮತ್ತು ಉಪಪ್ರಧಾನ ಚುನಾವಣೆ ನಡೆಯಬೇಕೆಂದು ಇದೆ. ಇಲ್ಲಿ ಒಂದು ಬಾಡಿ ಕಾನ್‌ಸ್ಟಿಟ್ಯೂಟ್ ಆಗಿದೆ. ಚುನಾವಣೆಯನ್ನು ಕಾನೂನಿನ ಪ್ರಕಾರ ಮಾಡಿದ್ದೀರಾ ? ನಾಲ್ಕು ವಾರಗಳಲ್ಲಿ ಚುನಾವಣೆ ಮಾಡಬೇಕೆಂದಿದ್ದರೂ ಸಹ ಮಾಡಲಿಲ್ಲ. ತದನಂತರ ನೀವೇನು ಮಾಡಿದ್ದೀರಿ. ನಿಮಗೆ ಅನುಕೂಲವಾಗುವ ರೀತಿಯಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ಟ್ ಡೆಫಿನಿಶನ್ ಅನ್ನು ಚೇಂಜ್ ಮಾಡಿದ್ದೀರಿ. ಕಾನೂನಿನಲ್ಲಿರತಕ್ಕಂಥಾದ್ದನ್ನು ಚೇಂಜ್ ಮಾಡಿದಿರಿ ರೂಲ್ಸ್‌ಅನ್ನು ಚೇಂಜ್ ಮಾಡಿದಿರಿ ಈಗ ತಾವೇನು ಒಂದು ಡೆಫಿನಿಶನ್ ಮಾಡಿದ್ದೀರಿ ಅದಕ್ಕೆ ಒಂದು ಹಿಂದಿನ ಡೇಟ್ ಹಾಕಿದ್ದೀರಿ.

ಇಲ್ಲಿ ನಾವು ೨೯ ನೇ ತಾರೀಖು ಇಲ್ಲಿ ಸೇರಿದ್ದೇವೆ. ಆಗ ಈ ನೋಟಿಫಿಕೇಷನ್ ಯಾರ ಕೈಯಲ್ಲೂ ಇರಲಿಲ್ಲ. ಈ ಸದನದಲ್ಲೂ ಇರಲಿಲ್ಲ. ಒಬ್ಬ ಶಾಸಕರಿಗೂ ಇದನ್ನು ಕಳುಹಿಸಿ ಕೊಡಲಿಲ್ಲ. ಹಿಂದಿನ ಡೇಟ್ ಹಾಕಿ ಮೂರು ದಿವಸಗಳ ಹಿಂದೆ ಇದನ್ನು ಇಷ್ಯೂ ಮಾಡಿದ್ದಾರೆ. ಅಂದರೆ, ಇದನ್ನೂ ಹೊರಡಿಸಿದ ದಿನದಿಂದ ೧೫ ದಿವಸಗಳೊಳಗೆ ಅಬ್ಜಕ್ಷನ್ ಫೈಲ್ ಮಾಡುವುದಕ್ಕೆ ಅವಕಾಶ ಇದೆ. ೧೫ ದಿವಸಗಳ ಒಳಗೇ ನಮಗೆ ಸಿಕ್ಕಿದ್ದಿದ್ದರೆ ಅಬ್ಜಕ್ಷನ್ ಫೈಲ್ ಮಾಡುತ್ತಾರೆಂದು ಹಿಂದಿನ ಡೇಟ್‌ನಲ್ಲಿ ನೋಟಿಫಿಕೇಷನ್ ಇಶ್ಯೂ ಆಗಿರುವಂತೆ ಮಾಡಿ ಈಗ ನಮಗೆ ಕೊಟ್ಟಿದ್ದಾರೆ.

"Such persons likely to be affected thereby and notice is given hereby that such draft will be taken into consideration within 15 days from the date of publication of the notification in the Official Gazette"

ಇದನ್ನು ಯಾವಾಗ ಪಬ್ಲಿಷ್ ಮಾಡಿದರು ಎಂಬುದೇ ನಮಗೆ ಗೊತ್ತಿಲ್ಲ. ಸದನ ನಡೆಯುತ್ತಿದ್ದಾಗಲೂ ನಮ್ಮ ಗಮನಕ್ಕೆ ತಂದಿಲ್ಲ. ನಿಮ್ಮ ಆಫೀಸ್‌ನಲ್ಲೂ ಈ ನೋಟಿಫಿಕೇಷನ್ ಸಿಗಲಿಲ್ಲ. ನಿಮ್ಮ ಸೆಕ್ರೆಟರಿಗಳೇ ಈ ನೋಟಿಫಿಕೇಷನ್‌ಗಾಗಿ ಮಾನ್ಯ ಕೆ.ಹೆಚ್.ಪಾಟೀಲರನ್ನು ಕೇಳುತ್ತಿದ್ದರು ಎಂದರೆ, ಈ ನಿಯಮವನ್ನು ಯಾವ ಉದ್ದೇಶಕ್ಕಾಗಿ ಮಾಡಿದ್ದಾರೆಂದು ತಾವೇ ಅರ್ಥ ಮಾಡಿಕೊಳ್ಳಿ. ಇದರ ಬಗ್ಗೆ ನಾವು ಡಿಟೇಲ್ ಆಗಿ ಹೇಳಬೇಕಾಗುತ್ತದೆ. ಇದರಲ್ಲಿ ಇವರ ಒಂದು ದುರುದ್ದೇಶ ಇದೆ. ಇವರು ಇದನ್ನು ಕಾನೂನು ಪ್ರಕಾರ ಮಾಡಬೇಕು ಎಂದು ಹೇಳುತ್ತಾರೆ. ಇನ್ನೊಂದು ಕಡೆ ತಮ್ಮ ಉದ್ದೇಶವನ್ನು ಸಾಧಿಸಬೇಕೆಂದು ಹೇಳಿ, ಈಗ ನಮ್ಮ ನೋಟಿಫಿಕೇಷನ್ ಬರುತ್ತಿದೆ ಆದರೆ ಮಂಡಲಗಳಿಗೆ ನಾಮಿನೇಟ್ ಮಾಡುವುದಾಗಲೀ ಚುನಾವಣೆ ನಡೆಸತಕ್ಕಂಥದ್ದಾಗಲೀ ಸ್ವಲ್ಪ ನಿಧಾನವಾಗಬೇಕು ಎನ್ನತಕ್ಕ ಅರ್ಥದಲ್ಲಿ ಒಂದು ಟೆಲೆಕ್ಸ್ ಮೆಸೇಜ್‌ನ್ನು ಕೊಟ್ಟಿದ್ದಾರೆ. ಇದನ್ನು ತಮ್ಮ ಗಮನಕ್ಕೆ ಸಂಪೂರ್ಣವಾಗಿ ತರುತ್ತೇನೆ. ನಮ್ಮ ಮಾನ ಉಳಿಸುವುದಕ್ಕೆ ಮತ್ತು ಇದರ ಬಗ್ಗೆ ಮಾಹಿತಿ ಕೊಡಬೇಕು ಎನ್ನುವ ದೃಷ್ಟಿಯಿಂದ ನಾನು ಇದನ್ನು ಓದಿ ಹೇಳುತ್ತೇನೆ.

Under section 5(3) of the Act it is provided that Zilla Parishad will nominate 2 persons belonging to backward

communities on each Mandae Panchayat provided the members of backward communities are not already elected as members of the Mandal. According to the proposed amendment to the rules for conduct of elections, rural artisan and landless labourers whose gross household income does not exceed 6,400, alone be treated as Backward class. The decision to nominate these members on the mandals will have to be taken at the meeting of the · Zilla Parishad. Therefore, before holding such meeting the Zilla Parishad will have to examine the list of Mandal Panchayats Members already elected to find out whether the persons belonging to backward class now defined are already represented on the Mandal. For this purpose not only their profession but income of the household will also have to be ascertained by making enquiries with the Assistant or Deputy Commissioner and other revenue officers. Consequent to this enquiries a decision will have to be taken whether Zilla Parishad should make nominations even in respect of the persons to be nominated. Similar exercise will have to be made well before the meeting date to ensure that they belong to the backward class, eligibility of such persons has to be properly investigated and proposal will have to be brought before the meeting of the Zilla Parishad. You are requested to take necessary action in this regard pending finalisation of the draft amendment rules.

೨೫-೨-೧೯೮೭ರಂದು ನೋಟಿಫಿಕೇಷನ್ ಹೊರಡಿಸಿ, ಇವತ್ತು ನಮಗೆ ಕೊಡುತ್ತಿದ್ದಾರೆ. ಇದನ್ನು ತಾವೇ ಅರ್ಥ ಮಾಡಿಕೊಳ್ಳಿ ಅಧ್ಯಕ್ಷರೆ.

In view of the fact that this entire exercise will have to be completed before the meeting, it may be convened only after all these enquiries are completed. Please also note that nominations are intended to be made before the Mandal Pradhan and Upapradhan elections"

ಅಂದರೆ ಇಲ್ಲಿ ಪ್ರಧಾನ ಮತ್ತು ಉಪ-ಪ್ರಧಾನ ಚುನಾವಣೆಗಿಂತ ಮುಂಚೆ ನಾಮಿನೇಶನ್ ಆಗ ಬೇಕಾಗುತ್ತದೆ. ನಿಮ್ಮ ಟೆಲೆಕ್ಸ್ ಸಂದೇಶ ನೋಡಿದರೆ ನಿಮ್ಮ ಉದ್ದೇಶ ಏನು ಎಂದು ಅರ್ಥವಾಗುತ್ತದೆ. ನಿಮ್ಮ ನಿಯಮಗಳ ಪ್ರಕಾರ, ಪ್ರಜಾಪ್ರಭುತ್ವದ ತತ್ವಗಳಿಗೆ ಅನುಸಾರವಾಗಿ, ಚುನಾಯಿತರಾದ ಸದಸ್ಯರು ಯಾರಿದ್ದಾರೆ, ಅವರು ತಮ್ಮ ಪ್ರಧಾನ ಮತ್ತು ಉಪ-ಪ್ರಧಾನರನ್ನು ಚುನಾಯಿಸಿ ಕೊಳ್ಳುವ ಹಕ್ಕು ಇದೆ, ಅದನ್ನು ನಾಲ್ಕು ವಾರದೊಳಗಾಗಿ ಮಾಡಬೇಕಾಗಿತ್ತು. ಇದನ್ನು ಇವರು ತಡೆಹಿಡಿದು, ಡೆಪ್ಯೂಟಿ ಕಮೀಶನರ್‌ರವರಿಗೆ ಓರಲ್ ಇನ್ಸ್ಟ್ರಕ್ಷನ್ಸ್ ಕೊಟ್ಟು, ಈ ವಿಷಯವಾಗಿ ಟೆಲೆಕ್ಸ್ ಮೆಸೇಜ್ ಕೊಟ್ಟು, ಅಂತೆಯೇ ಕುತಂತ್ರ ಮಾಡಿ, ಹಿಂದಿನ ತಾರೀಖು ಹಾಕಿ ನೋಟಿಫಿಕೇಶನ್ ಇಶ್ಯೂ ಮಾಡಿ, ಪ್ರಜಾಪ್ರಭುತ್ವದ ಕೊಲೆ ಮಾಡಿದ್ದಾರೆ. ಆದುದರಿಂದ ಇದಕ್ಕೆ ಇವೊತ್ತು ಸಂಪೂರ್ಣವಾದಂತಹ ಒಂದು ಚರ್ಚೆ ಇಲ್ಲಿ ನಡೆಯಬೇಕಾಗಿದೆ. ಇನ್ನೂ ಕೆಲವು ವಿಚಾರಗಳನ್ನು ನಾವು ಇಲ್ಲಿ ಈ ಕುರಿತು ಪ್ರಸ್ತಾಪ ಮಾಡಬೇಕಾಗಿರುವುದರಿಂದ ಅದಕ್ಕೆ ತಾವುಗಳು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿ,

ಹಾಗೆಯೇ ತಾವುಗಳು ಖಂಡಿತಾ ನಮಗೆ ಅವಕಾಶವನ್ನು ಒದಗಿಸಿಕೊಡುತ್ತೀರೆಂದು ನಾನು ಅಂದು ಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಈಗಾಗಲೇ ಇಲ್ಲಿ. ಮಾನ್ಯ ಖರ್ಗೆಯವರು ವಿಷಯ ವನ್ನು ಸವಿವರವಾಗಿ ಹೇಳಿದ್ದಾರೆ. ಯಾವ ಯಾವ ಸೆಕ್ಷನ್ ಪ್ರಕಾರ ಹಿಂದುಳಿದ ವರ್ಗಕ್ಕೆ ಸೇರಿರ ತಕ್ಕಂಥಾದನ್ನು ಕೊಡಿ, ಇವರು ಒಂದೊಂದು ಮಂಡಳದಲ್ಲಿ ಸದಸ್ಯರಾಗಿ ಇದ್ದಾರೆ ಅಥವಾ ಇಲ್ಲವೇ ಎನ್ನತಕ್ಕಂಥ ವಿಚಾರ, ಅಥವಾ ಬ್ಯಾಕ್‌ವರ್ಡ್‌ಕ್ಲಾಸ್ ಎನ್ನತಕ್ಕಂಥಾದ್ದು, ಅದರ ಅರ್ಥ ಮತ್ತು ವ್ಯಾಖ್ಯಾನ ಯಾವ ಒಂದು ಸೆಕ್ಷನ್‌ನಲ್ಲಿ ಇದೆ, ಅದು ಈಗಾಗಲೇ ತನ್ನ ಹತೋಟಿ ತಪ್ಪಿದೆ. ಈ ಸರ್ಕಾರಕ್ಕೆ ಏನಾದರೂ ನೈತಿಕ ಶಕ್ತಿ ಇದ್ದಿದ್ದರೆ, ಆ ಸೆಕ್ಷನ್‌ಗೆ ಅಮೆಂಡ್‌ಮೆಂಟ್ ತರಬೇಕಾಗಿತ್ತು. By amending concerned rule and the reby issuing notification explaining who are backward classes or communities...ಎನ್ನತಕ್ಕಂಥ ಮಾತು ಹೇಳುವ ಬದಲು, ಈ ಸದನಕ್ಕೆ ಅದನ್ನು ತರಬೇಕಾಗಿತ್ತು. ಈ ಸದನದಲ್ಲಿ ಮೊದಲು ಪೂರ್ವಭಾವಿ ಯಾಗಿ ಈ ಬಿಲ್ ವಿಚಾರ ಬಂದಾಗ, ಚರ್ಚೆ ಮಾಡುವಾಗ ಈ ವಿಚಾರವೂ ಬಂತು. ಈಗ ಅಮೆಂಡ್‌ ಮೆಂಟ್ ಮಾಡಬೇಕೆನ್ನುವ ವಿಚಾರದಲ್ಲಿ ಅವರ ಪಕ್ಷದಲ್ಲಿಯೂ ಕೂಡ, ಎಂದರೆ ಜನತಾ ಶಾಸಕಾಂಗ ಪಕ್ಷದಲ್ಲಿ, ಚರ್ಚೆಗೆ ಬಂದಾಗಲೂ ಸಹಿತ, ಈ ಬಗ್ಗೆ ಚರ್ಚೆಯಾಗಿದೆ ಎಂದು ಪತ್ರಿಕೆಯಲ್ಲಿನ ಸಂದಿಗ್ಧಗಳಿಂದ ತಿಳಿದಿದೆ. ಅಲ್ಲಿಯೂ ಕೂಡ ಈ ನಾಮಕರಣ ವಿಚಾರವಾಗಿ, ಪರ ಮತ್ತು ವಿರೋಧ ಅಭಿಪ್ರಾಯಗಳು ವ್ಯಕ್ತಪಟ್ಟಿವೆ. ನಮ್ಮ ಮುಂದಿರತಕ್ಕಂಥ ಪ್ರಶ್ನೆ ಇಷ್ಟೇ, ಇವೊತ್ತಿನ ದಿವಸ ಇವರು ಈ ಇಡೀ ಸದನವನ್ನು ನಂಬಿಕೆಗೆ ತೆಗೆದುಕೊಳ್ಳಬೇಕಾಗಿತ್ತು. ie., in respect of relevant provisions under the Zilla Parishad and Mandal Panchayat Act... ಆಕ್ಟ್‌ನಲ್ಲಿ ಒಂದು ತಿದ್ದುಪಡಿ ಮಸೂದೆಯನ್ನು ಇಲ್ಲಿ ತಂದು ಅದನ್ನು ತಿದ್ದುಪಡಿ ಮಾಡಿಸಿ. ಈ ಸದನದ ಒಪ್ಪಿಗೆ ಪಡೆದು, ಆ ರೀತಿಯ ಒಂದು ವ್ಯವಸ್ಥೆ ಮಾಡಬಹುದಾಗಿತ್ತು. ಅದು ಮೆಚ್ಚತಕ್ಕಂಥ ವಿಚಾರವೂ ಆಗಿರುತ್ತಿತ್ತು. ಆದರೆ ಸರ್ಕಾರದವರು ನೇರವಾಗಿರತಕ್ಕಂಥ ದಾರಿಯನ್ನು ಬಿಟ್ಟು, ಸಂತ್ರಿಬಳಿಸಿ ಹೋಗಿ, ಇಡೀ ಸದನದ ಕಣ್ಣಿಗೆ ಮಣ್ಣು ಎರಚತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಹಿಂದುಳಿದ ವರ್ಗದವರನ್ನು ಗುರುತಿಸತಕ್ಕಂಥ ವಿಚಾರ ಇದೆ. ಅದು ಹೊಸ ಸರಕಾರಿ ಆದೇಶದ ಪ್ರಕಾರ, ೬೨-೬೪ ಪರ್ಸೆಂಟ್ of the total population of the Karnataka State since they are considered backward class or backward communities... ಎಂದು ಇರುವುದರಿಂದ, ಆ ಪ್ರಶ್ನೆ ಬರುವ ಹಾಗಿಲ್ಲ. ನನಗನ್ನಿಸುತ್ತದೆ, ವೆಂಕಟಸ್ವಾಮಿ ಆಯೋಗದ ವರದಿಯ ಮೇಲೆ ಅಷ್ಟೊಂದು ಗಲಾಟೆ, ವಿರೋಧಗಳು ಬರದಿದ್ದರೆ ಹೊಸ ಆದೇಶ ಇವರು ಏನು ಮಾಡಿದ್ದಾರೆ, ಅದು ಇರುತ್ತಿರಲಿಲ್ಲ.

ಕೆಲವು ಮಂಡಲ ಪಂಚಾಯಿತಿಗಳಲ್ಲಿ ಈಗಿರುವ ಸೆಕ್ಷನ್ ಪ್ರಕಾರ ಯಾರು ಹಿಂದುಳಿದ ವರ್ಗದವರು ಎಂದು ವಿಚಾರ ಮಾಡಿದಾಗ ಕೆಲವು ವರ್ಗ ಆಯ್ಕೆ ಆಗುವುದು ಸಾಧ್ಯವಿಲ್ಲ ಎಂಬುದು ಗೊತ್ತಾಗುತ್ತದೆ, ಇಡೀ ವೆಂಕಟಸ್ವಾಮಿ ವರದಿಯನ್ನೇ ಸರ್ಕಾರ ಒಪ್ಪಿಕೊಂಡಿದ್ದಿದ್ದರೆ ಈಗಿರುವ ಹಿಂದುಳಿದ ವರ್ಗಗಳ ಪಟ್ಟಿಗೆ ಕೆಲವು ಕೋಮುಗಳನ್ನು ಸೇರಿಸಲು ಅವಕಾಶವಾಗುತ್ತಿರಲಿಲ್ಲ. ಚುನಾವಣೆಗಳಿಗೋಸ್ಕರ ಸರ್ಕಾರ ಹಲವಾರು ಕೋಮುಗಳನ್ನು ಹಿಂದುಳಿದ ಪಟ್ಟಿಗೆ ಸೇರಿಸಿದ ಮೇಲೆ ಹಿಂದುಳಿದವರು ಪ್ರತಿ ಯೊಂದು ಮಂಡಲದಲ್ಲೂ ಇದ್ದಾರೆಂಬುದು ವೇದ್ಯವಾಯಿತು. ಸರಿ, ಚುನಾವಣೆಯೂ ಆಯಿತು. ಪ್ರಜಾಪ್ರಭುತ್ವದ ತಿರುಳೇ ಜನರ ಕೈಗೆ ಅಧಿಕಾರ ಇತ್ಯಾದಿ ಕೂಗುಗಳು, ಭಿತ್ತಿಪತ್ರಗಳು ಎಲ್ಲಾ ಸೇರಿ ಏನೇನೋ ನಡೆದುವು. ಮಾನ್ಯ ನಜೀರ್ ಸಾಬರಿಗೇ ಇದಕ್ಕೆ ಇಷ್ಟೊಂದು ಪ್ರಚಾರ ಅವರಿಗೆ ಸಿಗುತ್ತದೆ ಎಂದು ಗೊತ್ತಿರಲಿಲ್ಲ. ನಿಜ ಹೇಳಬೇಕೆಂದರೆ ಜಿಲ್ಲಾ ಪರಿಷತ್ತಿನಲ್ಲಾಗಲೀ ಮಂಡಲ ಪಂಚಾಯ್ತಿ ಗಳಲ್ಲಾಗಲೀ ನಮ್ಮ ಪಕ್ಷಕ್ಕೆ ಬಹುಮತ ಇರಲಿಲ್ಲ, ಅದು ಅವರಿಗೇ ಇದ್ದದ್ದು ಸ್ಪಷ್ಟವಾಗಿತ್ತು. ಮಂಡಲ ಪಂಚಾಯ್ತಿಗಳಲ್ಲೂ ನಿಮಗೇ ಬಹುಮತ ಇದೆ: ಇಷ್ಟಿದ್ದರೂ ದುರಾಸೆ ಅಧಿಕಾರ ದಾಹದಿಂದ ಜನತೆಯ ಕೈಗೆ ಅಧಿಕಾರ ಕೊಡುವ ಮಾತನ್ನು ಆಡಿದ ಮೇಲೆ ಇವತ್ತು ಅಧಿಕಾರವನ್ನು ಕಿತ್ತುಕೊಳ್ಳ ಬಾರದು. ಒಂದು ಕೈಲಿ ಕೊಟ್ಟು ಇನ್ನೊಂದು ಕೈಲಿ ಕಿತ್ತುಕೊಳ್ಳುವ ವಿಚಾರಧಾರೆಗೆ ತಾವು ಕೈಹಾಕಬಾರದಿತ್ತು. ಇಲ್ಲ, ಇರುವ ಸೆಕ್ಷನ್‌ಗೆ ತಿದ್ದುಪಡಿ ತಂದರೆ ನಮ್ಮ ವಾದವನ್ನು ಆಗ ಇವರು ಕೇಳಬಹುದಾಗಿತ್ತು. ಆದರೆ ಇವರು ಅಧಿಕಾರದ ಒಂದು ತಂತ್ರನ್ನು ಜನರ ಬಾಯಿಗೆ ಹಾಕಿ ಅವರು

ನುಂಗುವುದಕ್ಕೆ ಬಾರದ ಹಾಗೆ ಗಂಟಲು ಹಿಡಿದುಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಅದರ ಅರ್ಥ ಏನೆಂದರೆ ಪ್ರಜಾಪ್ರಭುತ್ವದ ವ್ಯಾಖ್ಯಾನದಂತೆ ಇವರು ಅಧಿಕಾರ ಕೊಡುವ ಮಾತು ಆಡಿದಾಗ ಹಿರಿಯರು ಕಿರಿಯರು ಮಹಿಳೆಯರು ಎಲ್ಲರೂ ಮತದಾನ ಮಾಡಿದರು. ಈಗ ಅವರೆಲ್ಲರ ಮುಖಕ್ಕೆ ಮಸಿ ಬಳಿಯುವ ಪ್ರಯತ್ನದಲ್ಲಿದ್ದೀರಲ್ಲ, ಚುನಾವಣೆ ಕಾಲದಲ್ಲಿ ಆಡಿದ ಮಾತುಗಳು ಏನಾದವು ಎಂದು ಜನ ಅನ್ನುತ್ತಿದ್ದಾರೆ. ಪ್ರಜಾಪ್ರಭುತ್ವ ಎಲ್ಲಿ ತಳಬುಡ ಇಲ್ಲದೆ ಎಲ್ಲಿ ಹೋಯಿತು?

ಅಧ್ಯಕ್ಷರು.— ಪರಿಸಮಾಪ್ತಿ ಹೇಳಿಬಿಡಿ, ಸಾಕು.

ಶ್ರೀ ಎಸ್. ಬಂಗಾರಪ್ಪ.—ನಾನು ವಿವರಣೆಗೆ ಹೋಗುತ್ತಿಲ್ಲ. ಚರ್ಚೆ ಸಮಯದಲ್ಲಿ ಆ ಕೆಲಸ ಮಾಡುತ್ತೇನೆ. ತಮ್ಮ ಮೌಲ್ಯಾಧಾರಿತ ರಾಜಕಾರಣ ಎಲ್ಲಿ ಹೋಯಿತು?

ಶ್ರೀ ಬಿ ಎ. ಜೀವಿಜಯ.—ಪ್ರಜಾಪ್ರಭುತ್ವದ ಮೌಲ್ಯ ಎತ್ತಿಹಿಡಿಯುವುದಕ್ಕಾಗಿ ಕೊಡಗು ಮತ್ತು ಮಂಗಳೂರುಗಳಲ್ಲಿ ನೀವು ಜಿಲ್ಲಾ ಪರಿಷತ್ತಿಗೆ ನಾಮಕರಣ ಮಾಡುವುದಿಲ್ಲವೇ?

ಶ್ರೀ ಎಸ್. ಬಂಗಾರಪ್ಪ.—ಮಾಡುವುದಿಲ್ಲ, ನೀವು ಅಧಿಕಾರ ಕೊಟ್ಟ ತಕ್ಷಣ ಮಾಡಬೇಕು ಎನ್ನುವುದಿಲ್ಲ ನಾವು.

ಶ್ರೀ ಎಂ. ರಘುಪತಿ.—೧೯೮೩–೮೪ರಲ್ಲಿ ತಾವೂ ಕೂಡ ಸದಸ್ಯರಾಗಿದ್ದಿರಿ ಅದು ಇಲ್ಲಿ ಚರ್ಚೆಯಾಗಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ, ಅಲ್ಲಿ ಕೂಡ ಚರ್ಚೆಯಾಯಿತು ಆ ನಂತರ ಕಾಯಿದೆ ಜಾರಿಗೆ ಬಂದಿರುವುದು, ಈ ಹಂತದಲ್ಲಿ ತಾವು ಏಕೆ ಪ್ರಸ್ತಾಪ ಮಾಡಲಿಲ್ಲ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಆವೊತ್ತು ವೆಂಕಟಸ್ವಾಮಿ ಆಯೋಗದ ವರದಿ ಬಂದಿರಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಜೀವಿಜಯರವರು, ನಾವು ಒಂದಿಷ್ಟು ತಿನ್ನುತ್ತೀವೆ ಮಂಗಳೂರು ಕೊಡಗಿನಲ್ಲಿ, ನೀವು ಒಂದಿಷ್ಟು ಮಾಡಿ. ಎನ್ನುವ ಅಭಿಪ್ರಾಯ ಬರುವ ರೀತಿಯಲ್ಲಿ ಇನ್‌ಡೈರೆಕ್ಟ್ ಆಗಿ ಹೇಳಿದ್ದಾರೆ. ಅದು ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾಮಕರಣ ಮಾಡತಕ್ಕಂತಹ ವಿಚಾರಕ್ಕೆ ಸಂಪೂರ್ಣವಾಗಿ ವಿರೋಧಿಸಿದ್ದೇನೆಂದು ಹೇಳಿದ್ದೇವೆ. ನಾಳೆ ನಾಮಕರಣ ಮಾಡಲೇಬೇಕೆಂದು, ಕತ್ತನ್ನು ಹಿಡಿಯುವುದಕ್ಕಾಗುವುದಿಲ್ಲ. ಮಾಡಬೇಕೇ ಇಲ್ಲವೇ ಬಿಡಬೇಕೆಂಬ ಬಗ್ಗೆ ನಮ್ಮ ಪಕ್ಷ ಅಂತಿಮವಾದ ತೀರ್ಮಾನ ಮಾಡುತ್ತದೆ. ಇವತ್ತಿನ ಮಟ್ಟಿಗೆ ಹೇಳುವುದಾದರೆ ನಾಮಕರಣಕ್ಕೆ ವಿರೋಧ ಮಾಡುತ್ತೇನೆ. ನನ್ನ ಮಾತನ್ನು ಮಾನ್ಯ ರಘುಪತಿಯವರು ಪೂರ್ವಭಾವಿಯಾಗಿ ಕೇಳಿದ್ದಿದ್ದರೆ. ಆ ರೀತಿ ಅವರು ಮಾತನಾಡುತ್ತಿರಲಿಲ್ಲ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೇ, ಹಿಂದೆ ಒಂದೊಂದು ಸಹಕಾರ ಸಂಘಗಳಲ್ಲಿ ನಾನಾ ತರಹ ಮಾಡಿದ್ದಾರೆ.

ಶ್ರೀ ಎಂ. ರಘುಪತಿ.—ನೀವು ಇನ್ನೂ ಹೊಸಬರಿದ್ದೀರಿ, ನಾನು ತಿರುಗಿ ಕೊಟ್ಟರೆ ನಿಮಗೆ ತಡೆದುಕೊಳ್ಳುವ ಶಕ್ತಿ ಇಲ್ಲ.

ಶ್ರೀ ಆರ್. ಎನ್. ನಾಯಕ್.—ಒಳ್ಳೆಯದಿದ್ದರೆ ನಾನು ನಿಮ್ಮಿಂದ ಕಲಿಯಲಿಕ್ಕೆ ತಯಾರಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಪೂರ್ವಭಾವಿಯಾಗಿ ನನ್ನ ಮಾತನ್ನು ಕೇಳಿದಿದ್ದರೆ ಇಂತಹ ಅಬ್ಜೆಕ್ಷನ್ ಮಾಡುತ್ತಿರಲಿಲ್ಲ. ಹಿಂದೆ ಹಿಂದುಳಿದವರ ಪ್ರಶ್ನೆ ಇತ್ತು. ವೆಂಕಟಸ್ವಾಮಿ ಆಯೋಗದ ಬಗ್ಗೆ ಇರಲಿಲ್ಲ. ಸರಕಾರದ ಆದೇಶದ ಪ್ರಕಾರ ಒಂದು ಹೊಸ ವ್ಯಾಖ್ಯಾನ ಬಂದಿರತಕ್ಕಂಥಾದ್ದು ಕೂಡ ಇದೆ. ನಿಮಗೆ ಅಧಿಕಾರ ದಾಹ ಎಷ್ಟೊಂದು ಇದೆಯೆಂದರೆ ನಾಮಕರಣ ಮಾಡಿಯಾದರೂ ಕೂಡ ಮಂಡಲಗಳನ್ನು ನಮ್ಮ ವ್ಯಾಪ್ತಿಗೆ ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಈ ಕೆಲಸಕ್ಕೆ ತಾವು ಕೈ ಹಾಕಿದ್ದೀರಿ. ದಿನಾಂಕ ೨೫–೨–೧೯೮೭ ರಂದು gazettee notification was issued. Sir, do you know the position of the Hon'ble Members of this House, whether they belong to this party or that party you have not send the Gazettee notification to each of the Hon'ble Members of this

House. It is our right to have all the notifications issued by the **Government.** ಲಕೋಟೆ ನಮ್ಮ ಮನೆಗೆ ಬರುತ್ತಿತ್ತು. ಈ ನೋಟಿಫಿಕೇಷನ್ ಆಗಿರತಕ್ಕಂಥದ್ದು ಕಳೆದ ತಿಂಗಳ ೨೫ ರಂದು, ನಾವು ಇಲ್ಲೇ ಕುಳಿತಿದ್ದೆವು ನಮಗೆ ಅದರ ಕಾಪಿ ಬರಲಿಲ್ಲ. ಅಧಿವೇಶನ ವಿಲ್ಲದೇ ಇದ್ದಾಗ ನಮ್ಮ ವಿಳಾಸಕ್ಕೆ ಕಳಿಸಿಕೊಡಬೇಕು ಆದರೆ ಇವತ್ತಿನವರೆಗೂ ನಮಗೆ ಬಂದಿಲ್ಲ.

ಈಗ ಏನಾಗಿದೆ? ಇಲ್ಲಿ ನಮ್ಮ ಹಕ್ಕುಚ್ಯುತಿಯಾಗಿದೆ breach of privilege of the House as well as of the hon. Members–we have given the notice in its entirity. ಈ ರೀತಿಯಾಗಿ ನಿಮ್ಮ ಮೇಲೆ ನಾವು ಪ್ರಸ್ತಾಪವನ್ನು ಮಂಡನೆ ಮಾಡಿದ್ದೇವೆ. ನಿಮ್ಮ ನೋಟಿಫಿಕೇಷನ್ ೨೫-೨-೧೯೮೭ಕ್ಕೆ ನೀವು ಮಾಡಿದ ಮೇಲೆ ಅದನ್ನು ನೀವು ಸದಸ್ಯರುಗಳಿಗೆ ತಿಳಿಸದೆ ಹಕ್ಕುಚ್ಯುತಿ ಮಾಡಿದ್ದೀರಿ. ಅದು ಪಬ್ಲಿಕ್‌ಗೂ ಕೂಡಾ ಬರುವ ಹಾಗಿಲ್ಲ. ಇದರ ಬಗ್ಗೆ ಮೂರು ನಾಲ್ಕನ್ನು ಪ್ರಸ್ತಾಪ ಮಾಡಿದ್ದೇನೆ. ಇದರ ಬಗ್ಗೆ ಹಕ್ಕು ಭಾದ್ಯತಾ ಬಗ್ಗೆ ತಮಗೆ ಸೂಚನೆಯನ್ನು ಕಳುಹಿಸಿಕೊಡುತ್ತೇನೆ. ಸಭಾಧ್ಯಕ್ಷರು ನಮ್ಮ ಹಕ್ಕುಗಳನ್ನು ಕಾಪಾಡತಕ್ಕಂಥವರು. ಇವತ್ತು ನಮಗೊಂದು ನೋಟಿಫಿಕೇಷನ್ ಕೂಡಾ ಬಂದಿಲ್ಲ ಎಂದರೆ ಏನು? ತಾವು ಇದರ ಬಗ್ಗೆ ದಯಮಾಡಿ ವಿಚಾರ ಮಾಡಬೇಕಾಗುತ್ತದೆ. ಸರ್ಕಾರದ ಮೇಲೆ ಯಾವ ರೀತಿಯಾದ ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕೆಂಬುದರ ಬಗ್ಗೆ ತಮಗೆ ನೋಟಿಸನ್ನು ಬರೆದು ಕಳುಹಿಸಿಕೊಡುತ್ತೇವೆ. ಸರ್ಕಾರಕ್ಕೆ ಇದರ ವಿವರ ಗೊತ್ತಾದ ಮೇಲೆ ವಿಚಾರ ಮಾಡಿದ್ದಾರೆ. ೫-೩-೧೯೮೭ರಲ್ಲಿ ಅವರು ಮೆಸೇಜನ್ನು ಕಳುಹಿಸಿದ್ದಾರೆ, ಅದಕ್ಕನುಗುಣವಾಗಿ ಪ್ರತಿಯೊಬ್ಬ Secretary to Zilla Parishad, ಅವರು ಏನು ಮಾಡಿದ್ದಾರೆ ಎಂದರೆ ನೆಕ್ಸ್ಟ್ ಡೇ ನೋಟಿಫಿಕೇಷನ್‌ನ್ನು ಕಳುಹಿಸಿಕೊಟ್ಟಿದ್ದಾರೆ. ಅದರ ಕಾಪಿ ಶ್ರೀಮಾನ್ ಡಿ.ಸೌಜ ಅವರ ಹತ್ತಿರ ಇದೆ, ಅದರಲ್ಲಿ ಏನು ಬರೆದಿದ್ದಾರೆಂದರೆ, ಯಾರುಯಾರು ಎರಡೆರಡು ಹೆಸರುಗಳನ್ನು ಕಳುಹಿಸಿಕೊಟ್ಟಿದ್ದಾರೆ, ಕಾನೂನು ಪ್ರಕಾರ, ಸಿದ್ಧತೆಗಳು ಸಂಪೂರ್ಣವಾಗಿ ರೆಡಿ ಇದೆ, ಇವತ್ತು ಸದನ ಸೇರಿರಬೇಕಾದರೆ, ಅದನ್ನು ಬದಿಗೊತ್ತಿ, ಜಿಲ್ಲಾಪರಿಷತ್ತು, ತಹಶೀಲ್ದಾರ್, ಸರ್ಕಾರ ಇವರೇ ವ್ಯವಹಾರಗಳನ್ನು ಮಾಡುವ ಹಾಗಿದ್ದರೆ ಇವತ್ತು ನಮಗೇನು ಹಕ್ಕು ಬರುತ್ತದೆ? ಈ ಸೆಕ್ಷನ್ ಅಮೆಂಡ್‌ಮೆಂಟ್ ಮಾಡತಕ್ಕಂಥ ತಿದ್ದುಪಡಿಯನ್ನು ತಂದಿದ್ದರೆ ಅದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಸಾಧ್ಯವಿರುತ್ತಿತ್ತು. ನೋಟಿಫಿಕೇಷನ್ ಮುಖಾಂತರ ರೂಲ್ ಅಮೆಂಡ್ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದಿರಿ. ಚರ್ಚೆಗೆ ಸದನದಲ್ಲಿ ಬರಲೇಕೂಡದು ಎಂದು ಮಾಡಿದ್ದೀರಿ. Notification: Concerned Hon. Minister for Panchayat Raj ಇವರು he issues the notification listed against his name as per the agenda ಅದಕ್ಕೆ ನಾವೇನು ಯೋಜನೆ ಮಾಡಿದೆವು ಎಂದರೆ, amending that notification. ಅದಕ್ಕೇನಾದರೂ ಅಬ್ಜಕ್ಷನ್ ಇಲ್ಲವಲ್ಲ, ನಾವೇನಾದರೂ ಕೊಡಬೇಕೋ ಎನ್ನುವುದನ್ನು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

೨-೩೦ ಪಿ. ಎಂ.

ಈಗ ಇರತಕ್ಕಂಥ ನಿಯಮಗಳ ಪ್ರಕಾರ ಅವಕಾಶ ಎಲ್ಲಿದೆ? ಸದನದ ಬಾಯಿ ಮುಚ್ಚಿಸತಕ್ಕಂಥ ಕೆಲಸಕ್ಕೆ ಸರ್ಕಾರ ಇವತ್ತು ಕೈಹಾಕಿದೆ. ಇವತ್ತು ನಿಮಗೆ ಏನಾದರೂ ಧೈರ್ಯ ಇದ್ದಿದ್ದರೆ ರೆಲೆವೆಂಟ್ ಪ್ರಾವಿಷನ್ ಮಾಡಿ ಅಮೆಂಡ್‌ಮೆಂಟನ್ನು ತೆಗೆದುಕೊಂಡು ಬನ್ನಿ. ಇವತ್ತು ಇಡೀ ಸದನವನ್ನು ತನ್ಮೂಲಕ ಇಡೀ ರಾಜ್ಯದ ಜನತೆಯನ್ನು ಈ ಮೂಲಕ ಎದುರಿಸಬೇಕಾಗಿತ್ತು. ಚರ್ಚೆಯನ್ನು ಎದುರಿಸಬೇಕಾಗಿತ್ತು. ಅದನ್ನು ಮಾಡದೇ ಕುತಂತ್ರ ಮಾಡಿ, ಜನತೆಯ ಹೆಸರಿನಲ್ಲಿ ಇವತ್ತು ಅಧಿಕಾರವನ್ನು ಕಬಳಿಸತಕ್ಕಂಥ ಕೆಲಸಕ್ಕೆ ನೀವು ಕೈಹಾಕಿದ್ದೀರಿ, ಇವತ್ತು ಅಧಿಕಾರ ವಿಕೇಂದ್ರೀಕರಣ ಇಲ್ಲ. ಕೇಂದ್ರೀಕರಣ ಮಾಡುತ್ತಿದ್ದೀರಿ. ಜನತೆಯ ಕೈಗೆ ಅಧಿಕಾರ ಇಲ್ಲ. ನಮ್ಮ ಕಾಲದಲ್ಲಿ ಎಂದೂ ಕೂಡಾ ಈ ರೀತಿಯ ಕೆಲಸವನ್ನು ನಮ್ಮ ಪಕ್ಷ, ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಎಂದೂ ಕೂಡಾ ಮಾಡಿರಲಿಲ್ಲ. ಇದರ ಬಗ್ಗೆ ಹೇಳುವಂಥ ವಿವರಗಳು ಸಾಕಷ್ಟಿತ್ತು. ತಮ್ಮ ಮನವೊಲಿಸಿ ಈ ವಿಚಾರವನ್ನೆಲ್ಲಾ ಹೇಳಬೇಕಾಗಿತ್ತು. ಆದರೂ ಒಂದು ಅಭಿಪ್ರಾಯವನ್ನು ಈಗಾಗಲೇ ಪ್ರಯತ್ನಪೂರ್ವಕವಾಗಿ ಹೇಳಿದ್ದೇನೆ. ಮಾನ್ಯ ದೇವೇಗೌಡರು ಹೇಳಿದಾಗ ನಾವು ಮತ್ತೊಂದು ಪ್ರಪೋಷನಲ್‌ನ್ನು ಚರ್ಚೆಗೆ ತೆಗೆದುಕೊಂಡು ಬರಬೇಕೆನ್ನುವುದು. ದಯವಿಟ್ಟು ಮಾಡಿ ಆ ತೀರ್ಪನ್ನು ಕೊಡಬೇಕಾಗಿಲ್ಲ.

ಅಧ್ಯಕ್ಷರು.— ನಾನು ಏನನ್ನೂ ಹೇಳಿಲ್ಲ. ಕೋರ್ಟಿನಲ್ಲಿ ಆ ರೀತಿ ತೀರ್ಪು ಕೊಡಬೇಡಿ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ.— ಈ ರೀತಿಯಾದ ಜಡ್ಜ್‌ಮೆಂಟ್ ಕೊಟ್ಟರೆ ನಮಗೆ ಅನ್ಯಾಯವಾಗುತ್ತದೆ. ತಕ್ಕಡಿಯ ವ್ಯವಸ್ಥೆ ಸರಿಯಾಗುವುದಿಲ್ಲ. ಈ ತಕ್ಕಡಿ ಇದೆಯಲ್ಲ, ಅದು ಬಹಳ ಕರೆಕ್ಟಾಗಿ ಇರಬೇಕು.

ಶ್ರೀ ವೇದಾಂತ ಹೆಮ್ಮಿಗೆ.— ತುರ್ತು ಪರಿಸ್ಥಿತಿಯಲ್ಲಿ ತಕ್ಕಡಿಯನ್ನು ಬದಲಾವಣೆ ಮಾಡಿದ್ದಾರೆ...

ನಿಲುವಳಿ ಸೂಚನೆಯನ್ನು ಬಿಟ್ಟರೆ ಅದಕ್ಕಿಂತ ದೊಡ್ಡ ದೊಡ್ಡ ವಿಚಾರ ನಿಮ್ಮ ಅಧಿಕಾರದ ಅವಧಿಯಲ್ಲಿ ಹುಡುಕಿದರೂ ಬೇರೆ ಸಿಗುವುದಿಲ್ಲ. ಬೇರೆ ಸಿಕ್ಕುತ್ತೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ದಯವಿಟ್ಟು ಇದನ್ನು ತೆಗೆದುಕೊಳ್ಳಿ. ನಿಲುವಳಿ ಸೂಚನೆ ಬಗ್ಗೆ ನಿಮ್ಮ ತೀರ್ಪನ್ನು ದಯವಿಟ್ಟು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ ಹೆಚ್. ಪಾಟೀಲ್.— ಸಭಾಧ್ಯಕ್ಷರೇ, ಈ ಮೂವರು ಹಿರಿಯರು ನಿಮ್ಮ ಹೃದಯಕ್ಕೆ ಒಪ್ಪುವ ರೀತಿಯಲ್ಲಿ ತಮ್ಮ ಅನುಮೋದನೆಯನ್ನು ಕೊಟ್ಟಿದ್ದಾರೆ. ನಾನು ಹೆಚ್ಚಿಗೆ ಇದನ್ನು ವಿಪರ್ಯಾಸ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಎದುರಿಗೆ ಇರತಕ್ಕಂಥಹವರ ಎರಡು ಸಂದೇಹಾಸ್ಪದವಾದ ಮಾತುಗಳ ಬಗ್ಗೆ ಮಾತ್ರ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ವಿಷಯ ಗಹನವಾದ್ದು ಎಂದು ಹೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕಿಯವರ ಭಾಷಣವನ್ನು ನಾನು ಕೂಲಂಕಷವಾಗಿ ಅಭ್ಯಾಸ ಮಾಡಿದೆ. ಅವರು ಹೇಳಿದ್ದಾರೆ, ಇದು ಬಹಳ ಉಪಯುಕ್ತವಾದ ಹಾಗೂ ಚರ್ಚಾತ್ಮಕವಾದ ಸಮಸ್ಯೆ ಆಗಿದೆ. ಈ ಚರ್ಚಾತ್ಮಕ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಒಂದು ದಿನ ಇಡೀ ಕೊಟ್ಟರೂ ಯಾವ ಆಭ್ಯಂತರವೂ ಇಲ್ಲ. ಇದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದ್ದರಿಂದ ಈ ವಿಷಯ ಅತ್ಯಂತ ಜರೂರಿ ವಿಷಯದ ದಿನವೆಂದು ತಮಗೆ ಗೊತ್ತಿದೆ. ಒಂದು ತಿಂಗಳ ಅವಧಿಯೊಳಗೆ ಚುನಾವಣೆ ಮಾಡದೇ ಇರುವುದರಿಂದ ಇವೊತ್ತು ಇದು ಒಂದು ಜರೂರಿ ವಿಷಯ ಆಗಿದೆ. ಇದರ ಬಗ್ಗೆ ಚರ್ಚೆಯನ್ನು ನಾವು ಇಲ್ಲಿ ಮಾಡಬಹುದು. ಮತ್ತು ಸಾರ್ವಜನಿಕರಿಗೆ ಇದನ್ನು ಜರೂರಾಗಿ ಮಾಡಬೇಕಾಗಿದೆ ಎಂಬುದನ್ನು ತಾವು ಗಮನಿಸಬೇಕಾದ ವಿಷಯ ಆಗಿದೆ. ಮುಂದೆ ಬರತಕ್ಕ ಪ್ರಶ್ನೆ ಏನೆಂದರೆ, ಈ ನಿಯಮಾವಳಿಗಳನ್ನು ಸಂಬೋಧಿಸಿ ಅಥವಾ ನಿಯಮಾವಳಿಗಳನ್ನು ಪ್ರಶ್ನಿಸಿ, ನಾವು ಈ ವಿಷಯವನ್ನು ಇಲ್ಲಿ ತಂದಿದ್ದೇವೆಂದು ಒಂದು ಸಂದೇಹವನ್ನು ವ್ಯಕ್ತಮಾಡಿದ್ದಾರೆ. ಮಾನ್ಯ ಸಭಾಧ್ಯಕ್ಷರೇ, ನಿಜವಾಗಿಯೂ ಈ ನಿಯಮಾವಳಿಗೂ ಇದಕ್ಕೂ ಸಂಬಂಧ ಇಲ್ಲ. ನಿಯಮಾವಳಿಗಳನ್ನು ತಮಗೆ ಕನ್‌ವಿನ್ಸ್ ಮಾಡುವುದರ ಸಲುವಾಗಿ ಅಲ್ಲಿ ವಿರೋಧಿಸಿದೆ. ಆದರೆ ಮುಖ್ಯವಾದ ವಿಷಯ ಏನು ಅಂದರೆ ಸರ್ಕಾರವು ತನ್ನ ಕಾರ್ಯಕ್ಷಮತೆಯಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ. ಏಕೆ ವಿಫಲಗೊಂಡಿದೆ, ಎಂದರೆ ಒಂದು ತಿಂಗಳೊಳಗೆ ಎಲೆಕ್ಷನ್ ಮಾಡತಕ್ಕ ಅಧಿಕಾರವನ್ನು ಮನ್ನಾ ಮಾಡಿರತಕ್ಕದ್ದು. ಒಂದು ತಿಂಗಳವರೆಗೆ ಚುನಾವಣೆಗಳನ್ನು ಮಾಡದೇ ಬುದ್ಧಿ ಪೂರ್ವಕವಾಗಿ ಮುಂದೂಡಿ ತಮ್ಮ ಪಕ್ಷವನ್ನು ಬೆಳೆಸಿಕೊಂಡು ಮೈನಾರಿಟಿ ಇದ್ದದ್ದನ್ನು ಮೆಜಾರಿಟಿ ಮಾಡಿಕೊಂಡಿದ್ದಾರೆ ಎನ್ನುವುದು ಪ್ರಶ್ನೆ. ಈ ಘಟನೆಗಳನ್ನು ಎದುರು ಪಕ್ಷದವರು ತಂದಿದ್ದಾರೆ. ಅದಕ್ಕಾಗಿ ನನ್ನ ಒಂದು ಜರೂರಿ ಪ್ರಶ್ನೆ ಇದು. ಸಾರ್ವಜನಿಕರ ಹಿತದೃಷ್ಟಿ ಇರತಕ್ಕ ಪ್ರಶ್ನೆ ಇದೆ. ಮತ್ತು ಸರ್ಕಾರವು ತನ್ನ ಕಾರ್ಯಕ್ರಮದಲ್ಲಿ ವಿಫಲವಾಗಿದೆ ಹಾಗೂ ತನ್ನ ಹೊಣೆಗಾರಿಕೆಯನ್ನು ಮರೆತಿದೆ. ಹಕ್ಕು ಭಾಧ್ಯತೆ ಏತಕ್ಕೆ ತರಬೇಕು ಎನ್ನತಕ್ಕಂಥ ಪ್ರಶ್ನೆ ಮಾನ್ಯ ದೇವೇಗೌಡರು ಹೇಳಿದರು, ಕೆಲವು ವಾಕ್ಯಗಳಲ್ಲಿ ಮಾನ್ಯ ನಜೀರ್‌ಸಾಬ್‌ರವರೂ ಸಹ ಹೇಳಿದರು, ನೀವು ಹೇಳತಕ್ಕ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ಅವರಿಗೆ ಅವಕಾಶ ಇದೆ. ಯಾವಾಗ ಅವಕಾಶ ಇದೆ ಅಂದರೆ, ನಿಲುವಳಿ ಸೂಚನೆ ತರಲು ನೀಡಲಾದ ಅನುಮತಿ ಮೇಲೆ ಇದರಲ್ಲಿ ಆಕ್ಷೇಪಗಳು ಬಂದಲ್ಲಿ ಇವರಿಗೆ, ಆಕ್ಷೇಪಣೆಗಳ ಮೊದಲು ನಮಗೆ ಅವಕಾಶ ಇದೆ. ಮೂರು ಸಂಗತಿಗಳನ್ನು ತಾವು ಕನ್‌ವಿನ್ಸ್ ಮಾಡಬೇಕು. ಕನ್‌ವಿನ್ಸ್ ಆದ ಮೇಲೆ ತಾವು ಅಪ್ಪಣೆ ಕೊಟ್ಟರೆ ಅವರಿಗೆ ಮಾತನಾಡಲು ಅವಕಾಶ ಇದೆ. ಎಲ್ಲಾ ಸದಸ್ಯರು ಇಡೀ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಬರುತ್ತದೆ. ಅವರಿಗೆ ಕೊಟ್ಟಂತಹ ಆಕ್ಷೇಪಣೆಗಳು ನಿಲುವಳಿ ಸೂಚನೆ ರೂಲ್‌ನಲ್ಲಿ ಇಲ್ಲ ಎಂದು ಹೇಳಬಹುದು. ಸೆಕ್ಷನ್

೭೩(೨) ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇವೊತ್ತು ಅಧಿಕಾರವನ್ನು ಮೊಟಕುಗೊಳಿಸುವುದು. ಯಾರೂ ಬಾಯನ್ನೇ ತೆಗೆಯಬಾರದು, ಎಂದರೆ ವಿರೋಧ ಪಕ್ಷ ಇರುವುದಾದರೂ ಏತಕ್ಕೆ? ಇದರಲ್ಲಿ ಅನೇಕ ತಪ್ಪುಗಳುಬಂದಮೇಲೆಲೋಪದೋಷಗಳುಇರಲಿ, ಇಲ್ಲದಿರಲಿಇದನ್ನುಈಸಂದರ್ಭದಲ್ಲಿಪ್ರಸ್ತಾಪಮಾಡು ವುದಕ್ಕೆ ಇಚ್ಛೆಪಡುವುದಿಲ್ಲ. ನನಗೆ ಬೇರೆ ಅವಕಾಶ ಇದೆ. ಇದನ್ನು ನೋಡಿದರೆ ಇವೊತ್ತು ನಿಜವಾಗಿ ಸರ್ಕಾರ ಈ ಸದನದಲ್ಲಿ ಗೌರವಯುತವಾಗಿ ಪಾಸ್ ಮಾಡಿರತಕ್ಕ ಕಾನೂನನ್ನು ಮುರಿಯುವುದರ ಸಲುವಾಗಿ ತನ್ನ ಕರ್ತವ್ಯದಲ್ಲಿ ಚ್ಯುತಿ ಆಗಿದೆ. ಈ ಚ್ಯುತಿಯನ್ನು ವಿಚಾರ ಮಾಡಲಿಕ್ಕೆ ಪ್ರಯತ್ನ ಪಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಿಲುವಳಿ ಸೂಚನೆಯನ್ನು ಏತಕ್ಕಾಗಿ ಇದಕ್ಕೆ ಅನುಮತಿ ನೀಡಬೇಕು ಎನ್ನುವ ವಿಷಯದ ಬಗ್ಗೆ ನಮ್ಮ ನಾಯಕರು ಇನ್ನಿತರ ಸದಸ್ಯರುಗಳು ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನು ಮತ್ತೆ ಪ್ರಸ್ತಾಪ ಮಾಡುವುದಿಲ್ಲ. ಕೆಲವು ತಾಂತ್ರಿಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೆಲವು ಮೂಲಭೂತ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಅನುಮತಿ ಕೊಡಬಾರದೆಂದು ಹೇಳಿ ಈಗಾಗಲೇ ಇದರ ಬಗ್ಗೆ ಪೂರ್ವಭಾವಿ ಪ್ರತಿಕ್ರಿಯೆಯನ್ನು ಸರ್ಕಾರದ ಪರವಾಗಿ ವ್ಯಕ್ತ ಮಾಡಿರತಕ್ಕಂಥ ಮಾನ್ಯ ದೇವೇಗೌಡರು, ಮುಖ್ಯವಾಗಿ ತಾಂತ್ರಿಕವಾದಂಥ ಒಂದು ಆಕ್ಷೇಪಣೆಯನ್ನು ಎತ್ತಿದ್ದಾರೆ. ಅದೇನೆಂದರೆ ನಿಲುವಳಿ ಸೂಚನೆ ಎನ್ನತಕ್ಕಂಥದ್ದು, ಯಾವುದಾದರೂ ಒಂದು ನಿರ್ದಿಷ್ಟವಾದ ವಿಷಯದ ಬಗ್ಗೆ ಇರಬೇಕು. ಇದರಲ್ಲಿ ಹಲವಾರು ವಿಷಯಗಳು ಇವೆ ಎನ್ನತಕ್ಕಂಥ ಒಂದೇ ಒಂದು ತಾಂತ್ರಿಕ ರೂಪದ ಆಕ್ಷೇಪಣೆಯನ್ನು ಸರ್ಕಾರದ ಪರವಾಗಿ ಮಾನ್ಯ ಶ್ರೀ ದೇವೇಗೌಡರು ಹೇಳಿಬಿಟ್ಟಿದ್ದಾರೆ. ಇದಕ್ಕೂ ಮುಂಚೆ ತಿದ್ದುಪಡಿ ತಂದುಕೊಂಡರೆ ಬಂದ ನಂತರ ಮೊದಲು ಹೇಳಿದ್ದಾರೆ. ಯಾವುದೋ ನಿರ್ದಿಷ್ಟವಾದ ಘಟನೆ ಇರುತ್ತದೆ ಎನ್ನತಕ್ಕಂಥದ್ದು, ನಿರ್ದಿಷ್ಟ ವಿಚಾರ ಎನ್ನತಕ್ಕಂಥದ್ದು ಮತ್ತು ಸತ್ಯಕ್ಕೆ ದೂರವಾದುದು ಎಂದು ಕಲ್ಪಿಸಿಕೊಳ್ಳುವಂಥದ್ದು ಸರಿಯಲ್ಲ. ಏಕೆಂದರೆ ಪ್ರಪಂಚದಲ್ಲಿ ಒಂದು ಘಟನೆ ತೆಗೆದುಕೊಂಡರೆ ಅನೇಕ ವಿಚಾರಗಳು ಸಮನ್ವಯವಾಗುತ್ತದೆ. ನಾನಿಲ್ಲಿ ನಿಂತಿರುವ ದೃಶ್ಯದ ಒಂದು ಪ್ರತಿಕ್ರಿಯೆ ತೆಗೆದುಕೊಂಡರೆ ಚಲನಚಿತ್ರ ಕ್ಯಾಮರದಲ್ಲಿ ೩೦–೩೫ ಫಿಲಂಗಳು ಆಗದಿದ್ದರೆ ಅದನ್ನು ತೋರಿಸುವುದಿಲ್ಲ. ಆದ್ದರಿಂದ ಇದನ್ನು ಯಾವುದೇ proposition should not be given to its logical absurdity.

ಆದುದರಿಂದ, ರೂಲ್ಸ್ ಇರುವುದು ಏತಕ್ಕೆ. ಯಾವ ವಿಷಯ ಜನರಲ್ಲಿ ಸದನದ ಸದಸ್ಯರಲ್ಲಿ ತುಂಬಾ ಪ್ರಾಮುಖ್ಯತೆಯನ್ನು ಗಳಿಸುತ್ತದೆ. ಹಲವಾರು ರೀತಿಯ ಪರಿಣಾಮಕಾರಿ ವಿಷಯವಾಗಿದೆಯೋ ಅಂತಹ ಒಂದು ವಿಚಾರವನ್ನು, ಬೇರೆ ವಿಚಾರಗಳನ್ನು ಬದಿಗೊತ್ತಿ ಚರ್ಚೆ ಮಾಡಲು ಅವಕಾಶ ಇರಬೇಕು ಎನ್ನತಕ್ಕಂಥದ್ದು. ನಾವು ಈ ದಿವಸ ಏನು ಮಾಡಬೇಕು ಎಂಬ ಬಗ್ಗೆ ಕಾರ್ಯ ಕಲಾಪದಲ್ಲಿ ಸಲಹಾ ಸಮಿತಿ ನಿರ್ಧಾರ ಮಾಡಿರುತ್ತದೆ. ಈ ನಿರ್ಧಾರದಂತೆ ಅನ್ಯಾಯವಾಗಿ ನಡೆದುಕೊಂಡು ಹೋಗಬೇಕಾದುದು ಸಾರ್ವತ್ರಿಕವಾದ ಕ್ರಮವಾಗಿದೆ. ಅದರ ಅಪವಾದವಾಗಿ ಈ ರೂಲ್ ಇರತಕ್ಕದ್ದು. ಸಂದರ್ಭಾನುಸಾರವಾಗಿ ಯಾವುದಾದರೊಂದು ಮಹತ್ವದ, ಜರೂರು ವಿಷಯ ಬಂದಾಗ ಬೇರೆ ವಿಷಯಗಳನ್ನು ವಿಚಾರ ಮಾಡುವುದಕ್ಕೆ ಮೊದಲು ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇರಬೇಕು. ಈಗ ಬಂದಿರತಕ್ಕಂಥ ಪ್ರಶ್ನೆ ಎಂದರೆ ಚುನಾವಣೆ ನಡೆದಿದೆ. ಚುನಾವಣೆ ಫಲಿತಾಂಶ ಹೊರಬಂದಿದೆ. ಅವರು ಗೆದ್ದಿದ್ದಾರೆ. ನಾವು ಕೆಲವು ಕಡೆ ಗೆದ್ದಿದ್ದೇವೆ, ಇನ್ನಿತರ ಪಕ್ಷೇತರರು ಗೆದ್ದಿದ್ದಾರೆ. ಇವತ್ತು ಜನರು ಪ್ರಜಾಪ್ರಭುತ್ವದ, ರೀತಿಯಲ್ಲಿ ಈ ಸಂದರ್ಭದಲ್ಲಿ ತೀರ್ಮಾನ ಕೊಟ್ಟಿದ್ದಾರೆ ಆ ಪ್ರಕಾರವಾಗಿ ಮಂಡಲ ಪಂಚಾಯಿತಿಗಳಲ್ಲಿ ಆಡಳಿತ ಸ್ಥಾಪನೆಯಾಗತಕ್ಕಂಥದ್ದು ಅಗತ್ಯವಿದೆ. ಈ ದೃಷ್ಟಿಯಿಂದ ಈ ಒಂದು ರೀತಿಯ ನಾಮಕರಣಗಳನ್ನು ಮಾಡಿದರೆ, ಈ ಒಂದು ಪರಿಸ್ಥಿತಿಯಲ್ಲಿ ಜನ ಏನೂ ಆದೇಶ ಕೊಟ್ಟಿದ್ದಾರೆ ಅದೆಲ್ಲವೂ ಸಂಪೂರ್ಣವಾಗಿ ವ್ಯತ್ಯಾಸವಾಗುವಂಥ ಗಂಭೀರ ಪರಿಸ್ಥಿತಿ ಇರುವುದರಿಂದ ಇದನ್ನು ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ನಮ್ಮ ಸೂಚನೆಯ ಬಗ್ಗೆ ಪ್ರೈಮಾಫೇಸಿಯಾಗಿ ಹೇಳುವುದಕ್ಕೆ ಅವಕಾಶ ಕೇಳಿದ್ದೇನೆ. ಈ ಬಗ್ಗೆ ನಾನು ಸಾಕಷ್ಟು ತಿಳಿದುಕೊಂಡು ಮಾತನಾಡುತ್ತಿದ್ದೇನೆ. ಸಬ್‌ಸ್ಟ್ಯಾನಿಷಿಯಲ್ ವಿಷಯದ ಬಗ್ಗೆ ಮಾತನಾಡುತ್ತಿಲ್ಲ.

ಅಧ್ಯಕ್ಷರು.—ಈ ಬಗ್ಗೆ ನಾನು ತಿಳಿದುಕೊಂಡಿಲ್ಲವೆಂದು ಹೇಳಿಲ್ಲ. ವೇಳೆ ಆಯಿತು. ಹತ್ತು ನಿಮಿಷಕ್ಕಿಂತ ಹೆಚ್ಚು ಸಮಯ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.--ನನಗೆ ಇನ್ನೊಂದು ಐದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರೇ ನನಗೆ ಒಂದು ತೊಂದರೆ ಇದೆ. ಅದೇನೆಂದರೆ ಮಾನ್ಯ ಕೆ. ಎಚ್. ಪಾಟೀಲ್‌ರವರು ಸ್ವಲ್ಪ ಹೊತ್ತು ಮಾತನಾಡಿದರೆ ನಿಮಗೆ ಅರ್ಥವಾಗುತ್ತದೆ, ಆದರೆ ನಾವು ಎಷ್ಟು ಹೊತ್ತು ಮಾತನಾಡಿದರೂ ನಿಮಗೆ ಅರ್ಥವಾಗುವುದಿಲ್ಲ. ಈ ಒಂದು ತೊಂದರೆ ನಮಗೆ ಇದೆ, ಅದಕ್ಕೆ ಕಾರಣವೇನೋ ಗೊತ್ತಿಲ್ಲ. ಆದ್ದರಿಂದ ತಾವು ಸ್ವಲ್ಪ ಜಾಸ್ತಿ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಜನಗಳು ಕೊಟ್ಟಿರತಕ್ಕಂತಹ ಆದೇಶವನ್ನು ಪಾಲಿಸಿ ಜಿಲ್ಲಾ ಪರಿಷತ್ತಿನಲ್ಲೂ ನಮಗೆ ಮೆಜಾರಿಟಿ ಬಂದಿರತಕ್ಕಂತಹ ಸಂದರ್ಭದಲ್ಲಿ ನಮಗೆ ಬೇಕಾದ ಮಂಡಲಗಳನ್ನು ನಾವು ತೆಗೆದುಕೊಂಡರೆ ಧಕ್ಕೆ ಬರುತ್ತದೆಂದು ಹೇಳುತ್ತೀರಿ. ಆದರೆ ನಿಮಗೆ ಮೆಜಾರಿಟಿ ಇರತಕ್ಕಂತಹ ಕಡೆಗಳಲ್ಲಿ ಏನು ಮಾಡಿದರೂ ಸಹ ಧಕ್ಕೆ ಬರುವುದಿಲ್ಲ. ಈಗ ನಮ್ಮ ಕಡೆ ಇರುವ ವಿಚಾರವನ್ನು ನಾನು ಹೇಳಲಿ, ಬಿಡಲಿ ಮುಂದೆ ತಮಗೆ ಬೇಕಾದವರನ್ನು ಜಿಲ್ಲಾ ಪರಿಷತ್ತಿಗೆ ನಾಮಿನೇಟ್ ಮಾಡಬಹುದು. ಆದರೆ ಈಗ ನೋಡಿದರೆ ಜನಗಳ ಆದೇಶದಲ್ಲಿ ದೊಡ್ಡ ವ್ಯತ್ಯಾಸವಾಗಿದೆ. ಆದ್ದರಿಂದ ಜನರ ದೃಷ್ಟಿಯಿಂದ ಕೊಟ್ಟಿರುವ ಬಹಳ ಮಹತ್ವದ ಜರೂರು ಪ್ರಶ್ನೆ ಇದು. ಈಗ ತಾವು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಏನು ಮಾಡಿದ್ದೀರಿ ಅಂದರೆ ಅದರಲ್ಲಿ that may be prescribed ಎಂದು ಇದೆ. ಪ್ರಿಸ್‌ಕ್ರೈಬ್ಡ್ ಎಂದು ಹೇಳಿದರೆ ನಾವು ರೂಲ್ಸ್ ಪ್ರಕಾರ ಮಾತನಾಡಬಹುದೆಂದು, ಕಾನೂನಿನ ಬಗ್ಗೆ ನಾವು ಆಂಗ್ಲ ಭಾಷೆಯಲ್ಲಿ a letter and spirit ಎಂದು ಏನು ಹೇಳುತ್ತೇವೆ ಅದನ್ನು ನಾವು ಎರಡು ದೃಷ್ಟಿಯಿಂದ ಆಲೋಚನೆ ಮಾಡಬೇಕು. ಏಕೆಂದರೆ ಈಗ ಸಮಸ್ಯೆ ಕೋರ್ಟ್ ಮುಂದೆ ಇದ್ದು ಕಾನೂನಿನ ಬಗ್ಗೆ ಜಿಜ್ಞಾಸೆ ಬಂದಾಗ ಅದರ ಅರ್ಥ ಏನು ಎಂದು ಬಂದಾಗ proposition should not be given to its logical absurdity. ಈ ಪ್ರಶ್ನೆ ಬಂದಾಗ ಅವರು ಕಾನ್‌ಸ್ಟಿಟ್ಯೂಯೆಂಟ್, ಅಸೆಂಬ್ಲಿ ಡಿಬೇಟ್ ಆಯಿತು ಆಗ ಅದನ್ನು ಕೋರ್ಟ್‌ನವರು ನೋಡಬೇಕು. ಈ ಹಿಂದೆ ಅವುಗಳನ್ನು ಯಾವ ದೃಷ್ಟಿಯಿಂದ ಪ್ರಯೋಗ ಮಾಡಿದರು ಎಂದು ನಾವು ನೋಡಿದಾಗ, ಇದನ್ನು ಬಿ.ಸಿ. ಎಂದು ಹೇಳತಕ್ಕಂತಹ ಕಾಲದಲ್ಲಿ ಹಿಂದೆ ಏನು ಪ್ರಾವಿಷನ್ ಇತ್ತು. ಈ ಒಂದು ಕಾನೂನಿನ ವಿರುದ್ಧವಾಗಿ ಹೊಸ ಬಿ.ಸಿ. ನೀವು ಸೃಷ್ಟಿ ಮಾಡಿದ್ದೀರಿ. ಇದರ ಬಗ್ಗೆ ಪ್ರಶ್ನೆ ಮಾಡತಕ್ಕಂತಹ ಆಸೆ ನನಗೆ ಇಲ್ಲ. ಈ ಹೊತ್ತು ನಾನು ಹೇಳುವುದೇನೆಂದರೆ ಒಪ್ಪಿಗೆ ಕೊಟ್ಟಿರತಕ್ಕಂತಹ ಬ್ಯಾಕ್‌ವರ್ಡ್ ಕ್ಲಾಸ್ ಬೇರೆ, ನೀವು ಸೃಷ್ಟಿ ಮಾಡಿಕೊಂಡಿರುವ ಬ್ಯಾಕ್‌ವರ್ಡ್ ಕಲ್ಪನೆ ಕ್ಲಾಸ್ ಬೇರೆ. ಹೀಗೆ ನೀವು ಕಾನೂನಿನ ದುರುಪಯೋಗ ಮಾಡಿ ಒಂದು ಹೊಸದಾದಂತಹ ವಿಶ್ಲೇಷಣೆಗಳನ್ನು ತಾವು ರೂಲ್ಸ್ ಮೂಲಕ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಹಾಗೂ ಈ ಕಾನೂನಿನ ವಿರುದ್ಧವಾಗಿ ಕೆಲಸ ಮಾಡುತ್ತಿದ್ದೀರಿ. ಇದನ್ನು ಬರೀ ತಾಂತ್ರಿಕವಾಗಿ ಹೇಳಿದರೆ ಸಾಲದು, ನಾಳೆ ದಿವಸ ಕೋರ್ಟ್‌ನ ಮುಂದೆ ಪ್ರಶ್ನೆ ಬಂದಾಗಲೂ ಕೂಡ ಇದೇ ತರಹ ಹೇಳುತ್ತೇವೆ. ನೀವು ಬೇಕಾದರೆ ಮಾಡಿಕೊಳ್ಳಿ ಎಂದು ಹೇಳುತ್ತೀರಿ, ಆದರೆ ಇನ್ನು ಮುಂದೆ ಇಂಥ ಕೆಲಸಗಳನ್ನು ನೀವು ಮಾಡಬಾರದೆಂದು ಹೇಳುತ್ತಿದ್ದೇನೆ.

(ಗೊಂದಲ)

ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುತ್ತಿದ್ದೇನೆ ಅಂದರೆ ನಾವು ನೀವು ಶಾಸನ ಬಗ್ಗೆ ಮಾತನಾಡಬೇಕಾದರೆ ಈ ಶಾಸನದ ಬರೀ ಲೆಟರ್ ಹಿಡಿದುಕೊಂಡರೆ ಸಾಲದು. ಅದರಲ್ಲಿ ಸ್ಪಿರಿಟ್ ಕೂಡ ಇರಬೇಕು. ಮತ್ತು ಶಾಸನ ಸಭೆ ಇದಕ್ಕೆ ಯಾವ ರೀತಿಯಿಂದ ಒಪ್ಪಿಗೆ ಕೊಡುತ್ತದೆಂದು ನಾವು ನೋಡಬೇಕು. ಕಾನೂನಿನ ಪ್ರಕಾರ ದಬ್ಬಾಳಿಕೆ ಮಾಡಬೇಕಾದರೆ ತಾವು ಮನಸೋ ಇಚ್ಛೆ ಮಾಡಬಹುದು. ಕಾನೂನನ್ನು ತದ್ವಿರುದ್ಧವಾಗಿ ಅರ್ಥೈಸಿಕೊಂಡು, ಕಾನೂನಿನ ಅಡಿಯಲ್ಲಿ, ಕಾನೂನನ್ನೆ ಉರುಳಿಸತಕ್ಕಂತಹ ಒಂದು ಒಂದು ಕೆಲಸವನ್ನು ಮಾಡುವುದಕ್ಕೆ ನೀವು ಪ್ರಯತ್ನ ಮಾಡುತ್ತಿದ್ದೀರಿ. ಈ ಕೆಲಸವನ್ನು ಏಕೆ ಮಾಡಿಸುತ್ತಿದ್ದೀರಿ? ಇದರ ಅಗತ್ಯವೇನು? ಈ ಸದನ ಒಪ್ಪಿಗೆ ಕೊಟ್ಟಂತಹ ಕಾನೂನಿನ ಅರ್ಥ ಏನು ಎಂಬುದನ್ನು ಕೂಡ ನಾವು ಮತ್ತೊಮ್ಮೆ ಇಲ್ಲಿ ಹೇಳಬೇಕಾಗುತ್ತದೆ. ಆದರೆ ಅದನ್ನು ಬರೀ ಪ್ರಿಲಿಮನೆರಿಯಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ದಯವಿಟ್ಟು ತಾವು ಇದಕ್ಕೆ ಅವಕಾಶ ಕೊಡಬೇಕು. ಆದ್ದರಿಂದ ಇನ್ನು ಮುಂದಾದರೂ ಕೂಡ ಇಂತಹ ಹವ್ಯಾಸವನ್ನು ಸರ್ಕಾರಕ್ಕೆ

ಕೈಬಿಡಬೇಕಾದ ಅಗತ್ಯವಿದೆ. ಮಾನ್ಯ ನಜೀರ್ ಸಾಬ್‌ರವರು ಇಷ್ಟೆಲ್ಲಾ ದೇಶಾದ್ಯಂತ ಜನಶಕ್ತಿ, ಆ ಶಕ್ತಿ, ಈ ಶಕ್ತಿ ಎಂದು ಏನು ಬೊಗಳೆ ಹೊಡೆದುಕೊಂಡು, ಈಗ ಹೋಗಿ ಹೋಗಿ ನೊಣ ತಿಂದು ಏಕೆ ಜಾತಿಯನ್ನು ಕೆಡಿಸಿಕೊಳ್ಳುತ್ತೀರಿ.

(ಗೊಂದಲ)

ನೀವು ದೇಶಾದ್ಯಂತ ಅಖಿಲ ಭಾರತ ಪ್ರವಾಸ ಮಾಡಿ ಪ್ರಚಾರವನ್ನು ಕೊಟ್ಟಿದ್ದೀರಿ. ಇನ್ನು ನಾಮಿನೇಷನ್ ಮೂಲಕ ೧೦೦ ಮಂಡಲಗಳನ್ನು ನೀವು ಹೆಚ್ಚಾಗಿ ತೆಗೆದುಕೊಳ್ಳಬಹುದು. ಆದರೆ ಅದರಿಂದ ಏನಾಗುತ್ತದೆ? ಈ ದೇಶದಲ್ಲಿ ಯಾರು ಮೊಳೆ ಹೊಡೆದುಕೊಂಡು ಶಾಶ್ವತವಾಗಿ ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಆದರಿಂದ ಇದರ ಬಗ್ಗೆ ನಾವು ಆಕ್ಷೇಪಣೆ ಮಾಡಬಹುದು, ನೀವು ಆಕ್ಷೇಪಣೆ ಮಾಡಬಹುದು, ಇದನ್ನು ನಾನು ಬೇಡ ಎಂದು ಹೇಳುವುದಿಲ್ಲ. ಆದ್ದರಿಂದ ದಯವಿಟ್ಟು ಈ ತರಹ ಹವ್ಯಾಸವನ್ನು ಕೈಬಿಡಬೇಕೆಂದು ಹೇಳುತ್ತೇನೆ. ಇಷ್ಟೊಂದು ದೊಡ್ಡ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ನನ್ನ ವಂದನೆಗಳನ್ನು ಅರ್ಪಿಸುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ಸ್ವಲ್ಪ ಸಮಯ ಜಾಸ್ತಿ ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ಟೈಂ ಜಾಸ್ತಿ ಕೊಡುವುದಕ್ಕೆ ಆಗುವುದಿಲ್ಲ. ಈಗಾಗಲೇ ೫ ಮಂದಿ ಹಿರಿಯರಿಗೆ ೫ ನಿಮಿಷಗಳನ್ನು ಕೊಟ್ಟಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ೫ ನಿಮಿಷ ಜಾಸ್ತಿ ಟೈಂ ಕೊಡಿ. ಅವರೇನೋ ಹೊಸ ವಿಚಾರವನ್ನು ಹೇಳುತ್ತಾರೆ.........

(ಗೊಂದಲ)

ಅಧ್ಯಕ್ಷರು.—ಸಮಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲ............

(ಗೊಂದಲ)

ಶ್ರೀ ಕೆ. ಬಿ. ಕೋಳಿವಾಡ.—ಅಧ್ಯಕ್ಷರೇ, ನಾನು ಬೇರೆ ವಿಚಾರವನ್ನು ಹೇಳುತ್ತೇನೆ, ೫ ನಿಮಿಷಗಳು ನನಗೆ ಕಾಲಾವಕಾಶ ಕೊಡಿ..............

(ಗೊಂದಲ)

ಅಧ್ಯಕ್ಷರು.—ಅವಕಾಶ ಕೊಡುವುದಿಲ್ಲ. ಈಗಾಗಲೇ ೫ ಜನ ಮುಖಂಡರಿಗೆ ಇದರ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಮತ್ತು ನಾನು ಕಾನೂನು ಬಲ್ಲವರನ್ನು ಕೇಳಿದ್ದೇನೆ. ಆದುದರಿಂದ ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ, let them not persist. ಇದರಲ್ಲಿ ೨೦ ಮಂದಿ ಸಹಿ ಮಾಡಿದ್ದಾರೆ, ಹಾಗಾದರೆ ಆ ೨೦ ಮಂದಿಗೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಯಾರು ಯಾರು ಅದರಲ್ಲಿ ಸಹಿ ಮಾಡಿದ್ದಾರೆ ಅವರಿಗೆಲ್ಲರಿಗೂ ಸಹ ಮಾತನಾಡಲಿಕ್ಕೆ ಅವಕಾಶ ಕೊಡಿ ಎಂದು ಕೇಳುವುದಿಲ್ಲ. ಶ್ರೀ ಕೋಳಿವಾಡ್‌ರವರಿಗೆ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಟ್ಟರೆ ಅದರಿಂದ ತಮಗೂ ಅನುಕೂಲವಾಗುತ್ತದೆ. ಅವರಿಗೊಬ್ಬರಿಗೆ ಕೊಡಿ.

ಅಧ್ಯಕ್ಷರು.—ಮೊದಲು ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಎಸ್. ಬಂಗಾರಪ್ಪ.—ತಾವು ಇಷ್ಟು ಬಿಗಿ ಹಿಡಿದುಬಿಟ್ಟರೆ ಹೇಗೆ ?

ಅಧ್ಯಕ್ಷರು.—ನಾನು ನಿಮಗೆ ಮೊದಲೇ ಹೇಳಿದ್ದೇನೆ, ಈಗಾಗಲೆ ೫ ಜನ ಮುಖಂಡರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಇನ್ನು ಯಾರಿಗೂ ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನೀವು ಎಷ್ಟು ಹೇಳಿದರೂ ಕೇಳುವುದಿಲ್ಲ ಎಂದರೆ ಹೇಗೆ? ಮೊದಲು ಮಂತ್ರಿಗಳು ಉತ್ತರ ಹೇಳಲಿ. ಆ ಮೇಲೆ ನಾನು ಡಿಸೈಡ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ಇಷ್ಟು ಸಿಟ್ಟಿಗೆದ್ದರೆ ಹೇಗೆ ? ಇಷ್ಟು ಆವೇಶವಾದರೆ ಹೇಗೆ ?

ಅಧ್ಯಕ್ಷರು.—ನನಗೇನೂ ಆವೇಶ ಇಲ್ಲ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡು ವುದಿಲ್ಲ ಎಂದರೆ ಕೇಳುವುದಿಲ್ಲವಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ಇಷ್ಟು ಬಿಗಿ ಹಿಡಿದರೆ ಹೇಗೆ, ನಾವು ಬಿಗಿ ಹಿಡಿಯಬೇಕು, ಅದಕ್ಕಿಂತ ಹೆಚ್ಚಾಗಿ ನೀವೇ ಬಿಗಿ ಹಿಡಿಯುತ್ತಿದ್ದೀರಿ ?

ಅಧ್ಯಕ್ಷರು.—ತಾವೂ ವಕೀಲಿ ಮಾಡಿದ್ದೀರಿ, ಅವರೂ ವಕೀಲಿ ಮಾಡಿದ್ದಾರೆ, ನಾನೂ ಸಹ ವಕೀಲಿ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ............

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರಿಕಾರ್ಡ್.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಎಲ್ಲರನ್ನೂ ಕುಳಿತುಕೊಳ್ಳಿ ಎಂದು ಹೇಳಿರಿ. ಮೊದಲು ಮಂತ್ರಿಗಳು ಉತ್ತರ ಹೇಳಲಿ, ಆಮೇಲೆ ಮಾತನಾಡುವುದಕ್ಕೆ ಅವರು ಅವಕಾಶ ಕೊಡು ವುದಕ್ಕೆ ಕೇಳಲಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಕೋಳಿವಾಡ್‌ರವರು ಮಾತನಾಡು ವುದಕ್ಕೆ ಅಪರೂಪಕ್ಕೆ ಕೇಳಿದ್ದಾರೆ. ಅವರು ನಿಮ್ಮ ಜಿಲ್ಲೆಯವರೇ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಅದು ಸಾಧ್ಯವಿಲ್ಲ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಎಲ್ಲರಿಗೂ ಅವಕಾಶ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅವರಿಗೂ ಕೊಡಿ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ತಾವು ಈಗಾಗಲೇ ಅವರಿಗೆಲ್ಲರಿಗೂ ಹೇಳಿದ್ದೀರಿ. ಶ್ರೀನಿವಾಸ್‌ರವರು ಮತ್ತೆ ಕೆಲವರು ಇದರ ಬಗ್ಗೆ ಮಾತನಾಡಿದ್ದಾರೆ. ಆದರೂ ಇನ್ನೂ ಎಲರೂ ಮಾತನಾಡಬೇಕು ಎಂದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಒಂದೊಂದು ಸಾರಿ ನಾವು ಹಾಗೆ ಹೇಳಬೇಕಾಗುತ್ತದೆ.

(ಗೊಂದಲ)

೩–00 ಪಿ. ಎಂ.

ಶ್ರೀ ಎಸ್. ಬಂಗಾರಪ್ಪ.—ಒಂದೊಂದು ಸಲ ನೀವು ಹೆಚ್ಚಿನ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬಂಗಾರಪ್ಪನವರು ಬೇರೆಯವರಿಗೆ ಮಾತನಾಡಲು ಅವಕಾಶ ಕೊಡಬೇಕೆಂದು ಹೇಳುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕೊಟ್ಟರೆ ತಪ್ಪೇನು ?

ಶ್ರೀ ಜಿ. ಎಂ. ಕಾನಡೆ.—ನನಗೆ ಕೇವಲ ೩ ನಿಮಿಷಗಳಷ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಮೊದಲು ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ಜಿ. ಎಂ. ಕಾನಡೆ.—ನಾವು ಹೇಳುವುದನ್ನು ತಾವು ಏತಕ್ಕೆ ಕೇಳಬಾರದು ? ಕೇವಲ ಆ ಕಡೆಯುವರು ಹೇಳುವುದನ್ನು ಮಾತ್ರ ನಾವು ಕೇಳಬೇಕೆ ? ನನಗೆ ಕೇವಲ ೩ ನಿಮಿಷಗಳ ಕಾಲಾವಕಾಶ ಮಾಡಿಕೊಡಿ, ನಾನು ಕೇವಲ ಸಾರಾಂಶಗಳನ್ನು ಮಾತ್ರ ಹೇಳಿ ಮುಗಿಸುತ್ತೇನೆ.

ಅಧ್ಯಕ್ಷರು.—ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ ?

ಶ್ರೀ ಎಂ. ರಾಮಪ್ಪ.—ನೀವು ಆ ಕಡೆಯುವರಿಗೆ ಮಾತ್ರ ಅವಕಾಶ ಕೊಟ್ಟರೆ ಹೇಗೆ ? ಈ ಕಡೆಯುವರು ಏನು ಹೇಳುತ್ತಾರೆಂಬುದನ್ನು ಸಹ ಕೇಳಿ ?

ಅಧ್ಯಕ್ಷರು.—ನನಗೆ ಎರಡು ಕಡೆಯುವರು ಸಹ ಬೇಕು. ಅವರು ಬೇಕು, ಇವರು ಬೇಡ ಎಂಬ ಪ್ರಶ್ನೆಯೇ ಇಲ್ಲ. ಈಗ ನಾನು ೫ ಜನರಿಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದೇನೆ. ಆದ್ದರಿಂದ ಈಗ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳೋಣ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಮಾನ್ಯ ಬಂಗಾರಪ್ಪನವರು ಒಂದು ಸಲಹೆ ಕೊಟ್ಟಿದ್ದಾರೆ. ಏನೆಂದರೆ, ಮಾನ್ಯ ಕೋಳಿವಾಡ್ ಅವರು ಹೊಸ ಕಾನೂನಿನ ಅಂಶವೊಂದನ್ನು ಹೇಳಬೇಕೆಂದಿರುವುದರಿಂದ ಅವರಿಗೆ ಮಾತ್ರ ಮಾತನಾಡಲು ಅವಕಾಶ ಮಾಡಿಕೊಡಿ ಎಂದು. ಆ ಸಲಹೆಯನ್ನು ನಾನು ಒಪ್ಪಿದ್ದೇನೆ. ಅವರು ಸಲಹೆ ಕೊಡಲಿ, ನಂತರ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳ ಅಭಿಪ್ರಾಯದ ಪ್ರಕಾರ ಮಾನ್ಯ ಕೋಳಿವಾಡ್ ಅವರು ಈಗ ಮಾತನಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ನಾನು ಇಡೀ ಸದನದ ಪರವಾಗಿ ಮಾನ್ಯ ಕೋಳಿವಾಡ್ ಅವರಿಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಂಡಾಗ ನೀವು ಅವಕಾಶ ಕೊಡಲಿಲ್ಲ. ಈಗ ನೀವು ಮಾನ್ಯ ಮಂತ್ರಿಗಳ ಒಪ್ಪಿಗೆ ಪಡೆದು ಅವಕಾಶ ಕೊಟ್ಟಿದ್ದೀರಿ. ನಮ್ಮ ಹಕ್ಕನ್ನು ನಾವು ಇಲ್ಲಿ ಚಲಾವಣೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾವು ನಿಮ್ಮ ಒಪ್ಪಿಗೆ ಪಡೆದು ಇಲ್ಲಿ ಮಾತನಾಡುತ್ತೇವೆ. ಇದಕ್ಕೆ ಅವರ ಒಪ್ಪಿಗೆ ಏತಕ್ಕೆ ಬೇಕು ?

ಅಧ್ಯಕ್ಷರು.—ವಿರೋಧಪಕ್ಷದ ನಾಯಕರು ಸಹ ಮಾನ್ಯ ಕೋಳಿವಾಡ್ ಅವರು ಮಾತನಾಡಲಿ ಎಂದು ಹೇಳಿದ್ದರಿಂದ ನಾನು ಒಪ್ಪಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸಭೆಗೆ ನೀವೇ ಸುಪ್ರೀಂ. ಆದ್ದರಿಂದ ನೀವೇ ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನಾನು ವಿರೋಧಪಕ್ಷದವರ ಮತ್ತು ಸರ್ಕಾರದ ಅಭಿಪ್ರಾಯ ತೆಗೆದುಕೊಂಡ ನಂತರ ನನ್ನ ತೀರ್ಮಾನವನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಬಿ. ಕೋಳಿವಾಡ್ (ರಾಣೇಬೆನ್ನೂರು).—ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಗೌರವಾನ್ವಿತ ಸದಸ್ಯರು ಕೊಟ್ಟಂಥ ನಿಲುವಳಿ ಸೂಚನೆ ಬಗ್ಗೆ ತಮ್ಮ ಮನವೊಲಿಸುವುದರ ಸಲುವಾಗಿ ಹೇಳಿದ್ದಾರೆ. ಅನೇಕ ಹಿರಿಯ ಸದಸ್ಯರೂ ಸಹಿತ ತಮ್ಮ ಮನವೊಲಿಸುವುದಕ್ಕೋಸ್ಕರ ಈ ನಿಲುವಳಿ ಸೂಚನೆ ಯೋಗ್ಯವಾಗಿದೆ ಎನ್ನತಕ್ಕಂಥಾದ್ದನ್ನು ಅನೇಕ ರೀತಿಯಲ್ಲಿ ಹೇಳಿದ್ದಾರೆ. ನಾನೂ ಸಹಿತ ತಮ್ಮ ಮನವೊಲಿಸುವುದರ ಸಲುವಾಗಿ ಸರ್ಕಾರಕ್ಕೆ ಕೆಲವೊಂದು ಅಧಿಕಾರ ಇಲ್ಲದೇ ಇದ್ದರೂ ಸಹಿತ ಅಧಿಕಾರ ಮೀರಿ ಸರ್ಕಾರ ಕೆಲಸ ಮಾಡಿದೆ ಎನ್ನತಕ್ಕಂಥದ್ದನ್ನು ತಮ್ಮ ನಜರಿಗೆ ತರಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಈಗ ಸೆಕ್ಷನ್ ೫(೩) ಕೆಳಗೆ ಸರ್ಕಾರಕ್ಕೆ ನಾಮಿನೇಷನ್ ಮಾಡತಕ್ಕ ಹಕ್ಕು ಇದೆ. ಇದನ್ನು ಈ ಸದನ ಒಪ್ಪಿಕೊಂಡಿದೆ. ಅದರ ಬಗ್ಗೆ ನಾವು ಯಾರೂ ಆಕ್ಷೇಪಣೆ ಮಾಡುತ್ತಾ ಇಲ್ಲ. ಬಿಲಾಂಗಿಂಗ್‌ಟು ಬ್ಯಾಕ್‌ವರ್ಡ್‌ಕ್ಲಾಸ್ ಯಾರೇ

ಸದಸ್ಯರು ಆರಿಸಿ ಬರದೇ ಹೋದಲ್ಲಿ ಇಬ್ಬರನ್ನು ನಾಮಕರಣ ಮಾಡತಕ್ಕಂಥ ಅಧಿಕಾರ ಜಿಲ್ಲಾ ಪರಿಷತ್‌ಗೆ ಇದೆ ಎನ್ನತಕ್ಕಂಥಾದ್ದು ಸೆಕ್ಷನ್ ೫ (೩) ಕೆಳಗೆ ಇದೆ. ಇದನ್ನು ನಾವು ಯಾರೂ ವಿರೋಧ ಮಾಡುತ್ತಾ ಇಲ್ಲ, ಆಕ್ಷೇಪಣೆ ಮಾಡುತ್ತಾ ಇಲ್ಲ, ಆದರೆ ಬ್ಯಾಕ್‌ವರ್ಡ್‌ಕ್ಲಾಸ್ ಎಂದರೆ ಯಾರು ಎನ್ನುವುದಕ್ಕೆ ವಿಶ್ಲೇಷಣೆಯನ್ನು ಸರ್ಕಾರ ಕೊಡುವಾಗ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಕೆಲಸ ಮಾಡಿದೆ ಮತ್ತು ಲೋಪದೋಷ ಮಾಡಿದೆ ಎನ್ನತಕ್ಕಂಥಾದ್ದನ್ನು ಹೇಳಲಿಕ್ಕೆ ನಾನು ಇಚ್ಛೆಪಡುತ್ತಾ ಇದ್ದೇನೆ. ಸೆಕ್ಷನ್ ೪೩ ಕೆಳಗೆ ಪ್ರಧಾನ ಮತ್ತು ಉಪ ಪ್ರಧಾನರ ಚುನಾವಣೆ ಆಗಬೇಕಾದರೆ ೪ ವಾರಗಳ, ಯಾವ ೪ ವಾರ Within 4 weeks from the date of commencement of the term of office. What is the term of office ? The term of office begins from the date of publication of the list.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಖರ್ಗೆಯವರು ಹೇಳಿದ್ದಾರೆ.

ಶ್ರೀ ಕೆ. ಬಿ. ಕೋಳಿವಾಡ್.—ನಾನು ಇನ್ನೂ ಹೇಳುತ್ತಾ ಇದ್ದೇನೆ. ಆಮೇಲೆ ಈ ೨೮೪ರ ಕೆಳಗೆ Power to make rules ಎನ್ನತಕ್ಕಂಥಾದ್ದನ್ನು ಗವರ್ನಮೆಂಟ್‌ಗೆ ಬಿಟ್ಟುಕೊಟ್ಟಿದೆ. Under Section 284, the Government may, after previous publication by Notification in the Official Gazette may make rules to carry out the purposes of this Act. The Government is empowered to make rules and accordingly the Government has enacted rules on 4-3-1986. It has acted and framed rules as per Rule 2, sub-clause (ii). Then, what is that Backward Class ? ಎನ್ನತಕ್ಕಂಥಾದ್ದನ್ನು ಇಲ್ಲಿ ಹೇಳಿದ್ದಾರೆ. ಆದರೆ ಒಮ್ಮೆ ಮಾಡಿದಂಥ ರೂಲನ್ನು ಅಮೆಂಡ್‌ಮೆಂಟ್ ಮಾಡತಕ್ಕಂಥ ಅಧಿಕಾರವನ್ನು ೨೮೪ ರಕೆಳಗೆ ಈ ಸದನ ಸರ್ಕಾರಕ್ಕೆ ಕೊಟ್ಟಿಲ್ಲ. ಇದನ್ನು ಸಬ್‌ಸ್ಟಿಟ್ಯೂಟ್ ಮಾಡಿ ಬೇರೆ ಒಂದು ಕ್ಲಾಸನ್ನು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಮೀನಿಂಗ್ ಕೊಡತಕ್ಕಂಥಾದ್ದನ್ನು ಮಾಡತಕ್ಕಂಥ ಒಂದು ಅಧಿಕಾರವನ್ನು ನಾವು ಸರ್ಕಾರಕ್ಕೆ ಕೊಟ್ಟಿಲ್ಲ. ಒಮ್ಮೆ ರೂಲ್ಸ್ ಮಾಡದೆ ಈ ಸದನ ಅಧಿಕಾರ ಕೊಟ್ಟಿದೆ ಅದರ ದುರುಪಯೋಗವನ್ನು ಮಾಡಲಿಕ್ಕೆ ಅವರು ಪ್ರಯತ್ನ ಮಾಡುತ್ತಾ ಇದ್ದಾರೆ. Once the Government has already acted by giving definition to Backward Class that means Backward Communities, Backward Castes. ಎಂದು ಕೊಟ್ಟ ಮೇಲೆ ಅದನ್ನು ಅಮೆಂಡ್ ಮಾಡತಕ್ಕಂಥ ಅಧಿಕಾರವನ್ನು ಈ ಸದನ ಸರ್ಕಾರಕ್ಕೆ ಕೊಟ್ಟಿಲ್ಲ. ಈ ಸದನ ಕೊಡದೆ ಇರತಕ್ಕಂಥ ಅಧಿಕಾರವನ್ನು ಸರ್ಕಾರ ದುರುಪಯೋಗಪಡಿಸಿಕೊಂಡು ಈ ಅಮೆಂಡ್‌ಮೆಂಟ್ ಮಾಡಿದೆ ಈ ಅಮೆಂಡ್ ಮಾಡಿದ್ದು ಕಾನೂನು ಬಾಹಿರವಾದಂಥಾದ್ದು, ಈ ಸದನದ ಮನ್ನಣೆಯನ್ನು ಪಡೆಯದೇ ಇರತಕ್ಕಂಥಾದ್ದು. ಅದಕ್ಕೋಸ್ಕರ ಈ ಅಡ್ಜರ್ನ್‌ಮೆಂಟ್ ಮೋಷನ್ ತಂದಿರತಕ್ಕಂಥಾದ್ದು. ಇದು ಒಂದು ದುರುದ್ದೇಶ ಪೂರಿತವಾದಂಥಾದ್ದು. ಯಾವ ಯಾವ ಮಂಡಲದಲ್ಲಿ ಏನು ಮಾಡುತ್ತಾ ಇದ್ದಾರೆ, ಜಿಲ್ಲಾಪರಿಷತ್‌ನಲ್ಲಿ ಏನು ಮಾಡುತ್ತಾ ಇದ್ದಾರೆ. ತಮಗೆ ಕನ್‌ವಿನ್ಸ್ ಮಾಡುವುದರಸಲುವಾಗಿ ನಾವು ಇನ್ನೂ ಹೇಳತಕ್ಕಂಥಾದ್ದು ಇದೆ. ಆದ್ದರಿಂದ ಇದಕ್ಕೆ ಪರ್ಮಿಷನ್ ಕೊಡಬೇಕು.

(ಗೊಂದಲ)

ಶ್ರೀ ಕೆ. ಬಿ. ಕೋಳಿವಾಡ್.— ನೋಟಿಫಿಕೇಷನ್ ದುರುದ್ದೇಶಪೂರ್ವಕವಾಗಿ ಮಾಡಿದ್ದಾರೆ ಎಂದು ತಮಗೆ ಹೇಳಬೇಕಾಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಸನ್ಮಾನ್ಯ ಅಧ್ಯಕ್ಷರೇ. ಪ್ರತಿಪಕ್ಷದ ಮಿತ್ರರು ತಂದಿರತಕ್ಕಂಥ ನಿಲುವಳಿ ಸೂಚನೆಗೆ ತಾವು ಹೆಚ್ಚು ಅವಕಾಶ ಕೊಟ್ಟು ಕೇಳಿದ್ದೀರಿ. ಸರ್ಕಾರದ ಪರವಾಗಿ ಮತ್ತೊಮ್ಮೆ ತಮ್ಮ ಮುಖಾಂತರ ಸ್ಪಷ್ಟಪಡಿಸುತ್ತೇನೆ. ಅವರು ತಂದಿರತಕ್ಕ ನಿಲುವಳಿ ಯಾವ ನಿಯಮಕ್ಕೂ ಹೊಂದದ ನಿಲುವಳಿ ಸೂಚನೆಯಾಗಿದೆ. ೬೧ನೇ ನಿಯಮದ ಪ್ರಕಾರ ಅದು ಯಾವುದಾದರೂ ಒಂದು ವಿಷಯಕ್ಕೆ ಸಂಬಂಧ ಪಟ್ಟಿರಬೇಕು. ಈ ಸದನದಲ್ಲಿ ಇದೇ ಅಧಿವೇಶನದಲ್ಲಿ ಚರ್ಚೆಯಾಗದಂಥ ವಿಷಯವಾಗಿರಬೇಕೆಂದು ನಿಯಮದಲ್ಲಿದೆ. ಈ ವಿಷಯವನ್ನು ಇದೇ ಸದನದಲ್ಲಿ ಚರ್ಚೆ ಮಾಡಿದ್ದೇವೆ.

ನಾಮಿನೇಷನ್ ಬಗ್ಗೆ ಚರ್ಚೆ ಮಾಡಿದ್ದೇವೆ. ನಾನೇ ಉತ್ತರ ಕೊಟ್ಟಿದ್ದೇನೆ. ರೆಕಾರ್ಡ್ ತರಿಸಿ ನೋಡ ಬಹುದು. ಆ ಸಂದರ್ಭದಲ್ಲಿ ಶ್ರೀಮತಿ ನಾಗರತ್ನಮ್ಮನವರು ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾಲ್ಕು ವಾರದೊಳಗೆ ಚುನಾವಣೆ ಮಾಡಬೇಕೆಂದು ಇದೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಒಂದು ವಿಷಯಕ್ಕೆ ಅನೇಕ ವಿಷಯಗಳು ಅಂಟಿಕೊಳ್ಳ ಬಹುದು, ಇದು ಅನೇಕ ವಿಷಯಗಳಿಗೆ ಅಂಟಿದ ವಿಷಯವಾಗಿರುವುದರಿಂದ ನಿಲುವಳಿ ಸೂಚನೆ ಯಾಗುವುದಿಲ್ಲ. ನಾನು ಒಂದು ಮಾತನ್ನು ಹೇಳಬೇಕಾಗಿದೆ. ಇವರು ಜನತಂತ್ರದ ಬಗ್ಗೆ ಬಹಳ ವ್ಯಾಖ್ಯಾನ ಮಾಡಿದ್ದಾರೆ. "ಸುಬ್ಬರಾಯನ ಕಟ್ಟೆ ಭಾಷಣ" ಕೇಳಿ ಕೇಳಿ ನನಗೆ ಸಾಕಾಗಿದೆ. ಇದು ಸುಬ್ಬರಾಯನ ಕಟ್ಟೆಯಲ್ಲ. ಮಾಡಿದಂಥ ಕಾಯಿದೆಗಳಿಗೆ ಗೌರವ ಕೊಟ್ಟರೆ ಜನತಂತ್ರ ಬದುಕುತ್ತದೆ.

SRI S. BANGARAPPA.— I take strong objection to this. You cannot compare the speeches of the hon'ble Members here to the speeches made at Subbarayana Katte.

ಶ್ರೀ ಅಬ್ದುಲ್ ನಜೀರ್ ಸಾಬ್.— ನೀವು ಹೇಳಿದರೆ ಮಾತ್ರ ಜನತಂತ್ರ ನಾವು ಹೇಳಿದರೆ ಜನತಂತ್ರವಾಗುವುದಿಲ್ಲವೆ....

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.— ನೀವು ಹೇಳಿದ್ದಕ್ಕೆ ಉತ್ತರ ಕೊಡಬೇಡವೆ ? ಕೇಳುವಂಥ ಸೌಜನ್ಯ ಇದ್ದರೆ ಕುಳಿತುಕೊಳ್ಳಬಹುದು, ಇಲ್ಲದೇ ಇದ್ದರೆ ಎದ್ದು ಹೋಗ ಬಹುದು.

ಶ್ರೀ ಧರ್ಮಸಿಂಗ್.— ಎದ್ದು ಹೋಗಿ ಎಂದು ಹೇಳುವುದಕ್ಕೆ ನೀವು ಯಾರು ? Who are you ?

SRI ABDUL NAZIR SAB.— I have expressed my opinion. Why do you obstruct me ?

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ಉತ್ತರ ಕೇಳುವುದಕ್ಕೆ ಅವರಿಗೆ ತಾಳ್ಮೆ ಇಲ್ಲ, ಜನತಂತ್ರದ ಬಗ್ಗೆ ಭಾಷಣ ಮಾಡುತ್ತಾರೆ. ಸುಬ್ಬರಾಯನ ಕಟ್ಟೆ ಭಾಷಣ ಎಂದು ಹೇಳಿದ್ದರಲ್ಲಿ ತಪ್ಪು ಏನಿದೆ?

(ಗೊಂದಲ)

ಶ್ರೀ ಎಂ. ರಘುಪತಿ.—ರಾಷ್ಟ್ರಪತಿಯವರ ಬಗ್ಗೆ ಅಗೌರವದಿಂದ ನಡೆದುಕೊಳ್ಳುವಂಥ ಜನ ನೀವು, ಮಾತನಾಡುವುದಕ್ಕೆ ನಿಮಗೆ ಹಕ್ಕು ಇಲ್ಲ.

(ಗೊಂದಲ)

ಶ್ರೀ ಎಂ. ರಘುಪತಿ.—ರಾಷ್ಟ್ರಪತಿಯವರಿಗೆ ಅವಮಾನ ಮಾಡಿದವರು ನೀವು. ನಾವುಗಳೆಲ್ಲಾ ತಲೆ ತಗ್ಗಿಸಬೇಕು.

ಅಧ್ಯಕ್ಷರು.—ಈಗ ಯಾರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಎಲ್ಲರೂ ಕುಳಿತುಕೊಳ್ಳಿ....

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಪ್ರಜಾತಂತ್ರದ ಬಗ್ಗೆ ನಿಮಗೆ ಗೌರವ ಇದೆಯೆ?

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ನಾವು ಏನು ಹೇಳುತ್ತಿದ್ದೇವೆ ಅಂದರೆ......

(ಗೊಂದಲ)

ಅಧ್ಯಕ್ಷರು. —ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ......

ಅಧ್ಯಕ್ಷರು.—ಈ ಕಡೆಯುವರು ಆಗಲಿ, ಆ ಕಡೆಯುವರು ಆಗಲಿ, ಯಾರೂ ಗೌರವ ಇಲ್ಲದೇ ಇರುವ ಮಾತುಗಳನ್ನು ಹೇಳಬಾರದು. ಅನ್ನಬಾರದನ್ನು ಅಂದಿದ್ದರೆ ಅದನ್ನು ನಾನು ನೋಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಅವರು ಏನು ಹೇಳಿದ್ದಾರೆ ಅಂದರೆ ...

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಈ ಕಡೆಯುವರು ಮಾತನಾಡಿರಲಿ, ಆ ಕಡೆಯುವರು ಮಾತನಾಡಿರಲಿ ನಾನು ಅದನ್ನು ತರಿಸಿ ನೋಡುತ್ತೇನೆ.

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ಅದರ ಅರ್ಥ ನಿಮಗೆ ಗೊತ್ತಿಲ್ಲ. ಸುಬ್ಬರಾಯನ ಕಟ್ಟೆ ಭಾಷಣ ಎಂದು ಏತಕ್ಕೆ ಹೇಳಿದೆ ಎಂದರೆ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ. – ಮಾನ್ಯ ಸದಸ್ಯರು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಾರೆ.

(ಗೊಂದಲ)

ಅಧ್ಯಕ್ಷರು.—ಆಡಬಾರದಂಥ ಮಾತು ಯಾರೂ ಆಡಿದ್ದರೂ ಅದನ್ನು ನಾನು ತರಿಸಿ ನೋಡಿ ಎಕ್ಸ್‌ಪಂಜ್ ಮಾಡುತ್ತೇನೆ.

(ಗೊಂದಲ)

SRI M, RAGUPATHY.— Why do you want to expunge ? You can not expunge it Hon. Speaker cannot be dictated by them.

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಎಕ್ಸ್‌ಪ್ಲೈನ್ ಮಾಡುತ್ತೇನೆ. ದಯುಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಕ್ಕೆ ನಾವು ಯಾವ ಡಿಕ್ಷನರಿ ನೋಡಬೇಕು ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮೈಸೂರು ನಗರದಲ್ಲಿ ಸುಬ್ಬರಾಯನ ಕಟ್ಟೆ ಎಂದು ಇದೆ....

(ಗೊಂದಲ)

ಅಧ್ಯಕ್ಷರು.—ದಯುಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಅವರು ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಷ್ಟೊಂದು ಎಮೋಷನ್‌ನಲ್ಲಿ ಮಾತನಾಡುವ ಅವಶ್ಯಕತೆ ಇಲ್ಲ.

(ಗೊಂದಲ)

ಅಧ್ಯಕ್ಷರು.—ಈಗ ಯಾರು ಮಾತನಾಡಿದರೂ ಅದು ರೇಕಾರ್ಡ್‌ಗೆ ಹೋಗುವುದಿಲ್ಲ. ಸುಬ್ಬರಾಯನಕಟ್ಟೆ ಇರಬಹುದು, ಸಂತೇಕಟ್ಟೆ ಇರಬಹುದು ಅದನ್ನು ನಾನು ತರಿಸಿ ನೋಡುತ್ತೇನೆ, ಮಾನ್ಯ ಸದಸ್ಯರು ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಸುಬ್ಬರಾಯನ ಕಟ್ಟೆ ಎನ್ನುವುದು...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಸೌಮ್ಯವಾದ ಮಾತಿನಲ್ಲಿ ಹೇಳಿದರೆ ಕೇಳೋಣ. ಆದರೆ ಕೇಳುವುದಕ್ಕೆ ಇಷ್ಟವಿಲ್ಲದಿರುವವರು ಹೊರಗಡೆ ಹೋಗಲಿ ಮಂತ್ರಿಗಳು ಬಾಯಲ್ಲಿ ಏತಕ್ಕೆ ಹಾಗೆ ಹೇಳಬೇಕು. ಹೊರಗೆ ಹೋಗಿ ಎಂದು ಹೇಳುವವರು ನೀವು...

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಪ್ಪು ಕಲ್ಪನೆ ಬೇಡ. ಮಾನ್ಯ ಸದಸ್ಯರಿಗೆ ನೋವಾಗಿದೆ ಎಂದರೆ ನಿಜಕ್ಕೂ ನಾನು ವಿಷಾದಪಡುತ್ತೇನೆ.

(ಗೊಂದಲ)

MR. SPEAKER.—Nothing will go on record*** ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ನೀವು ಹಿಂದೆ ಹೇಳಿದ್ದಿರಿ....

(ಗೊಂದಲ)

(At this stage Sri N. M. Adyanthaya shown a gesticulation to the Hon. Member of the ruling party).

(ಆಗ ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ವೆಲ್‌ನೊಳಕ್ಕೆ ಪ್ರವೇಶಿಸಿ ಮಾನ್ಯ ಸಭಾಧ್ಯಕ್ಷರ ಪೀಠದತ್ತ ವೇಗವಾಗಿ ಧಾವಿಸಿದರು. ಇವರ ಹಿಂದೆ ಮಾನ್ಯ ಸದಸ್ಯರಾದ ರಮೇಶ್ ಕುಮಾರ್‌ರವರೂ, ಮಾನ್ಯ ಜಯಕುಮಾರ್‌ರವರೂ ಮತ್ತು ಇನ್ನೂ ಕೆಲವು ಮಾನ್ಯ ಸದಸ್ಯರು ವೆಲ್‌ನೊಳಕ್ಕೆ ಪ್ರವೇಶಿಸಿದರು.)

(ಗೊಂದಲ)

ಅಧ್ಯಕ್ಷರು.—ಈಗ ಸಭೆಯನ್ನು ೧೫ ನಿಮಿಷಗಳ ಕಾಲ ಮುಂದೂಡಿದ್ದೇನೆ.

(ಸಭೆಯು ೩ ಗಂಟೆ ೨೫ ನಿಮಿಷಗಳಾಗಿದ್ದಾಗ ಮುಂದೂಡಲ್ಪಟ್ಟಿತು.)

ಅಸಭ್ಯ ವರ್ತನೆಗೆ ಶ್ರೀ ಎನ್. ಎಂ. ಆಡ್ಯಂತಾಯರವರ ಸದನ ಪ್ರವೇಶಕ್ಕೆ ನಿಷೇಧದ ಪ್ರಸ್ತಾಪ

(ಸಭೆಯು ೪–೨೦ಕ್ಕೆ ಪುನಃ ಸೇರಿತು.)

(ಅಧ್ಯಕ್ಷರು ಪೀಠದಲ್ಲಿದ್ದರು)

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಗಿನಂತೆ ಒಂದು ನಿರ್ಣಯವನ್ನು ಮಂಡಿಸುತ್ತೇನೆ. "ಮಾನ್ಯ ಸದಸ್ಯರಾದ

*** Not recorded as ordered by the Chair.